# ಪ್ರಸಾದ

**ಸಂಪುಟ 30 ಸಂಚಿಕೆ 4** **ಜುಲೈ-ಆಗಸ್ಟ್ 2015**

ಸಂಪಾದಕ

**ಪ್ರೊ. ಮಲೆಯೂರು ಗುರುಸ್ವಾಮಿ**

**ಜೆಎಸ್ಎಸ್ ಮಹಾವಿದ್ಯಾಪೀಠ**

ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ

ಮೈಸೂರು 570 004



**ಸಂಸ್ಥಾಪಕರು**

'ಶ್ರೀಮನ್ಮಹಾರಾಜ ರಾಜಗುರುತಿಲಕ' ಪರಮಪೂಜ್ಯ ಲಿಂಗೈಕ್ಯ
**ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು**

**ಅಧ್ಯಕ್ಷರು**

**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು**

**ಸಂಪಾದಕ ಸಮಿತಿ**

ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು
ಶ್ರೀ ಬಿ.ಎನ್. ಬೆಟ್‌ಕೆರೂರ್
ಶ್ರೀ ಎಸ್.ಪಿ. ಮಂಜುನಾಥ್
ಶ್ರೀ ಎಸ್. ನಂಜುಂಡಯ್ಯ
ಡಾ. ಎನ್.ಎಸ್. ತಾರಾನಾಥ
ಡಾ. ಓ.ಎಲ್. ನಾಗಭೂಷಣಸ್ವಾಮಿ
ಡಾ. ಎನ್.ಎಂ. ತಳವಾರ್
ಶ್ರೀಮತಿ ಪ್ರೀತಿ ಶುಭಚಂದ್ರ
ಪ್ರೊ. ಮಲೆಯೂರು ಗುರುಸ್ವಾಮಿ (ಸಂಪಾದಕ)

---

ಸಾಹಿತ್ಯ, ಸಂಸ್ಕೃತಿ, ಕಲೆ, ಧರ್ಮ, ವಿಜ್ಞಾನ, ಶಿಕ್ಷಣ, ಆರೋಗ್ಯ
ಮುಂತಾದ ವಿಚಾರಪೂರ್ಣ ಲೇಖನಗಳಿಗೆ ಸ್ವಾಗತವಿದೆ.
ಬರಹಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರವು

## ಪರಿವಿಡಿ


| | |
|---|---|
| ಸಂಪಾದಕೀಯ | 5 |
| ಗುರುವಾಣಿ | 9 |
| ತಂತ್ರಜ್ಞಾನ ಮತ್ತು ಸಮಾಜ ಪರಿವರ್ತನೆ<br>**ಡಾ. ಎ.ಪಿ.ಜೆ. ಅಬ್ದುಲ್ ಕಲಾಂ** | 9 |
| ಶ್ರೇಷ್ಠ ಮಾನವತಾವಾದಿ, ವಿಜ್ಞಾನಿ-ಸಂತ, ಅಪ್ರತಿಮ ಶಿಕ್ಷಕ,<br>ಭವ್ಯ ಭಾರತದ ಕನಸಿಗ, ಮಹಾನ್ ಕರ್ಮಯೋಗಿ ಕಲಾಂ<br>**ಕೆ. ನರಸಿಂಹ** | 21 |
| ಸರಳ, ಸಜ್ಜನ ಕಲಾಮ್<br>**ಎಂ. ಅಬ್ದುಲ್ ರೆಹಮಾನ್ ಪಾಷ** | 32 |
| ಭಾರತವನ್ನು ಬೆಳಗಿದ ಕಲಾಂ ಎಂಬ ಚೇತನ<br>**ಮುಜಫರ್ ಹುಸೇನ್** | 38 |
| ಕಲಾಂ ಒಡನಾಟ, ಒಳನೋಟ ಬಿಚ್ಚಿಟ್ಟ ಪ್ರಣಬ್<br>**ಡಿ. ಉಮಾಪತಿ** | 42 |
| ಕಲಾಂ ಕನಸಿನ ಸುಜಲಾಂ, ಸುಫಲಾಂ<br>**ನಾಗೇಶ್ ಹೆಗಡೆ** | 45 |


**ಮುಖಪುಟ ಚಿತ್ರ**

ನವದೆಹಲಿಯ ರಾಷ್ಟ್ರಪತಿ ಭವನದ ಮೊಗಲ್ ಗಾರ್ಡನ್‌ನಲ್ಲಿ ಹಿಂದಿನ ರಾಷ್ಟ್ರಪತಿಯಾಗಿದ್ದ ಡಾ. ಎ.ಪಿ.ಜೆ. ಅಬ್ದುಲ್ ಕಲಾಂರವರು ಪೂಜ್ಯ ಶ್ರೀಗಳವರೊಡನೆ ಸಮಾಲೋಚಿಸುತ್ತಿರುವುದು

ಡಾ. ಕಲಾಂ ಪದತಲಕ್ಕೆ ಕಂಬನಿ ಮಾಲೆ 50
**ಡಾ. ಸಿ. ನಾಗಣ್ಣ**

ನಿಮ್ಮೆಲ್ಲರಿಗೂ ಶುಭವಾಗಲಿ... 54

ಕಲಾಂ ಸರ್ ಜೊತೆಗೆ ಕೊನೆಯ ದಿನ.... 57
**ಸೃಜನ್ ಪಾಲ್ ಸಿಂಗ್**

ಅನಾಥ ಬಾಲಕಿಯ ಎಚ್ಐವಿ ಪೀಡಿತ ಸಹೋದರರಿಗೆ ಸಹಾಯ ಹಸ್ತ ನೊಂದವರಿಗೆ ಸ್ಪಂದಿಸಿದ ಸಹೃದಯಿ ಡಾ. ಕಲಾಂ 62

ವಿಜ್ಞಾನಿಯಾಗಿ ಮೆರೆದ ಸಾಧನೆಗಳು 63

ಕಲಾಂ ಗೆ ಸಲಾಂ 67
**ಡಾ. ಗೀತಾ ಮಹದೇವಪ್ರಸಾದ್**

# ಸಂಪಾದಕೀಯ

**'ಪ್ರ**ಸಾದ' ಪತ್ರಿಕೆಯ ಚರಿತ್ರೆಯಲ್ಲಿ ಇದೊಂದು ಅಪರೂಪದ ಸಂಚಿಕೆ. ಮೊತ್ತ ಮೊದಲ ಬಾರಿಗೆ ಇಡೀ ಸಂಚಿಕೆಯನ್ನು ಮಾಜಿ ರಾಷ್ಟ್ರಪತಿ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಅವರ ಬದುಕಿನ ವಿವರಗಳಿಗೆ ಮೀಸಲಾಗಿರಿಸಲಾಗಿದೆ. ಈ ಹಿಂದೆ ಯಾವ ಸಂಚಿಕೆಯೂ, ಜಗದ್ಗುರು ಡಾ. ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಜಯಂತಿಯ ವಿಶೇಷ ಸಂಚಿಕೆಯನ್ನು ಹೊರತುಪಡಿಸಿ, ಹೀಗೆ ವ್ಯಕ್ತಿಕೇಂದ್ರಿತವಾಗಿ ಪ್ರಕಟವಾಗಿಲ್ಲ. ಇದಕ್ಕೆ ಕಾರಣವೂ ಸ್ಪಷ್ಟ. ಡಾ. ಕಲಾಂರವರು ವಿಶ್ವಮಾನವ ಪ್ರಜ್ಞೆಯ ವ್ಯಕ್ತಿ; ವಿಜ್ಞಾನಿ-ತತ್ವಜ್ಞಾನಿ; ದೇಶದ ಪ್ರಥಮ ಪ್ರಜೆಯಾಗಿದ್ದುಕೊಂಡೂ ಅವರ ಚಿಂತನೆಯೆಲ್ಲವೂ ಕೊಟ್ಟಕೊನೆಯ ಶ್ರೀಸಾಮಾನ್ಯನ ಉತ್ಥಾನದ ಬಗೆಗೆ, ಅಪರ ವಯಸ್ಸಿನಲ್ಲಿಯೂ ಅತ್ಯುತ್ಸಾಹದಿಂದ ಪುಟಿಯುವ, ಕನಸುಗಳ ವಾರಸುದಾರರಾದ ಯುವ ಪೀಳಿಗೆಯ ಬಗೆಗೆ, ಕ್ಷಿಪಣಿಯನ್ನು ಆಗಸಕ್ಕೆ ಹಾರಿಸುವ ಜೊತೆಜೊತೆಗೇ ದೇಶವಾಸಿಗಳ ಹೃದಯದಾಳಕ್ಕೆ ಇಳಿಯುವ ನಿರಂತರ ತುಡಿತ.

ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ನಾವು ನಿತ್ಯವೂ ಧರ್ಮ ಜಾತಿ ಪ್ರಾದೇಶಿಕ ಸಂಘರ್ಷಗಳನ್ನು ಕಾಣುತ್ತಿದ್ದೇವೆ. ಪ್ರಪಂಚದ ಬೇರೆ ಬೇರೆ ಭಾಗಗಳಲ್ಲಿ ಧರ್ಮದ ಹೆಸರಿನಲ್ಲಿ ಮನುಷ್ಯರ ಮಾರಣಹೋಮ ನಡೆಯುತ್ತಿದೆ. ಪ್ರಾಯಃ ಇದೆಲ್ಲವೂ ಮನುಷ್ಯನ ಭಾವನೆಗಳು ಕೇವಲ ಮೇಲ್ಪದರದ ಆವುಟವೆಂದೇ ಅನಿಸುತ್ತದೆ. ಆಳದಲ್ಲಿ, ಅರ್ಥಾತ್ ಚಿತ್ತದ ಸ್ತರದಲ್ಲಿ, ಎಲ್ಲರೂ ಬಹುಶಃ ಸಾತ್ವಿಕರೇ ಆಗಿರುತ್ತಾರೆ. ಇದಕ್ಕೆ ಸ್ಪಷ್ಟ ಉದಾಹರಣೆ ಎಂದರೆ ಡಾ. ಕಲಾಂ ಅವರು ನಿಧನರಾದ ಮರುದಿನ ಸಾಮಾಜಿಕರ ಮುಖದಲ್ಲಿ ಎದ್ದು ಕಾಣುತ್ತಿದ್ದ ವಿಷಾದಭಾವ. ಸಾರ್ವಜನಿಕ ಸ್ಥಳಗಳಲ್ಲಿ ಆಟೋ ಚಾಲಕರು, ಕೂಲಿ ಕಾರ್ಮಿಕರ ಸಂಘಟನೆಯವರು, ಹಾದಿಬದಿಯ ಪೆಟ್ಟಿಗೆ ಅಂಗಡಿಯವರು, ತರಕಾರಿ ಮಾರುವವರು, ಸಣ್ಣಪುಟ್ಟ ಸಂಘಸಂಸ್ಥೆಗಳವರು – ಹೀಗೆ ಸಮಾಜದ ಎಲ್ಲ ವರ್ಗಗಳ ಜನ ಕಲಾಂ ಅವರ ಭಾವಚಿತ್ರವನ್ನು ಇಟ್ಟು ಗೌರವ ಸಲ್ಲಿಸುತ್ತಿದ್ದುದು, ದಾರಿಹೋಕರೂ ಕೂಡ ಆ ಭಾವಚಿತ್ರದ ಮುಂದೆ ಒಂದು ಗಳಿಗೆ ನಿಂತು ಗೌರವ ಸೂಚಿಸುತ್ತಿದ್ದ ದೃಶ್ಯ ಅಚ್ಚರಿ ಮೂಡಿಸುವಂತಿತ್ತು. ಪ್ರಾಯಃ ಭಾರತದ ಯಾವ ರಾಷ್ಟ್ರಪತಿಗೂ ಜನಸಮುದಾಯ ಈ ರೀತಿಯಲ್ಲಿ ಗೌರವ ತೋರಿಸಿದಂತಿಲ್ಲ. "ನಾನು ನಿಧನನಾದ ನಂತರ ಸರ್ಕಾರಿ ರಜೆ ಘೋಷಿಸಬೇಡಿ; ನನ್ನ ಮೇಲೆ ಗೌರವವಿದ್ದರೆ

ಒಂದು ಗಂಟೆ ಹೆಚ್ಚು ಕೆಲಸ ಮಾಡಿ" ಎಂದ ಅವರ ಮಾತಿಗನುಗುಣವಾಗಿ ಅನೇಕ ಕಡೆ ನೌಕರವರ್ಗದವರು ಒಂದು ಗಂಟೆ ಹೆಚ್ಚು ಕೆಲಸ ಮಾಡಿ ತಮ್ಮ ಗೌರವ ಸಲ್ಲಿಸಿದರು.

ಡಾ. ಕಲಾಂ ಅಂತಹವರು ರಾಷ್ಟ್ರಪತಿಯಾದದ್ದು ಒಂದು ಐತಿಹಾಸಿಕ ಆಕಸ್ಮಿಕ ಇರಬಹುದು. ಆದರೂ ಅದೊಂದು ಅಭೂತಪೂರ್ವ, ಮಹತ್ವಪೂರ್ಣ ಘಟನೆ. "ಡಾ. ಎಸ್. ರಾಧಾಕೃಷ್ಣನ್ ಅವರು ತತ್ವಜ್ಞಾನಿಗಳಾಗಿದ್ದರು. ಕಲಾಂ ಅವರು ವಿಜ್ಞಾನಿ-ತತ್ವಜ್ಞಾನಿಯಾಗಿದ್ದರು. ಇದು ಈ ರಾಷ್ಟ್ರದ ಪುಣ್ಯ" ಎನ್ನುವ ಮಾತನ್ನು ನೊಯಿಡಾದಲ್ಲಿ ಜೆಎಸ್ಎಸ್ ತಾಂತ್ರಿಕ ಶಿಕ್ಷಣಸಂಸ್ಥೆಯ ಉದ್ಘಾಟನೆಯ ಸಂದರ್ಭದಲ್ಲಿ ಪೂಜ್ಯ ಶ್ರೀ ಸಿದ್ದೇಶ್ವರ ಮಹಾಸ್ವಾಮಿಗಳವರು ಆಡಿದ ಮಾತು ಗಮನಾರ್ಹ. ಭವ್ಯವಾದ ರಾಷ್ಟ್ರಪತಿ ಭವನವಿದ್ದರೂ ಅದರ ಮಗ್ಗುಲಲ್ಲೇ ನಿರ್ಮಿಸಿಕೊಂಡ 'ಥಿಂಕಿಂಗ್ ಹಟ್' ನಲ್ಲಿ ಕುಳಿತು ಭವ್ಯ ಭಾರತದ ಕನಸನ್ನು ಕಂಡಂತಹ, Vision 2020 ಯೋಜನೆಯನ್ನು ರೂಪಿಸಿದ ಡಾ. ಕಲಾಂ ಅವರು ತಮ್ಮ ಪ್ರೀತಿಯ 'ಕಾಯಕ'ದಲ್ಲಿ ನಿರತರಾಗಿದ್ದಾಗಲೇ ಕೊನೆಯುಸಿರೆಳೆದದ್ದು ದೇಶವಾಸಿಗಳಿಗೆ ಅವರು ನೀಡಿದ ಕರೆ!

ಸುತ್ತೂರು ಶ್ರೀಮಠಕ್ಕೂ ಡಾ. ಕಲಾಂ ಅವರಿಗೂ ಒಂದು ಅವಿನಾಭಾವ ಸಂಬಂಧವಿತ್ತು. ಶ್ರೀಮಠದ ಸಂಸ್ಥೆಗಳಿಗೆ ಬರಲು ಅವರು ಯಾವಾಗಲೂ ತುಂಬಾ ಸಂತೋಷಪಡುತ್ತಿದ್ದರು. ಹಿರಿಯ ಜಗದ್ಗುರುಗಳವರ ದೂರದರ್ಶಿತ್ವದ ಬಗ್ಗೆ, ಅವರು ಹುಟ್ಟುಹಾಕಿದ ಜ್ಞಾನಾನ್ನದಾಸೋಹದ ಬಗ್ಗೆ ಅವರು ಮೆಚ್ಚುಗೆಯನ್ನು ವ್ಯಕ್ತಪಡಿಸಿ, ಇಂತಹ ಧಾರ್ಮಿಕ ಸಂಸ್ಥೆ ಭಾರತದಲ್ಲಿಯೇ ವಿರಳ ಎನ್ನುತ್ತಿದ್ದರು.

ಆಗಸ್ಟ್ 29 ರಂದು ರಾಜೇಂದ್ರ ಶ್ರೀಗಳವರ ಜಯಂತಿ. 'ಪ್ರಸಾದ' ಸಂಚಿಕೆ ರಾಜೇಂದ್ರ ಶ್ರೀಗಳಿಗೆ ಮುಡಿಪಾಗುವ ಬದಲಿಗೆ ಡಾ. ಕಲಾಂ ರವರ ನೆನಪಿನ ಸಂಚಿಕೆಯಾಗಿ ರೂಪುಗೊಂಡಿದೆ. ಮೇಲುನೋಟಕ್ಕೆ ಇದೊಂದು ರೀತಿ ಆಕಸ್ಮಿಕ ಎನಿಸಿದರೂ, ಇವರೀರ್ವರೂ ಉನ್ನತ ಕಾಯಕ ತಪಸ್ವಿಗಳು. ಕ್ಷೇತ್ರ ಬೇರೆಯಾದರೂ ಅವರುಗಳ ಮಾರ್ಗ ಮತ್ತು ಗುರಿ ಒಂದೇ. ಅದು ಸಮಾಜ ಶ್ರೇಷ್ಠತೆಯತ್ತ ಸಾಗಲಿ, ಅಹಿಂಸೆ, ಶಾಂತಿ ಅದರ ಪಥವಾಗಲಿ, ಸಕಲ ಜೀವಾತ್ಮರಿಗೂ ಒಳಿತಾಗಲಿ ಎನ್ನುವುದು. ನಮ್ಮ ಚೈತನ್ಯದೊಳಗೆ ರಾಜೇಂದ್ರ ಶ್ರೀಗಳು, ಡಾ. ಕಲಾಂ ಅವರುಗಳು ನೆಲೆಸಿ ನಮ್ಮನ್ನು ಒಳಿತಿನ ದಾರಿಯಲ್ಲಿ ಸದಾ ಮುನ್ನಡೆಸಲಿ.

**ಮಲೆಯೂರು ಗುರುಸ್ವಾಮಿ**
ಸಂಪಾದಕ

# ಗುರುವಾಣಿ

**ಮ**ನುಷ್ಯ ಎಷ್ಟು ದಿನ ಬದುಕಿದ ಎನ್ನುವುದು ಮುಖ್ಯವಲ್ಲ, ಹೇಗೆ ಬದುಕಿದ ಎನ್ನುವುದಷ್ಟೇ ಮುಖ್ಯ. ಆದರೂ ಹುಟ್ಟು ಸಾವುಗಳ ನಡುವಿನ ಕಾಲಮಾನವನ್ನು ವಿಸ್ತರಿಸಿಕೊಳ್ಳಲು ಅನೇಕ ತೆರನಾದ ಕಾಯಕಲ್ಪಗಳನ್ನು ಸಂಶೋಧಿಸಲಾಗಿದೆ. ಆದರೆ ಈ ಕಾಯಕಲ್ಪಕ್ಕೆ ಮಹತ್ವದ ಕಾರಣವಿರಬೇಕು. ಇದರಿಂದ ಸುದೀರ್ಘವಾದ ಆಯಸ್ಸು ಲಭಿಸಿದರೂ ಅದರ ಸಫಲತೆ ಇರುವುದು ಸಮುದಾಯಕ್ಕೆ ಮಾಡಿದ ಫಲದಾಯಕ ಕೆಲಸಗಳಿಂದ ಮಾತ್ರ; ಸ್ವಕೇಂದ್ರಿತ ಸುಖ ಸಂತೋಷದಿಂದಲ್ಲ. ಯಾವುದೇ ಸತ್ಕ್ರಿಯೆಗಳನ್ನು ಮಾಡದವರ ಬದುಕು ಎಷ್ಟೇ ದೀರ್ಘಾವಧಿಯದಾಗಿದ್ದರೂ ಅದು ವ್ಯರ್ಥ. ಅಂತಹವರು ಇಲ್ಲಿಯೂ ಸಲ್ಲುವುದಿಲ್ಲ, ಅಲ್ಲಿಯೂ ಸಲ್ಲುವುದಿಲ್ಲ. ಅಪರೂಪಕ್ಕೆ ಕೆಲವರು ಸುದೀರ್ಘ ಕಾಲ ಬದುಕಿ, ನಿರಂತರ ಕ್ರಿಯಾಶೀಲರಾಗಿ, ತಮ್ಮೆಲ್ಲ ಶಕ್ತಿಯನ್ನೂ ಸಮಾಜಕ್ಕೆ ಧಾರೆಯೆರೆಯುತ್ತಲೇ ಕೊನೆಯುಸಿರೆಳೆಯುತ್ತಾರೆ. ಅವರ ಉಚ್ಛ್ವಾಸ ನಿಃಶ್ವಾಸಗಳಲ್ಲಿ ಸಹ ಸಾತ್ವಿಕತೆ, ಸಾಧನಾಶೀಲತೆಯೇ ಕಂಡುಬರುತ್ತದೆ. ಅಂತಹ ಅಪರೂಪದ ವ್ಯಕ್ತಿತ್ವ ಹೊಂದಿದ್ದವರು ಡಾ. ಎ.ಪಿ.ಜೆ. ಅಬ್ದುಲ್ ಕಲಾಂ. ಅವರು ದಿನಾಂಕ 27.7.2015ರಂದು ನಿಧನರಾದದ್ದು ಕೇವಲ ಭಾರತಕ್ಕಷ್ಟೇ ಅಲ್ಲದೆ ಇಡೀ ಪ್ರಜ್ಞಾವಂತ ಮನುಕುಲಕ್ಕೇ ಆದ ನಷ್ಟವಾಗಿತ್ತು. ಶ್ರೇಷ್ಠ ಮಾನವತಾವಾದಿ, ವಿಜ್ಞಾನಿ-ಸಂತ, ಅಪ್ರತಿಮ ಶಿಕ್ಷಕ, ಭವ್ಯ ಭಾರತದ ಕನಸಿಗ, ಮಹಾನ್ ಕರ್ಮಯೋಗಿ, ಜನರ ನಡುವೆ ಓಡಾಡುತ್ತಿದ್ದ ಪರಿವ್ರಾಜಕ, ಕ್ಷಿಪಣಿ ಪಿತಾಮಹ, ಅಣುಬಾಂಬಿನ ಅಧ್ವರ್ಯು, ಸರ್ವೋತ್ಕೃಷ್ಟ ವಿಜ್ಞಾನಿ, ವೈಜ್ಞಾನಿಕ ಆಡಳಿತಗಾರ, ಸಂಗೀತಪ್ರೇಮಿ, ಶ್ರದ್ಧಾಳು ಮುಸಲ್ಮಾನ, ಇಚ್ಛಾಮರಣಿ, ಕವಿಹೃದಯದ ದಾರ್ಶನಿಕ, ಧರ್ಮಸಮನ್ವಯಿ – ಹೀಗೆ ಅವರ ಅಗಲುವಿಕೆಯ ಸುದ್ದಿಯನ್ನು ಹಾಗೂ ವಿಶೇಷ ಲೇಖನಗಳನ್ನು ಪ್ರಕಟಿಸಿದ ನಾಡಿನ ಪತ್ರಿಕೆಗಳು ನೀಡಿರುವ ಶೀರ್ಷಿಕೆ, ಉಪಶೀರ್ಷಿಕೆಗಳು ಆ ಸಂದರ್ಭದ ಕೇವಲ ಸೌಜನ್ಯದ, ಹೊಗಳಿಕೆಯ ಮಾತುಗಳಾಗಿರದೆ, ಒಂದೊಂದೂ ಸತ್ಯಸ್ಯಸತ್ಯವಾದ ಅನಿಸಿಕೆಗಳಾಗಿವೆ. ಅವರನ್ನು ಒಬ್ಬ ಚತುರ್ಭುಜನೆಂದು ಪರಿಭಾವಿಸಿಕೊಂಡರೆ ಆ ಕೈಗಳಲ್ಲಿ ಕ್ರಮವಾಗಿ ಗೀತೆ, ಕುರಾನ್, ಅಣುಬಾಂಬ್ ಮತ್ತು ಕ್ಷಿಪಣಿಯನ್ನು ಹೊಂದಿರುವುದನ್ನು ಕಲ್ಪಿಸಿಕೊಳ್ಳಬಹುದು ಎಂದು ಒಂದು ಪತ್ರಿಕೆ ಬರೆದಿರುವುದು ಅವರ ಧರ್ಮಸಮನ್ವಯ, ವಿಜ್ಞಾನ ಮತ್ತು ಅಧ್ಯಾತ್ಮಗಳ ಸಮ್ಮಿಲನಕ್ಕೆ ಒಂದು ರೂಪಕವಾಗಿ ಗೋಚರಿಸುತ್ತದೆ. ಅವರಿಗೆ ವೇದ, ಉಪನಿಷತ್ತು, ಭಗವದ್ಗೀತೆಗಳ ಮೇಲೆ ಅಪಾರ ಗೌರವವಿತ್ತು. ಹಿಂದೂ

ದೇವಾಲಯ, ಮಠಮಾನ್ಯಗಳೊಡನೆ ಶ್ರದ್ಧಾಪೂರ್ವಕ ಸಂಬಂಧವಿತ್ತು. ಸುತ್ತೂರು ಶ್ರೀಮಠಕ್ಕೆ, ಅದರ ಆಶ್ರಯದ ಸಂಸ್ಥೆಗಳಿಗೆ ಹಲವಾರು ಬಾರಿ ಬಂದು ತಮ್ಮ ಉಪನ್ಯಾಸ, ಸಂವಾದಗಳಿಂದ ಎಲ್ಲರಿಗೂ ಪ್ರಿಯರಾಗಿದ್ದರು; ವಿದ್ಯಾರ್ಥಿಗಳಿಗಂತೂ ಸ್ಫೂರ್ತಿಯ ಸಂಕೇತವಾಗಿದ್ದರು. ಅವರ ಚಿಂತನೆಯ ಕೆಲವು ನುಡಿಮುತ್ತುಗಳು ಹೀಗೆ ಬೆಳಕು ಚೆಲ್ಲುವಂತಿವೆ:

"ನಮ್ಮನ್ನು ವಿಭಜನೆ, ನಾಶಮಾಡುವ ಶಕ್ತಿಗಳ ಎದುರು ಹೋರಾಡಬೇಕು; ವ್ಯಕ್ತಿಗಿಂತ ದೇಶ ದೊಡ್ಡದು ಎಂಬ ಅರಿವನ್ನು ಬೆಳಸಿಕೊಳ್ಳಬೇಕು. ದೇಶದ ಒಳಿತಿನಲ್ಲಿಯೇ ನಮ್ಮ ಸುಸ್ಥಿತಿಯ ಒಳಿತು ಅಡಗಿದೆ."

"ದಾಸ್ಯಮನೋಭಾವ ತೊರೆದು, ಮುಕ್ತ ಚಿಂತನೆಯಿಂದ ಇಂದಿನ ಭಾರತೀಯ ಸಮಾಜವು ತರ್ಕವನ್ನು ಬಳಸಿಯೇ ಸುಧಾರಣೆ ಕಾಣಬೇಕಾಗಿದೆ. ವೈಜ್ಞಾನಿಕ ವಿಧಾನದ ಮೂಲಕ, ಜ್ಞಾನವನ್ನು ಶ್ರೀಮಂತಗೊಳಿಸಬೇಕು. ಮೂಢನಂಬಿಕೆಗಳನ್ನು, ಅಸಹಿಷ್ಣುತೆಗಳನ್ನು ವಿರೋಧಿಸಬೇಕು."

"ಯಾವಾಗ ನೈತಿಕತೆಯ ಸೌಂದರ್ಯವಿರುತ್ತದೋ ಆ ಮನೆಯಲ್ಲಿ ಸಾಮರಸ್ಯವಿರುತ್ತದೆ. ಯಾವಾಗ ಮನೆಯಲ್ಲಿ ಸಾಮರಸ್ಯವಿರುತ್ತದೋ ದೇಶದಲ್ಲಿ ಸುವ್ಯವಸ್ಥೆ ಇರುತ್ತದೆ. ಯಾವಾಗ ದೇಶದಲ್ಲಿ ಸುವ್ಯವಸ್ಥೆ ಇರುತ್ತದೋ ಜಗತ್ತಿನಲ್ಲಿ ಶಾಂತಿ ಇರುತ್ತದೆ."

"ನಿನ್ನ ಕರ್ತವ್ಯಕ್ಕೆ ಸಲಾಂ ಮಾಡಿದರೆ ನೀನು ಯಾರಿಗೂ ಸಲಾಂ ಮಾಡಬೇಕಿಲ್ಲ. ಆದರೆ ನಿನ್ನ ಕರ್ತವ್ಯವನ್ನು ಕಲುಷಿತಗೊಳಿಸಿದರೆ ನೀನು ಪ್ರತಿಯೊಬ್ಬರಿಗೂ ಸಲಾಂ ಮಾಡಬೇಕು."

"ನಾನು ನಿಧನ ಹೊಂದಿದಾಗ ರಜೆ ಕೊಡಬೇಡಿ. ಅದರ ಬದಲಿಗೆ ಒಂದು ದಿನ ಹೆಚ್ಚು ಕೆಲಸ ಮಾಡಿದರೆ ಅದಕ್ಕಿಂತ ನನಗೆ ಕೊಡುವ ದೊಡ್ಡ ಗೌರವ ಮತ್ತೊಂದಿಲ್ಲ."

ಇವು ಕೇವಲ ಮಾತುಗಳಲ್ಲ, ಇಡೀ ಸಮುದಾಯಕ್ಕೆ ಕೊಟ್ಟ ನಿತ್ಯದೀಪಗಳು.

"ತತ್ವಜ್ಞಾನಿಗಳು ಪ್ರಪಂಚವನ್ನು ಆಳಬೇಕು" ಎಂದು ಅರಿಸ್ಟಾಟಲ್ ಹೇಳಿದ ಮಾತು ಡಾ. ಕಲಾಂ ಅವರ ಬದುಕನ್ನು ಕಂಡಾಗ ಎಷ್ಟು ಸತ್ಯ ಎನಿಸುತ್ತದೆ. ಕಲಾಂ ರವರು ಕೇವಲ ರಾಷ್ಟ್ರದ ಪ್ರಥಮ ಪ್ರಜೆ ಮಾತ್ರವಲ್ಲ; ಅವರೊಬ್ಬರು ವಿಜ್ಞಾನಿ, ತತ್ವಜ್ಞಾನಿ. ಅಂಥವರನ್ನು ರಾಷ್ಟ್ರಪತಿಯಾಗಿ ಪಡೆಯಲು ಈ ರಾಷ್ಟ್ರ ಎಷ್ಟು ಪುಣ್ಯ ಮಾಡಿತ್ತು! ಅವರು ಇಂದು ದೈಹಿಕವಾಗಿ ನಮ್ಮೊಡನೆ ಇಲ್ಲ. ಆದರೆ ಅವರ ಸಂತಸದೃಶ ಬದುಕು ನಿರಂತರವಾಗಿ ಎಲ್ಲರಿಗೂ ಸ್ಫೂರ್ತಿಯಾಗಲಿ ಎಂದು ಹಾರೈಸುತ್ತೇವೆ.

**ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

# ತಂತ್ರಜ್ಞಾನ ಮತ್ತು ಸಮಾಜ ಪರಿವರ್ತನೆ

**ಡಾ. ಎ.ಪಿ.ಜೆ. ಅಬ್ದುಲ್ ಕಲಾಂ**

"ದೀಪವಾಗಿರು, ಜೀವರಕ್ಷಕ ದೋಣಿಯಾಗು ಮತ್ತು ಏಣಿಯಾಗು, ನೊಂದ ಹೃದಯದ ನೋವು ನಿವಾರಿಸು, ನಿನ್ನ ಮನೆಯಿಂದ ಕುರುಬನಾಗಿ ಹೊರನಡೆ"

**ಜಲಾಲುದ್ದೀನ್ ರೂಮಿ**

(13 ನೇ ಶತಮಾನದ ಪರ್ಶಿಯನ್ ಸೂಫಿ ಕವಿ)

ಪ್ರಿಯ ಸ್ನೇಹಿತರೆ,

ನಾನು ನನ್ನ ಭಾಷಣವನ್ನು ಪ್ರಾರಂಭಿಸುವ ಮುನ್ನ ಒಂದು ಸನ್ನಿವೇಶವನ್ನು ನಿಮ್ಮೊಂದಿಗೆ ಹಂಚಿಕೊಳ್ಳಲು ಇಚ್ಛಿಪಡುತ್ತೇನೆ. ಇದೇ ನವೆಂಬರ್ 2014ರ ಆರಂಭದಲ್ಲಿ ನಾನು ಸರಣಿ ಭಾಷಣಗಳನ್ನು ನೀಡಲು ಚೀನಾ ದೇಶದ ಬೀಜಿಂಗ್‌ನ ಪೀಕಿಂಗ್ ವಿಶ್ವವಿದ್ಯಾನಿಲಯಕ್ಕೆ ಹೋಗಿದ್ದೆ. ಅದು ತುಂಬಾ ಪ್ರಾಚೀನವೂ, ಅತ್ಯುತ್ತಮ ಶೈಕ್ಷಣಿಕ ಮತ್ತು ರಾಜಕೀಯ ಚರಿತ್ರೆಯನ್ನೂ ಹೊಂದಿದ ವಿಶ್ವವಿದ್ಯಾನಿಲಯ. ನಾನು ಮತ್ತು ನನ್ನ ತಂಡ ಭಾರತ ದೇಶದ ಯುವ ಜನತೆಯ ಪರವಾಗಿ ಚೀನಾ ದೇಶದ ಯುವಜನತೆಗೆ ಸಂದೇಶವೊಂದನ್ನು ಕೊಡಲು ಇಚ್ಛಿಸಿದೆವು. ಏನು ಸಂದೇಶ ಕೊಡಬೇಕೆಂಬುದನ್ನು ತಿಳಿಯಲು ಸಾಮಾಜಿಕ ಸಂವಹನ ಮಾಧ್ಯಮವಾದ ಟ್ವಿಟರ್‌ನಲ್ಲಿ ಪ್ರಶ್ನೆ ಮಾಡಿದೆ. ನೂರಾರು ಒಳ್ಳೆಯ ಮತ್ತು ಸೃಜನಾತ್ಮಕ ಉತ್ತರಗಳು ಬಂದವು. ಅದರಲ್ಲಿ ಒಂದು ಅತ್ಯುತ್ತಮವಾದುದು, 28 ವರ್ಷದ ಸುಬ್ರಮಣ್ಯಂನದು. ಈತ ಈಗ ದಕ್ಷಿಣ ಕೊರಿಯಾದ ಚಿಯಾಂಗ್ಯೂನಲ್ಲಿ ವಾಸಿಸುತ್ತಾನೆ. ಚೀನಾ ಯುವಕರಿಗೆ ಇವನ ಸಂದೇಶ ಏನಿತ್ತೆಂದರೆ –

ಮೈಸೂರಿನ ಶ್ರೀ ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜಿನ ಸ್ವರ್ಣ ಮಹೋತ್ಸವದ ಸಮಾರೋಪ ಸಮಾರಂಭದಲ್ಲಿ ಮಾಜಿ ರಾಷ್ಟ್ರಪತಿ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ರವರು (31ನೇ ಮಾರ್ಚ್ 2015) ಮಾಡಿದ ಭಾಷಣ

"ಎಲ್ಲ ಜನರ ಗುರುತು: ಭೂಮಿಯ ನಾಗರಿಕರು"

ನಮ್ಮ ವಿಳಾಸ (ಪಾಸ್‌ಪೋರ್ಟ್‌ನಲ್ಲಿ) : ಭೂಮಿ

ನಾವೇನಾದರೂ ಮಂಗಳಗ್ರಹದಲ್ಲಿದ್ದರೆ, ನಮ್ಮ ಪಾಸ್‌ಪೋರ್ಟ್‌ನಲ್ಲಿ 'ಭೂಮಿ' ಎಂದು ಬರೆಯಬೇಕಾಗುತ್ತದೆ. ನಮಗೆ ಈಗ ವಯಸ್ಸು, ಶಕ್ತಿ ಮತ್ತು ಅವಕಾಶಗಳಿವೆ. ಇವುಗಳನ್ನು ಬಳಸಿಕೊಂಡು ಆಹಾರ, ಶಾಂತಿ ಮತ್ತು ವಿಜ್ಞಾನದ ಅವಿಷ್ಕಾರಗಳು ಪ್ರತಿಯೊಬ್ಬರಿಗೂ ದೊರಕುವಂತೆ ಮಾಡಬೇಕಾಗುತ್ತದೆ. ಅದಾದ ನಂತರ ನಾವು ಸುಖದಿಂದ ನಿದ್ರಿಸಬಹುದು.

ಹೌದಲ್ಲವೆ? ಸ್ನೇಹಿತರೆ, ನಾವೆಲ್ಲರೂ ಸಾಮಾನ್ಯ ಗುರುತೊಂದನ್ನು ಪಡೆದರೆ ಆಗ ಮಾನವತೆಗೆ ಒಂದು ಬಂಧುತ್ವ ಮತ್ತು ಶಕ್ತಿ ಒದಗಿ ಬರುತ್ತದೆ. ಇದು ಎಲ್ಲಾ ಧರ್ಮ, ಪ್ರದೇಶ ಮತ್ತು ರಾಷ್ಟ್ರೀಯತೆಯನ್ನು ಮೀರಿದುದು. ಕೆಲವು ವಾರಗಳ ಹಿಂದೆ ಹಿಂದೂ ಮಹಾಸಾಗರ, ಸಿಡ್ನಿ, ಪೇಶಾವರ, ಪ್ಯಾರಿಸ್ ಮತ್ತು ನೈಜೀರಿಯಾಗಳಲ್ಲಿ ದುಷ್ಕರ್ಮಿಗಳ ಕಾರ್ಯಗಳನ್ನು ನೋಡಿದೆವು. ಪಾರಸ್ಪರಿಕ ದ್ವೇಷವು ಹೇಗೆ ಬಿಡಿಯಾಗಿ, ಇಡಿಯಾಗಿ ಸ್ಫೋಟಿಸಿ ಗುಂಪಾಗಿ ಮುಗ್ಧ ಜನಗಳು ಹೇಗೆ ಬಲಿಪಶುಗಳಾಗುತ್ತಾರೆಂದು ನೋಡಿದೆವು. ಈ ಭೂಮಿಯ ನಾಗರಿಕರಾದ ನಾವು ಸದಾ ಶಾಂತಿಗಾಗಿ ಕಾತರಿಸೋಣ. ಇದರಿಂದ ನಮ್ಮ ಬಲಗಳು ಒಗ್ಗೂಡುತ್ತವೆ; ಶಕ್ತಿ ಮತ್ತು ಧೈರ್ಯ ಬರುತ್ತದೆ. ಇದನ್ನು ನೀತಿ, ಉತ್ಪಾದನೆ, ಜನತೆ ಅಥವಾ ಕಲ್ಪನೆಗಳಿಂದ ಹಾಗೂ ಸಾಮಾಜಿಕ ಬಂಧನದಿಂದ, ಮಾನವೀಯ ಮೌಲ್ಯಗಳಿಂದ ಸ್ಥಿರವಾಗಿ ನಿಂತು ದ್ವೇಷ ಮತ್ತು ವಿಭಜನೆಯನ್ನು ಹತ್ತಿಕ್ಕೋಣ.

ಈಗ ನಾನು ಮುಖ್ಯ ಭಾಷಣಕ್ಕೆ ಬರುತ್ತೇನೆ.

ನನಗೆ, ಶ್ರೀ ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜಿನ ಸ್ವರ್ಣ ಮಹೋತ್ಸವದ ಈ ಸಮಾರೋಪ ಸಂದರ್ಭದಲ್ಲಿ, ಇಲ್ಲಿನ ವಿದ್ಯಾರ್ಥಿಗಳು, ಅಧ್ಯಾಪಕರು ಮತ್ತು ಸಿಬ್ಬಂದಿವರ್ಗದವರೊಂದಿಗೆ ಭಾಷಣ ಮತ್ತು ವಿಚಾರ ವಿನಿಮಯ ಮಾಡಿಕೊಳ್ಳಲು ತುಂಬ ಸಂತೋಷವಾಗುತ್ತಿದೆ. ಸ್ವರ್ಣ ಮಹೋತ್ಸವವೆಂದರೇನು?

ಅಂದರೆ, ಶ್ರೀ ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜು ಸೂರ್ಯನ ಸುತ್ತಲೂ ಐವತ್ತು ಬಾರಿ ಪರಿಭ್ರಮಣೆ ಪೂರೈಸಿದೆ ಎಂದು ಅರ್ಥ. ಪ್ರತಿಯೊಂದು ಪರಿಭ್ರಮಣೆಯಲ್ಲೂ ಅದು ವಿಶಿಷ್ಟ ರೀತಿಯ ಸಮಗ್ರತೆ ಮತ್ತು ಸಮಭಾವದ ಶಿಕ್ಷಣವನ್ನು ನೀಡಿದೆ. ಈ ಸಂಸ್ಥೆಯು ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಾದ ನವೀನತೆಗಳೊಂದಿಗೆ ಹೊಸ ಬಾಹ್ಯಾಕಾಶ ಶೋಧನಕಾರ್ಯಗಳಿಗೆ ಸಾಕ್ಷಿಯಾಗಿರಬಹುದು. ಸ್ನೇಹಿತರೆ, ಶ್ರೀ ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜು 1963



ರಲ್ಲಿ ಸ್ಥಾಪಿತವಾಯಿತು. ಇದು ಜಗದ್ಗುರು ಡಾ. ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಒಂದು ಪ್ರಧಾನ ಯೋಜನೆಯಾಗಿತ್ತು. ಅವರು ಸುತ್ತೂರು ಮಠದ ಪರಂಪರೆಯಲ್ಲಿ 23ನೇ ಜಗದ್ಗುರುಗಳು. ಈ ಸಂಸ್ಥೆಯು ಜೆಎಸ್‌ಎಸ್ ವಿದ್ಯಾಪೀಠದ ಪ್ರಮುಖ ವಿದ್ಯಾಸಂಸ್ಥೆಗಳಲ್ಲೊಂದಾಗಿದೆ. ಈ ಸಂಸ್ಥೆಯಲ್ಲಿ ಇಂಜಿನಿಯರಿಂಗ್ ಹಾಗೂ ತಂತ್ರಜ್ಞಾನದ ಆಧುನಿಕ ಶಿಕ್ಷಣ ಮತ್ತು ಸಂಶೋಧನೆಯ ವಾತಾವರಣವಿದೆ. ಇದಲ್ಲದೆ, ಈ ಕಾಲೇಜು ವಿಶ್ವ ಬ್ಯಾಂಕ್ ಸಹಯೋಗದ 'ತಾಂತ್ರಿಕ ಶಿಕ್ಷಣ ದರ್ಜೆ ಅಭಿವೃದ್ಧಿ ಕಾರ್ಯಕ್ರಮದಡಿಯಲ್ಲಿ (TEQIP) ಪರಿಗಣಿಸಲ್ಪಟ್ಟಿದೆ. ಇದು ಒಂದು ಅದ್ಭುತ ಸಾಧನೆ.

ಈ ಸಂದರ್ಭದಲ್ಲಿ, ಈ ಕಾಲೇಜಿನ ಪ್ರವರ್ತಕರು ಹಾಕಿಕೊಟ್ಟಿರುವ ಶೈಕ್ಷಣಿಕ ಅಡಿಪಾಯವನ್ನು ನಾನು ಶ್ಲಾಘಿಸುತ್ತೇನೆ. ಈ ಕಾಲೇಜು ತನ್ನ ಯುವ ವಿದ್ಯಾರ್ಥಿವೃಂದದಿಂದ ವಿಶ್ವದ ಮೂಲೆಗಳಲ್ಲೆಲ್ಲ ವೃತ್ತಿಪರಛಾಪನ್ನು ಮೂಡಿಸುವಂಥ ಅತ್ಯುತ್ತಮ ಶಿಕ್ಷಣವನ್ನು ನೀಡಿದೆ. ಈ ಸಂದರ್ಭದಲ್ಲಿ ನಾನು ಎಲ್ಲ ಬೋಧಕ ಮತ್ತು ಸಿಬ್ಬಂದಿವರ್ಗದವರು ಮಾಡಿರುವ ಸಾಮೂಹಿಕ ಕೊಡುಗೆಯನ್ನು ಮನಸಾರೆ ಶ್ಲಾಘಿಸುತ್ತೇನೆ.

ಸ್ನೇಹಿತರೆ, ನಾನು ಈಗ ನಿಮ್ಮೊಡನೆ 'ತಂತ್ರಜ್ಞಾನ ಮತ್ತು ಸಮಾಜ ಪರಿವರ್ತನೆ'ಯ ಬಗ್ಗೆ ನನ್ನ ಕೆಲವು ಅನಿಸಿಕೆಗಳನ್ನು ಹಂಚಿಕೊಳ್ಳಲು ಇಚ್ಛಿಸುತ್ತೇನೆ. ಮೊದಲು ನಾನು 2014 ರಲ್ಲಿ ನಡೆದ ವೈಜ್ಞಾನಿಕ ಆವಿಷ್ಕಾರಗಳನ್ನು ತಿಳಿಸಬಯಸುತ್ತೇನೆ.

**ಮಾನವ ಸೌಖ್ಯಕ್ಕೆ ನಡೆದ ಆವಿಷ್ಕಾರಗಳು**

ಸ್ನೇಹಿತರೆ, ನಾನು ಕೆಲವು ದಿವಸಗಳ ಹಿಂದೆ, 2014 ರಲ್ಲಿ ನಡೆದ ಅತಿ ಮುಖ್ಯ ಆವಿಷ್ಕಾರಗಳ ಬಗೆಗಿನ ಒಂದು ಲೇಖನವನ್ನು ಓದಿದೆ. ಇದರಲ್ಲಿ ಆರೋಗ್ಯ, ಶಿಕ್ಷಣ, ಸುರಕ್ಷತೆ ಮತ್ತು ಇಂಧನಗಳ ಬಗ್ಗೆ ಮಾಹಿತಿಗಳಿದ್ದು ಅವು ಮಾನವನಿಗೆ ಹೇಗೆ ನೇರವಾಗಿ ಪ್ರಯೋಜನಕ್ಕೆ ಬರುತ್ತವೆಂಬುದನ್ನು ಹೇಳಲಾಗಿತ್ತು. ಈಗ ನಾನು ಮೂರು ಮುಖ್ಯ ವೈಜ್ಞಾನಿಕ ಆವಿಷ್ಕಾರಗಳ ಬಗ್ಗೆ ವಿಚಾರ ವಿನಿಮಯ ಮಾಡಲಿಚ್ಛಿಸುತ್ತೇನೆ.

ಮೊದಲಿಗೆ 2014 ರಲ್ಲಿ ಮಧುಮೇಹ ರೋಗನಿವಾರಣೆಗೆ ಮಾನವನ ಭ್ರೂಣಾಂಶಿಕ ಕೋಶ (Human Embryonic Stem Cell) ತಂತ್ರಜ್ಞಾನದ ಬಗ್ಗೆ ತಿಳಿಯೋಣ. ನಿಮಗೆ ತಿಳಿದಿರುವಂತೆ ಮೇದೋಜೀರಕ ಗ್ರಂಥಿಯಲ್ಲಿ (Pancreas) ಬೀಟಾ ಕೋಶಗಳು (B-cells) ಇನ್‌ಸುಲಿನ್ ಅನ್ನು ಉತ್ಪಾದಿಸುತ್ತವೆ. ಈ ಬೀಟಾ ಕೋಶಗಳು ನಾಶವಾದರೆ ಅದು ಮಧುಮೇಹ-1 ಕ್ಕೆ ಕಾರಣವಾಗುತ್ತದೆ. ಆದರೆ ಇದುವರೆವಿಗೂ ಭ್ರೂಣಾಂಶಿಕ ಸ್ಟೆಮ್ ಕೋಶಗಳನ್ನು ಬೀಟಾ ಕೋಶಗಳನ್ನಾಗಿ ಪರಿವರ್ತಿಸುವ ಕಾರ್ಯವು ಅತ್ಯಂತ

ನಿಧಾನ ಗತಿಯಲ್ಲಿತ್ತು. 2014 ರಲ್ಲಿ ನಡೆದ ಎರಡು ಸಂಶೋಧನೆಗಳಲ್ಲಿ ಬಹು ಪ್ರಮಾಣದ ಬೀಟಾ ಕೋಶಗಳನ್ನು ಕೇವಲ ಎರಡು ತಿಂಗಳೊಳಗೆ ಉತ್ಪಾದಿಸಿ ರೋಗಗ್ರಸ್ತ ದೇಹದಲ್ಲಿನ ಬೀಟಾ ಕೋಶಗಳ ಜಾಗದಲ್ಲಿ ಸ್ಥಾಪಿಸಬಹುದೆಂಬುದು ತಿಳಿದು ಬಂದಿತು. ಇದಕ್ಕೂ ಮೊದಲು, ಇದನ್ನು ಬಳಸುವ ಮುನ್ನ ರೋಗಗ್ರಸ್ತ ದೇಹದ ಬೀಟಾ ಕೋಶಗಳು ಹೇಗೆ ಸಾಯುತ್ತವೆ ಎಂಬುದನ್ನು ಅರಿಯಬೇಕಾಗಿರುತ್ತದೆ. ಇನ್ನು 2-3 ವರ್ಷಗಳಲ್ಲಿ ಮಧುಮೇಹವನ್ನು ವಾಸಿ ಮಾಡುವ ತಾಂತ್ರಿಕತೆಯಲ್ಲಿ ಯಶಸ್ವಿಯಾಗುತ್ತೇವೆ ಎಂಬುದು ವಿಜ್ಞಾನಿಗಳ ಆಶಯವಾಗಿದೆ. ಇದು ಎರಡು ಬಗೆಯ ಔಷಧವಿಜ್ಞಾನದ ಕ್ಷೇತ್ರಸಂಯೋಜನೆಯೂ ಆಗಿದೆ.

ಈಗ ಎರಡನೆಯದಾಗಿ ನಾನು ಬಾಹ್ಯಾಕಾಶ ವಿಜ್ಞಾನದ, ಜಾಡುತಂತ್ರಜ್ಞಾನ (Tracking) ಮತ್ತು ರಾಕೆಟ್ ತಂತ್ರಜ್ಞಾನಗಳ ಸಂಯೋಜನೆಯ ಬಗ್ಗೆ ಚರ್ಚಿಸುತ್ತೇನೆ. 2014 ರಲ್ಲಿ ಒಂದು ಮಾನವನಿರ್ಮಿತ ನೌಕೆಯನ್ನು ಧೂಮಕೇತುವೊಂದರಲ್ಲಿ ಇಳಿಸಲಾಯಿತು. ಈ ಸಂದರ್ಭವು ಮಾನವ ಇತಿಹಾಸಗಳಲ್ಲಿಯೇ ಪ್ರಪ್ರಥಮವಾದುದು. 'ರೊಸೆಟ್ಟೊ' ಬಾಹ್ಯಾಕಾಶ ನೌಕೆಯು ಅಂತಿಮವಾಗಿ '67P ಚುರ್ಯುಮೋವ್-ಗೆರಾಸೈಮೆನ್‌ಕೋ' ಎಂಬ ಧೂಮಕೇತುವಿನ ಮೇಲೆ 6.4 ಬಿಲಿಯನ್ ಕಿ.ಮೀ. ದೂರವನ್ನು ಹತ್ತು ವರ್ಷಗಳ ಅವಧಿಯಲ್ಲಿ ಪ್ರಯಾಣಿಸಿ, 2014 ಆಗಸ್ಟ್‌ನಲ್ಲಿ ಯೂರೋಪಿಯನ್ ಬಾಹ್ಯಾಕಾಶ ಏಜನ್ಸಿಯು ಗುರುತುಹಾಕಿ ನಿರ್ದೇಶಿಸಿದ ಜಾಗವನ್ನು ಯಶಸ್ವಿಯಾಗಿ ತಲುಪಿತು. ಕಳೆದ ತಿಂಗಳು 'ರೊಸೆಟ್ಟಾ' ತನ್ನೊಳಗಿದ್ದ ಫಿಲೇಯ (Philae) ಮೂಲಕ ತನಗೆ ಆದೇಶಿಸಿದ್ದ ಕೆಲಸವನ್ನು ಪ್ರಾರಂಭಿಸಿದೆ. ಈ ಧೂಮಕೇತುವು ಸ್ವಲ್ಪ ಕಡಿಮೆ ಸಾಂದ್ರತೆಯುಳ್ಳದ್ದಾಗಿದ್ದು ಅದು 300 kg/$M^3$ ಇದೆ. ಈ ಸಾಂದ್ರತೆಯುಳ್ಳ ವಸ್ತುಗಳು ಸಾಗರದಲ್ಲಿ ತೇಲುತ್ತವೆ.

ಈ ಧೂಮಕೇತುವಿನ ಮೇಲಿನ ಇಳಿಯುವಿಕೆಯು ಮೃದುವಾಗಿತ್ತು. 'ಫಿಲೇ' ಕೂಡ ಅದರ ಭಾಗವೊಂದರ ಮೇಲೆ ವಾಲಿಕೊಂಡು ನಿರ್ದೇಶಿತ ಜಾಗಕ್ಕಿಂತ ಸ್ವಲ್ಪ ದೂರದಲ್ಲಿ ಶಿಖರವೊಂದರ ನೆರಳಿನಲ್ಲಿ ನಿಂತಿತ್ತು. ನೆರಳಿನಲ್ಲಿ ಇದ್ದಿದ್ದರಿಂದ ಬ್ಯಾಟರಿ ಚಾಲನೆಯಾಗಿರಲಿಲ್ಲ. ಆದರೂ ತನ್ನ ಸಂಗ್ರಹಣಾ ಕೋಶದಲ್ಲಿದ್ದ ವಿದ್ಯುತ್ತಿನಿಂದ ಅದು ಅವಶ್ಯಕವಾದ ಮಾಹಿತಿಗಳನ್ನು ನೀಡಿತು.

ಬಹುತೇಕ ಶೇ. 80 ರಷ್ಟು ವೈಜ್ಞಾನಿಕ ಮಾಹಿತಿಗಳು ಸುತ್ತುತ್ತಿರುವ 'ರೊಸೆಟ್ಟಾ' ಉಪಗ್ರಹದಿಂದ ಸಿಗುತ್ತದೆಯೆಂಬ ಆಶಾವಾದ ವಿಜ್ಞಾನಿಗಳಿಗೆ ಇದೆ. ಈ 'ರೊಸೆಟ್ಟಾ'ವು ಧೂಮಕೇತುವಿನಿಂದ 10 ಕಿ.ಮೀ. ಎತ್ತರದಲ್ಲಿ ಸುತ್ತುತ್ತಿದ್ದು ಇದುವರೆವಿಗೆ ಬೃಹತ್ ಪ್ರಮಾಣದ ಮಾಹಿತಿಯನ್ನು ಭೂಮಿಗೆ ಕಳುಹಿಸಿದೆ. ಇವೆಲ್ಲವನ್ನು ನೋಡಿದರೆ ನಮಗೆ ಇದು 2014ರಲ್ಲಿ ಸಾಧಿಸಿದ ಒಂದು ದೊಡ್ಡ ಆವಿಷ್ಕಾರವೆನ್ನಿಸುತ್ತದೆ. ಇದು ಒಂದು



ವಿಸ್ಮಯ ವಾದ ಆವಿಷ್ಕಾರವಾಗಿದ್ದು ಮುಂದೆ ಭೂಮಿಗೆ ಬೀಳಲಿರುವ ಉಲ್ಕಾಪಾತಗಳನ್ನು ನಿಖರವಾಗಿ ಅಳೆಯಲು ಸಹಾಯಕವಾಗಿದೆ. ಮೂರನೆಯದಾಗಿ ಕಂಪ್ಯೂಟರ್ ವಿಜ್ಞಾನ ಮತ್ತು ನರಮಂಡಲಶಾಸ್ತ್ರದ ಬಗ್ಗೆ ಮಾತನಾಡುತ್ತೇನೆ. 2014 ರಲ್ಲಿ ಐಬಿಎಂ ಮತ್ತು ಇತರ ಕಂಪನಿಯ ಕಂಪ್ಯೂಟರ್ ವಿಜ್ಞಾನಿಗಳು ಮಾನವನ ನರಮಂಡಲದ ಭಾಗವನ್ನು ಆಧಾರವಾಗಿಟ್ಟುಕೊಂಡು ನ್ಯೂರೋಮಾರ್ಫಿಕ್ ಚಿಪ್‌ಗಳನ್ನು (Chip) ಕಂಡು ಹಿಡಿದಿದ್ದಾರೆ. ಈ ಚಿಪ್‌ಗಳು ಮಾನವನ ನರಮಂಡಲದ ಕೋಶಗಳಂತೆಯೇ ಎಲ್ಲ ವಿಷಯಗಳನ್ನು ಸ್ವತಃ ಪರಿಷ್ಕರಿಸಬಲ್ಲ ಸಾಮರ್ಥ್ಯ ಹೊಂದಿರುತ್ತವೆ. ಕಂಪ್ಯೂಟರ್‌ಗಳು ನಿಯಮಬದ್ಧವಾದ ಸಂಜ್ಞೆ, ಸೂಚನೆಗಳಿದ್ದ ಸಂದರ್ಭಗಳಲ್ಲಿ ಕೂಡ ದತ್ತಾಂಶ ವಿಶ್ಲೇಷಣೆಯಲ್ಲಿ ಕಷ್ಟಪಡುತ್ತವೆ.

ಆದರೆ ನಮ್ಮ ಮಿದುಳು ಆ ಕಷ್ಟವನ್ನು ಪಡುವುದಿಲ್ಲ. ನಾವು ಹಲವು ಮೂಲಗಳ ದತ್ತಾಂಶಗಳನ್ನು ನಿಯಮಬದ್ಧವಾಗಿ ಕ್ರೋಢೀಕರಿಸಿ ಅಂತಿಮ ಉತ್ಪಾದನೆ ಮಾಡುತ್ತೇವೆ. ಪ್ರತಿ ನ್ಯೂರಾನ್‌ಗಳು ತನ್ನ ಪಕ್ಕದ ನ್ಯೂರಾನ್‌ಗಳೊಂದಿಗೆ ಸಂವಹನ ಮಾಡಿದರೆ ಸಮಾನಾಂತರ ದತ್ತಕ ವಿಶ್ಲೇಷಣೆ ಸಾಧ್ಯವಾಗುತ್ತದೆ.

ಇನ್ನು ಹೊಸದಾಗಿ ಪರಿಷ್ಕರಿಸಿರುವ ನೈಜ ಮೆದುಳು ರೂಪದಕಂಪ್ಯೂಟರ್‌ಗಳ ಸ್ವಯಂನಿರ್ದೇಶಿತ ಚಿಪ್‌ಗಳಲ್ಲಿ ಒಂದು ಮಿಲಿಯನ್ ನ್ಯೂರಾನ್‌ಗಳು ಮತ್ತು 256 ಮಿಲಿಯನ್ ಸಿನಾಪ್ಸಿಸ್ (Synapses) ಗಳು -TRVE NORTH. ಇವು ನೈಜ ಮೆದುಳನ್ನು ಅತ್ಯಲ್ಪ ಸಣ್ಣದಾಗಿ ಅಮಕಿಸುತ್ತಿವೆ. ಇದರಲ್ಲಿ 5.4 ಬಿಲಿಯನ್ ಟ್ರಾನ್ಸಿಸ್ಟರ್‌ಗಳು ಮತ್ತು 256 ಮಿಲಿಯನ್ 'ಸಿನಾಪ್ಸಿಸ್'ಗಳಿದ್ದರೆ ಮಾನವನ ಮೆದುಳಿನಲ್ಲಿ 100 ಬಿಲಿಯನ್ ನ್ಯೂರಾನ್‌ಗಳು ಮತ್ತು 100 ಟ್ರಿಲಿಯನ್ ಸಿನಾಪ್ಸಿಸ್‌ಗಳಿವೆ. ಇವು ಅತ್ಯಲ್ಪ ಪ್ರಮಾಣದ 70 mw ಗಳಷ್ಟು ವಿದ್ಯುತ್ತನ್ನು ಉಪಯೋಗಿಸುತ್ತವೆ.

**ನಿನ್ನೆ ಸರಿಯಿದ್ದು ಇಂದು ಸರಿ ಇಲ್ಲದಿರಬಹುದು**

ಪ್ರೀತಿಯ ಸ್ನೇಹಿತರೆ, ನಾನು 'Empires of the Mind' by ಡೆನಿಸ್ ಡಬ್ಲ್ಯು. ಐಟ್ಲಿಯವ ಎಂಬ ಪುಸ್ತಕವನ್ನು ಓದುತ್ತಿದ್ದೆ. ಆ ಪುಸ್ತಕದಲ್ಲಿ ನಾವು ಈಗ ಯಾವ ಹೊಸ ಪ್ರಪಂಚದ ಸವಾಲನ್ನು ಎದುರಿಸುತ್ತಿದ್ದೇವೆಂಬುದನ್ನು ತಿಳಿಸಲಾಗಿದೆ. 'ನಿನ್ನೆ ಏನಿತ್ತು ಇಂದು ಏನಿದೆ?' - ನಾನು ಆ ಲೇಖಕನ ಮಾತುಗಳನ್ನು ಸ್ವಲ್ಪ ಈ ಕಾಲಕ್ಕೆ ಅನ್ವಯಿಸುವಂತೆ ಮಾರ್ಪಾಡು ಮಾಡುತ್ತೇನೆ. ಇದರ ಜೊತೆಗೆ ಮೂರನೆಯ ಅಂಶದಲ್ಲಿ 'ನಾಯಕತ್ವ'ವನ್ನು ಸೇರಿಸುತ್ತೇನೆ. ಈ ಪುಸ್ತಕವು ವಿಶೇಷವಾಗಿ ಹೇಳುತ್ತದೆಯೆಂದರೆ 'ನಿನ್ನೆ ಸರಿಯಾಗಿದ್ದು ಇಂದು ಸರಿಯಿಲ್ಲ'.

**ಜ್ಞಾನಕೇಂದ್ರದಲ್ಲಿ ನಾಯಕತ್ವದ ನಡೆ**

1. ನಿನ್ನೆ - ಪ್ರಾಕೃತಿಕ ಮೂಲ ವ್ಯಾಖ್ಯಾನಿಸಿದ ಶಕ್ತಿ
   ಇಂದು - ಜ್ಞಾನವೇ ಶಕ್ತಿ
   ಸಂಸ್ಥೆಗಳು ಸ್ವತಃ ಜ್ಞಾನಕೇಂದ್ರದ ಅಧಿಕಾರವಾಗಿರಬೇಕು
2. ನಿನ್ನೆ - ಪ್ರಭುತ್ವವೇ ಮಾದರಿ
   ಇಂದು - ಸಂಯೋಜನವೇ ಜನಾದೇಶ
   ಮೂಲ ಗುರಿಯೊಂದನ್ನು ತಲುಪಲು ಸಂಸ್ಥೆಯು ವಿವಿಧ ಕ್ಷೇತ್ರಗಳ ಅಧ್ಯಾಪಕರನ್ನು ಒಂದುಗೂಡಿಸುವ ಸಾಮರ್ಥ್ಯ ಹೊಂದಿರಬೇಕು.
3. ನಿನ್ನೆ - ನಾಯಕರ ಆದೇಶ ಮತ್ತು ನಿಯಂತ್ರಕರು
   ಇಂದು - ನಾಯಕರ ಅಧಿಕಾರ ಮತ್ತು ಬೋಧಕರ ಯೋಜನೆ.
   ಸಂಸ್ಥೆಗಳು ಸುಸ್ಥಿರ ಬೆಳವಣಿಗೆಗೆ ಬುನಾದಿ ಹಾಕಬೇಕಾಗುತ್ತದೆ.
4. ನಿನ್ನೆ - ಷೇರುದಾರರು ಮೊದಲು
   ಇಂದು - ಗ್ರಾಹಕರು ಮೊದಲು
   ಸಂಸ್ಥೆಗಳು ಗ್ರಾಹಕರಿಗೆ ಸೂಕ್ಷ್ಮತೆಯನ್ನು ಕಲಿಸಬೇಕಾಗುತ್ತದೆ.
5. ನಿನ್ನೆ - ಕೆಲಸಗಾರರು ಆದೇಶ ಪಡೆಯುತ್ತಿದ್ದರು
   ಇಂದು - ಕೆಲಸಗಾರರ ತಂಡ ನಿರ್ಧಾರ ತೆಗೆದುಕೊಳ್ಳುತ್ತದೆ.
   ಸಂಸ್ಥೆಗಳು ತಂಡದ ಮನೋಭಾವವನ್ನು ತೆರೆಸಬೇಕು.
6. ನಿನ್ನೆ - ಜ್ಯೇಷ್ಠತೆಯು ಸ್ಥಿತಿಯನ್ನು ನಿಯಂತ್ರಿಸುತ್ತಿತ್ತು
   ಇಂದು - ಸೃಜನಶೀಲತೆ ಪರಿಸ್ಥಿತಿಯನ್ನು ನಿಯಂತ್ರಿಸುತ್ತದೆ
   ಸಂಸ್ಥೆಗಳು ನೈಪುಣ್ಯತೆ ಮತ್ತು ಸೃಜನಶೀಲತೆಯನ್ನು ಕಲಿಸಬೇಕು.
7. ನಿನ್ನೆ - ಉತ್ಪಾದನೆಯ ಪ್ರಮಾಣ ಲಭ್ಯತೆಯನ್ನು ನಿರ್ಧರಿಸುತ್ತಿದೆ
   ಇಂದು - ಸ್ಪರ್ಧಾತ್ಮಕತೆಯು ಕೀಲಿಕೈ ಆಗುತ್ತದೆ.
   ಸಂಸ್ಥೆಗಳು ನಿರಂತರ ಸ್ಪರ್ಧಾತ್ಮಕತೆಯನ್ನು ಜ್ಞಾನ, ನಿರ್ವಹಣೆ ಮತ್ತು ತಂತ್ರಜ್ಞಾನದಲ್ಲಿ ತೋರಿಸಬೇಕು
8. ನಿನ್ನೆ - ಮೌಲ್ಯವು ಹೆಚ್ಚುವರಿ ಅಂಶ
   ಇಂದು - ಮೌಲ್ಯವೇ ಎಲ್ಲವೂ ಆಗಿದೆ
   ಸಂಸ್ಥೆಗಳು ಮೌಲ್ಯವರ್ಧನೆಯನ್ನು ಎಲ್ಲಾ ಹಂತದಲ್ಲೂ ಮೂಡಿಸಲು ಪ್ರೋತ್ಸಾಹಿಸಬೇಕು.
9. ನಿನ್ನೆ - ಪ್ರತಿಯೊಂದೂ ಸ್ಪರ್ಧಾತ್ಮಕ
   ಇಂದು - ಪ್ರತಿಯೊಂದೂ ಗ್ರಾಹಕಾತ್ಮಕ
   ಸಂಸ್ಥೆಗಳು ಪ್ರತಿಕ್ರಿಯೆ ಮತ್ತು ಕ್ರಿಯೆಗಳಿಗೆ ಬೆಲೆ ನೀಡಬೇಕು



10. ನಿನ್ನೆ - ಅನುಕೂಲಸಿಂಧುವಿನ ಮೂಲಕ ಲಾಭ
    ಇಂದು - ಕಾರ್ಯ ಮತ್ತು ಸಂಪೂರ್ಣ ಸಮಗ್ರತೆಯ ಮೂಲಕ
    ಸಂಸ್ಥೆಗಳು ಸಮಗ್ರತೆಯಿಂದ ಕಾರ್ಯ ಮತ್ತು ಸಂಪೂರ್ಣತೆಯನ್ನು ಹೊಂದಲು ಪ್ರಯತ್ನಿಸಬೇಕು. ಅದನ್ನು ವಿದ್ಯಾರ್ಥಿಗಳ ಸುಸಂಸ್ಕೃತಿಯಲ್ಲಿ ಬರುವಂತೆ ಮಾಡಬೇಕು.

ಯಾವಾಗ ನಾನು ಈ ಕಾಲೇಜಿನ ವಿದ್ಯಾರ್ಥಿಗಳ ಸೃಜನಶೀಲತೆಯನ್ನು ನೋಡಿದೆನೋ ಆಗ ನನಗನ್ನಿಸಿದ್ದೂ ಸಂಸ್ಕೃತಿಯ ಶ್ರೇಷ್ಠತೆ - ಇದು ನಾವಿನ್ಯತೆ ಮತ್ತು ಸೃಜನಶೀಲತೆಯ ಸಂಯೋಜನೆ.

**ನಾವೀನ್ಯತೆ (Innovation)**

ರಾಷ್ಟ್ರವೊಂದರ ಆರ್ಥಿಕ ಬೆಳವಣಿಗೆಯು ಅಲ್ಲಿನ ಸ್ಪರ್ಧಾತ್ಮಕತೆಯ ಶಕ್ತಿಯನ್ನು ಬಿಂಬಿಸುತ್ತದೆ. ಸ್ಪರ್ಧಾತ್ಮಕತೆಯ ಶಕ್ತಿ ಜ್ಞಾನ; ಜ್ಞಾನವು ತಂತ್ರಜ್ಞಾನದಿಂದ ಬಲ ಹೊಂದಿದೆ; ತಂತ್ರಜ್ಞಾನವು ಸೃಜನಶೀಲತೆಯ ಬಲ ಹೊಂದಿದೆ. ತಂತ್ರಜ್ಞಾನ ಮತ್ತು ಸೃಜನಶೀಲತೆಗಳು ಸಂಪನ್ಮೂಲಗಳ (ಬಂಡವಾಳದ) ಬಲ ಹೊಂದಿದೆ. ಸೃಜನಶೀಲತೆಯು ಜ್ಞಾನಕ್ಕೆ ಹೊಸ ರೂಪ ಮತ್ತು ಅವಿಷ್ಕಾರವನ್ನು ಕೊಡುತ್ತದೆ. ಹಾಗೆಯೇ ನಮ್ಮ ಕಲ್ಪನೆಯು (Idea) ಪ್ರತಿ ದಿವಸ ಜೀವನಕ್ಕೆ ಹೊಸ ಅರ್ಥ ಕೊಡುತ್ತಿದೆ.

**ಸೃಜನಶೀಲತೆ (Creativity)**

ಜ್ಞಾನವು ಸಮಾಜದಲ್ಲಿ ನಿರಂತರವಾಗಿ ಆವಿಷ್ಕಾರಗೊಳ್ಳುತ್ತಿರಬೇಕು. ಆವಿಷ್ಕಾರವು ಸೃಜನಶೀಲತೆಯಿಂದ ಬರುತ್ತದೆ. ಸೃಜನಶೀಲತೆಯು ಒಳ್ಳೆಯ ಮನಸ್ಸಿನಲ್ಲಿ ಹುಟ್ಟುತ್ತದೆ. ಇದು ಎಲ್ಲಿಯಾದರೂ, ಪ್ರಪಂಚದ ಯಾವ ಭಾಗದಲ್ಲಾದರೂ ಇರಬಹುದು. ಇದು ಮೀನುಗಾರನ ಗುಡಿಸಲು ಅಥವಾ ರೈತನ ಮನೆ ಅಥವಾ ಡೈರಿ ಫಾರಂ ಅಥವಾ ದನ ಕಟ್ಟುವ ಕೊಟ್ಟಿಗೆ ಅಥವಾ ತರಗತಿ ಅಥವಾ ಪ್ರಯೋಗಶಾಲೆ ಅಥವಾ ಕೈಗಾರಿಕಾ ವಲಯ ಅಥವಾ ಸಂಶೋಧನಾ ಕೇಂದ್ರ ಎಲ್ಲಿ ಬೇಕಾದರೂ ಆಗಿರಬಹುದು. ಸೃಜನಶೀಲತೆ ಎಂಬುದು ಬಹುಮುಖ ಆವಿಷ್ಕಾರವುಳ್ಳದ್ದು. ಇಂದಿನ ಕಲ್ಪನೆಗಳ ಆಧಾರದಿಂದ, ಸೃಜನಶೀಲತೆಯ ಬುದ್ಧಿಯಿಂದ ಹೊಸ ಹೊಸ ಕಲ್ಪನೆಗಳನ್ನು ಊಹಿಸಿಕೊಳ್ಳಬಹುದು.

ಸ್ಪರ್ಧಾತ್ಮಕ ವ್ಯಕ್ತಿಯು ಬದಲಾವಣೆ, ಹೊಸತನ, ತೊಡಗಿಸಿಕೊಳ್ಳುವ ಬುದ್ಧಿ ಇವುಗಳಿಂದ ಹೊಸ ಆವಿಷ್ಕಾರಕ್ಕೆ ಕಾರಣೀಭೂತನಾಗಬಹುದು. ಸೃಜನಶೀಲತೆಯು ಒಂದು ನಿರಂತರ ಕಲೆ. ಹೊಸ ಹೊಸ ಯೋಜನೆ, ಚಿಂತನೆಗಳು, ಬದಲಾವಣೆ, ಶುಷ್ಕಾರಣಗಳಿಂದ ಉತ್ತಮ ಉತ್ಪನ್ನಗಳನ್ನು ಭರಿಸಬಹುದು. ಪ್ರಧಾನವಾಗಿ ವ್ಯಕ್ತಿಯ

ಪಾಲಿಗೆ ಇದು ಬೇರೆ ತರಹವೇ ಆಗಿ ಗೋಚರಿಸುತ್ತದೆ. ನಾವಿನ್ಯತೆ ಮತ್ತು ಸೃಜನಶೀಲತೆ ಕೊನೆಗೆ ಶ್ರೇಷ್ಠತೆಯ ಸಂಸ್ಕಾರವಾಗಿ ಹೊರಹೊಮ್ಮುತ್ತವೆ.

**ಸಂಸ್ಕೃತಿಯ ಶ್ರೇಷ್ಠತೆ (Culture of Excellence)**

ಶ್ರೇಷ್ಠ ಯೋಚನೆ ಮತ್ತು ಕಾರ್ಯಪ್ರವೃತ್ತಿಯು ಒಂದು ಒಳ್ಳೆಯ ಕಾರ್ಯಕ್ಕೆ ಬುನಾದಿ. ಶ್ರೇಷ್ಠತೆಯೆಂದರೇನು? ಸ್ನೇಹಿತರೆ, ನೀವು ನೀವೆಲ್ಲರೂ ಯುವಸಮೂಹಕ್ಕೆ ಸೇರಿರುವಿರಿ. ಶ್ರೇಷ್ಠತೆಯು ಆಕಸ್ಮಿಕವಲ್ಲ. ಅದು ಒಂದು ನಿರಂತರ ಪ್ರಕ್ರಿಯೆ; ಅಂದರೆ ವ್ಯಕ್ತಿ ಅಥವಾ ಸಂಸ್ಥೆ ಅಥವಾ ರಾಷ್ಟ್ರವು ಹೊಸತನ ಬಯಸಿದಂತೆ, ಕಾರ್ಯನಿರ್ವಹಣೆಯ ಮಟ್ಟವನ್ನೂ ಅವರವರೇ ನಿರ್ಧರಿಸುತ್ತಾರೆ. ಅವರು ತಮ್ಮ ಕಾರ್ಯ, ಕನಸು, ವೈಫಲ್ಯಗಳ ಮೂಲಕ ಗುರಿ ಸಾಧಿಸುತ್ತಾರೆ. ಕನಸುಗಳನ್ನು ಸಾಕಾರಗೊಳಿಸುತ್ತಾರೆ. ತಮ್ಮ ಸಾಮರ್ಥ್ಯವನ್ನು ಪ್ರತಿಯೊಂದು ಹಂತಗಳಲ್ಲೂ ಮುನ್ನುಗ್ಗಿ ತೋರಿಸುತ್ತಾರೆ. ಇದೊಂದು ಮುಗಿಯದ ಜೀವನ ಚಕ್ರ. ಅವರು ಅವರಲ್ಲೇ ಸ್ಪರ್ಧಾಳುಗಳನ್ನು ಹುಟ್ಟಿಸಿಕೊಳ್ಳುತ್ತಾರೆ. ಇದು ಸಂಸ್ಕೃತಿಯ ಶ್ರೇಷ್ಠತೆ. ಹೌದು ನೀವೆಲ್ಲರೂ ಸಂಸ್ಕೃತಿಯ ಶ್ರೇಷ್ಠತೆಯಲ್ಲಿ ಭಾಗಿಯಾಗಲು ಇಚ್ಛಿಸುತ್ತೀರೆಂದು ಭಾವಿಸುತ್ತೇನೆ.

ಈಗ ನಾನು ಒಬ್ಬ ಅನಾಥ ಹುಡುಗ ನೋಬೆಲ್ ಪ್ರಶಸ್ತಿಯನ್ನು ಹೇಗೆ ಪಡೆದ ಎಂಬ ವಿಷಯವನ್ನು ತಿಳಿಸುತ್ತೇನೆ.

**ಅಡ್ಡಿಯಿಲ್ಲ, ನೀನು ಯಾರಾದರೇನು?**

ಯಾರಿಯೋ ಕಪೆಚ್ಚಿ ಎಂಬಾತನ ಬಾಲ್ಯದ ಬದುಕು ತುಂಬಾ ಕಷ್ಟಕರವಾಗಿತ್ತು.. ಸುಮಾರು ನಾಲ್ಕು ವರ್ಷದವನಾಗಿದ್ದಾಗ ಆತ ತನ್ನ ತಾಯಿಯ ಜೊತೆ ಗುಡಿಸಿಲಿನಲ್ಲಿ ಇಟಾಲಿಯನ್ ಆಲ್ಪ್ಸ್ (Alps) ನಲ್ಲಿದ್ದ. ಎರಡನೆಯ ಜಾಗತಿಕ ಯುದ್ಧ ಬಂದಾಗ, ಇತರ ಬೊಹೆಮಿಯನ್ನರ ಜೊತೆ ಇವನ ತಾಯಿಯನ್ನು 'ದ ಚಾವು' ಎಂಬ ಸ್ಥಳಕ್ಕೆ ರಾಜಕೀಯ ಬಂದಿಯಾಗಿ ಕಳುಹಿಸಲಾಯಿತು. ಇದರ ಬಗ್ಗೆ ಆಕೆಗೆ ಮುಂಚಿತವಾಗಿಯೇ ಗೊತ್ತಿತ್ತು. ಹಾಗಾಗಿ ಆಕೆ ತನ್ನೆಲ್ಲಾ ವಸ್ತುಗಳನ್ನು ಮಾರಿ ಬಂದ ಹಣವನ್ನು ಸ್ನೇಹಿತರಿಗೆ ಕೊಟ್ಟು ತನ್ನ ಮಗನನ್ನು ಅವರ ಹಳ್ಳಿಯಲ್ಲಿ ಬೆಳೆಸಬೇಕೆಂದು ವಿನಂತಿಸಿದ್ದಳು. ಹೊಲದಲ್ಲಿ ಈತ ಗೋಧಿ ಬೆಳೆದು, ಒಕ್ಕಣೆ ಮಾಡಿ, ಮಿಲ್ಲಿನಲ್ಲಿ ಹಿಟ್ಟು ಮಾಡಿಸುತ್ತಿದ್ದ. ಕಾರಣಾಂತರದಿಂದ ಆತನಿಗೆ ನಾಲ್ಕುವರೆ  ವರ್ಷವಾದಾಗ ಬೀದಿಗಳಲ್ಲಿ ವಾಸಿಸುವಂಥ ಪರಿಸ್ಥಿತಿ ಬಂದಿತು. ಕೆಲವು ಸಲ ಆತ ನಿರಾಶ್ರಿತರ ಮಕ್ಕಳ ಜೊತೆ ಇದ್ದು ಬಹು ಕಾಲ ಹಸಿವೆಯಿಂದ ಬಳಲುತ್ತಿದ್ದ. ಆತ ಮುಂದೆ ದಿಕ್ಕು ಕಾಣದೆ ಅಲೆಯುತ್ತ 'ರೆಗ್ಗಿಯೋ ಎಮೆಲಿಯಾ' ಎಂಬ ನಗರಕ್ಕೆ ಬಂದ. ಅಲ್ಲಿ ಅವನು ಅಪೌಷ್ಟಿಕತೆಯಿಂದ ಆಸ್ಪತ್ರೆಗೆ ಸೇರಿದ್ದ. ಮುಂದೆ ರಾಜಕೀಯ ಬಂಧನದಿಂದ ಬಿಡುಗಡೆಯಾದ ಆತನ ತಾಯಿ ಇವನನ್ನು ಹುಡುಕುತ್ತಾ ಬಂದು ಇವನೊಟ್ಟಿಗೆ ಸೇರಿಕೊಂಡಳು. ಆಗ ಆತನಿಗೆ 9 ವರ್ಷ. ಕೆಲವೇ



ದಿನಗಳಲ್ಲಿ 'ಕಪೆಚ್ಚಿ' ಮತ್ತು ಆತನ ತಾಯಿ ಹಡಗಿನಲ್ಲಿ ಪ್ರಯಾಣ ಮಾಡಿ ಅಮೆರಿಕದಲ್ಲಿದ್ದ ತನ್ನ ಹತ್ತಿರದ ಬಂಧುಗಳ ಮನೆಗೆ ಸೇರಿದರು.

ಆತ ಅಲ್ಲಿ 3ನೇ ತರಗತಿಗೆ ಸೇರಿದ. ಆಟದಲ್ಲೂ ಆಸಕ್ತಿ ಇತ್ತು. ರಾಜ್ಯಶಾಸ್ತ್ರ ವಿಷಯವನ್ನು ಅಧ್ಯಯನ ಮಾಡಿದ. ಮುಂದೆ ಅದು ಇಷ್ಟವಾಗದೆ ವಿಜ್ಞಾನ ವಿಷಯಕ್ಕೆ ಬದಲಾವಣೆ ಪಡೆದ. ಮುಂದೆ 1961 ರಲ್ಲಿ ಗಣಿತಶಾಸ್ತ್ರದಲ್ಲಿ ಪದವಿ ಪಡೆದನು. ಜೊತೆಗೆ ಭೌತಶಾಸ್ತ್ರ ಮತ್ತು ರಸಾಯನಶಾಸ್ತ್ರಗಳಲ್ಲೂ ಪರಿಣತಿ ಹೊಂದಿದ. ಅನಂತರ ಭೌತಶಾಸ್ತ್ರವನ್ನು ಬಿಟ್ಟು ಪರಮಾಣುಜೀವಶಾಸ್ತ್ರವನ್ನು (Molecular Biology) ಜೆ.ಡಿ. ವ್ಯಾಟ್ಸನ್‌ರ ಸಲಹೆಯಂತೆ ಅಧ್ಯಯನಕ್ಕೆ ಆಯ್ದುಕೊಂಡ. ಸಣ್ಣಪುಟ್ಟ ಸಂಶೋಧನಾ ವಿಷಯಗಳ ಬಗ್ಗೆ ಅವನು ತಲೆಕೆಡಿಸಿಕೊಳ್ಳಲೇ ಇಲ್ಲ.

ಅವನ ಮೂಲೋದ್ದೇಶವು ಜೀನ್‌ಗಳ (Gene)ಬಗ್ಗೆ ತಿಳುವಳಿಕೆ ಪಡೆಯುವುದೇ ಆಗಿತ್ತು. 1980 ರಲ್ಲಿ ಆ ಕ್ಷೇತ್ರದಲ್ಲಿ ಪ್ರಯೋಗಗಳನ್ನು ಪ್ರಾರಂಭಿಸಿದ ನಂತರ ಆತನಿಗೆ 1984 ರಲ್ಲಿ ಇದರಲ್ಲಿ ತನಗೆ ಯಶಸ್ಸು ಖಂಡಿತ ದೊರಕುವುದೆಂಬ ನಂಬಿಕೆ ಬಂದಿತು. ಮೂರು ವರ್ಷಗಳ ನಂತರ, ಅವನು ತನ್ನ ಪ್ರಯೋಗವನ್ನು ಇಲಿಗಳ ಮೇಲೆ ಪ್ರಯೋಗಿಸಿದ. 1989 ರಲ್ಲಿ ರೂಪಾಂತರಗೊಂಡ ಮೊದಲ ಇಲಿಯನ್ನು ಸೃಷ್ಟಿಸಿದ. ಇದರ ನಂತರ ಡಾ. ಕಪೆಚ್ಚೆ ಬೇರೆ ಬೇರೆ ಸಂಶೋಧಕರಿಗೆ ತಾನು ಕಂಡುಹಿಡಿದ ಮಾಹಿತಿಯನ್ನು ಹಾಗೂ ಜೆನೆಟಿಕ್ ಕೋಡ್ ಅನ್ನು (Genetic Code) ಬಳಸಿಕೊಳ್ಳಲು ಅನುಮತಿ ನೀಡಿದ. ಜೀನ್‌ಗಳ ಅಂತರವನ್ನು ವಿಂಗಡಿಸಿ ಮನುಷ್ಯನ ರೋಗಕ್ಕೆ ಮದ್ದನ್ನು ಪ್ರಾಣಿಮೂಲದಿಂದ ಕಂಡುಹಿಡಿಯಲು ಸಹಾಯ ಮಾಡಿದ. ಇದರ ಮುಂದುವರೆದ ಸಂಶೋಧನೆಯು ಆಲ್‌ಜಿಮರ್ಸ್ (Alzheimer's) ಮತ್ತು ಕ್ಯಾನ್ಸರ್ ರೋಗಗಳ ನಿವಾರಣೆಗೆ ಸಹಾಯ ಮಾಡಿತು. 2007 ರಲ್ಲಿ ಈತನಿಗೆ ನೊಬೆಲ್ ಪ್ರಶಸ್ತಿ ದೊರಕಿತು. ಇವನ ಜೀವನ ಏನು ಹೇಳುತ್ತದೆಂದರೆ

ನೀನು ತಾರೆಯ ಮೇಲೆ ಇರಲು ಅಪೇಕ್ಷಿಸಿದರೆ,
ನೀನು ಯಾರೇ ಆದರೂ ಪರವಾಗಿಲ್ಲ
ನಿನ್ನ ಹೃದಯ ಏನನ್ನು ಅಪೇಕ್ಷಿಸಿದರೂ
ನಿನಗದು ದೊರಕುತ್ತದೆ.

ಸ್ನೇಹಿತರೆ, ಸಮಗ್ರವಾದ ಒಂದು ಪದ್ಧತಿಯನ್ನು ಹೊಂದಬೇಕಾದರೆ ಯಾವ ತರಹದ ಗುಂಪು ಬೇಕೆಂಬುದನ್ನು ತಿಳಿಯಬೇಕಾದರೆ ಅದು ವಸ್ತುವಿಜ್ಞಾನಿ, ಎಲೆಕ್ಟ್ರಾನಿಕ್ಸ್ ಇಂಜಿನಿಯರ್, ಜೀವವಿಜ್ಞಾನಿ, ವೈದ್ಯ, ನ್ಯಾನೋತಂತ್ರಜ್ಞ ಇವರೆಲ್ಲರೂ ಜೊತೆಗೂಡಿರ ಬೇಕಾಗುತ್ತದೆ. ವಿಜ್ಞಾನವು ಹಲವು ಶಾಖೆಗಳಿಂದ ತರಹೆವಾರಿ ಸವಾಲುಗಳನ್ನು ಎದುರಿಸಲು 21ನೇ ಶತಮಾನದ ಇಂಜಿನಿಯರ್‌ಗಳಿಗೆ ಬಹಳಷ್ಟು ಅವಕಾಶವಿರುತ್ತದೆ.

**ಹಾರ್ವರ್ಡ್ ವಿಶ್ವವಿದ್ಯಾನಿಲಯದ ಅನುಭವ**

ಸಂಯೋಜನೆಯು ವಿಜ್ಞಾನದಲ್ಲಿ ಪರಸ್ಪರ ಪೂರಕವಾಗಿರುತ್ತದೆ ಎನ್ನುವುದಕ್ಕೆ. ಒಂದು ಉದಾಹರಣೆ ಕೊಡುತ್ತೇನೆ. ಕೆಲವು ಸಮಯದ ಹಿಂದೆ ನಾನು ಹಾರ್ವರ್ಡ್ ವಿಶ್ವವಿದ್ಯಾನಿಲಯಕ್ಕೆ ಹೋಗಿದ್ದೆ. ಅಲ್ಲಿರುವ ಹಾರ್ವರ್ಡ್ ಸ್ಕೂಲ್ ಆಫ್ ಇಂಜಿನಿಯರಿಂಗ್ ಅಂಡ್ ಅಪ್ಲೈಡ್ ಸೈನ್ಸ್‌ನಲ್ಲಿ ಹಲವು ಪ್ರಖ್ಯಾತ ಪ್ರಾಧ್ಯಾಪಕರ ಪ್ರಯೋಗಶಾಲೆಗಳಿಗೆ ಭೇಟಿ ಕೊಟ್ಟಿದ್ದೆ.

ಪ್ರೊ. ಹಾಂಗ್ ಕಾನ್ ಪಾರ್ಕ್‌ರವರು ನನಗೆ ನ್ಯಾನೋ ಸೂಜಿಗಳನ್ನು ಹೇಗೆ ರೂಪಿಸಲಾಯಿತೆಂದು ತಿಳಿಸಿದರು. ಈ ಸೂಜಿಗಳು ಗುರಿಯಾಗಿಸಿದ ಏಕೈಕ ಕೋಶಕ್ಕೆ ತನ್ನಲ್ಲಿರುವ ದ್ರವವನ್ನು ಅದರಲ್ಲಿ ಹೇಗೆ ಹರಿಸುತ್ತದೆಂಬುದನ್ನು ತಿಳಿಸಿದರು. ಪ್ರೊ. ವಿನೋದ್ ಮನೋಹರನ್‌ರವರು ಜೀವವಿಜ್ಞಾನವು ನ್ಯಾನೊ (Nano) ಪದಾರ್ಥವಿಜ್ಞಾನಕ್ಕೆ ಹೇಗೆ ಸಹಾಯ ಮಾಡಿದೆಯೆಂಬುದನ್ನು ವಿವರಿಸಿದರು. ಅವರು DNA ಘಟಕಗಳು ಹೇಗೆ ರೂಪ ಪಡೆದುಕೊಳ್ಳುತ್ತವೆ ಎಂಬುದನ್ನು ತೋರಿಸಿದರು. ಇವೆಲ್ಲವುಗಳಿಂದ ಮಾನವಸಹಾಯವಿಲ್ಲದೆ ಮೊದಲೇ ರೂಪಿಸಿದ ನ್ಯಾನೋ ಪದಾರ್ಥಗಳ ಸಮ್ಮಿಲನ ಬಾಹ್ಯಾಕಾಶದಲ್ಲಿ ಹೇಗೆ ಉಪಯೋಗಕ್ಕೆ ಬರುತ್ತದೆ ಎಂಬುದನ್ನು ತಿಳಿಸಲಾಯಿತು. ಒಂದೇ ಕಟ್ಟಡದಲ್ಲಿ ಹೇಗೆ ಎರಡು ಬಗೆಯ ಸಂಯುಕ್ತ ವಸ್ತುಗಳನ್ನು ವಿಜ್ಞಾನಿಗಳು ತಯಾರಿಸುತ್ತಾರೆಂಬುದನ್ನು ನೋಡಿ ನನಗೆ ಆಶ್ಚರ್ಯವಾಯಿತು.

ಇದೇ ರೀತಿ ನಾನು ಇಂಗ್ಲೆಂಡಿನಲ್ಲಿ ಎಡಿನ್‌ಬರ್ಗ್ ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡಿದ್ದೆ. ಅಲ್ಲಿ ಪ್ರೊ. ಸಿದ್ಧಾರ್ಥ ಚಂದ್ರನ್ ಅವರು ನನಗೆ ರೀಜನರೇಟಿವ್ ನ್ಯೂರಾಲಜಿ ಕ್ಲಿನಿಕ್ ತೋರಿಸಿದರು. ಅಲ್ಲಿ ಮಾನಸಿಕ ಮತ್ತು ನರ ದೌರ್ಬಲ್ಯವನ್ನು ಅರಿತುಕೊಳ್ಳುವ ತಂತ್ರಜ್ಞಾನವನ್ನು ನೋಡಿದೆ. ಅವರು ತಮ್ಮ ಸಂಶೋಧನೆಯಾದ ಅಕ್ಷಿಪಟಲದ (ರೆಟಿನಾ) ತೊಂದರೆಯನ್ನು ಕಂಡು ಹಿಡಿಯುವ ಬಗ್ಗೆ ಮ್ಯಾಪಿಂಗ್ ತಂತ್ರಜ್ಞಾನ ಮಾಡುವ ಮತ್ತು ವಿಶ್ಲೇಷಿಸುವ ಬಗ್ಗೆ ಹೇಳಿದರು. ಅತಿ ಸಣ್ಣದಾದ ಅಕ್ಷಿಪಟಲದ ನಾಳಗಳ ಅಧ್ಯಯನ ನನಗೆ ಆಶ್ಚರ್ಯವನ್ನುಂಟುಮಾಡಿತು. ಕಣ್ಣು ಮತ್ತು ಮೆದುಳುಗಳ ಸಂಪರ್ಕಗಳ ಬಗ್ಗೆಯೂ ಅಲ್ಲಿ ಅಧ್ಯಯನ ನಡೆಯುತ್ತಿರುವುದನ್ನು ನೋಡಿದೆ.

ನನಗೆ ನಂಬಿಕೆ ಇದೆ, ಇಲ್ಲಿ SJCE ಅಧ್ಯಾಪಕವೃಂದದವರು ಕಡೆಯಪಕ್ಷ ವಿದ್ಯಾರ್ಥಿಗಳಿಗೆ ವಿಭಿನ್ನ ವಿಭಾಗಗಳ ಸಮ್ಮಿಳನದಿಂದ ಕೂಡಿದ ತಂತ್ರಜ್ಞಾನದ ಮೂಲಕ ಮೂರು ತಿಂಗಳ ಅವಧಿಯ ಚಿಕ್ಕದೊಂದು ಯೋಜನಾಕಾರ್ಯವನ್ನು (Project Work) ಆಯೋಜಿಸಬಹುದಾಗಿದೆ.

ಸ್ನೇಹಿತರೆ, ನಾನು ಇತ್ತೀಚೆಗೆ 'ಸಯನ್ಸ್' ಪತ್ರಿಕೆಯಲ್ಲಿ ಒಂದು ಲೇಖನವನ್ನು ಓದಿದೆ. ಅದು ಡಿಎನ್‌ಎ ನ್ಯಾನೋ ಉಪಕರಣಗಳ ಬಗ್ಗೆ. ಅದರಲ್ಲಿ ಕೈಗಳನ್ನು ಚಲಿಸುವ ರೋಬೋಗಳು, ತನಗೆ ತಾನೇ ತೆಗೆಯುವ ಮುಚ್ಚಿಕೊಳ್ಳುವ ಪುಸ್ತಕಗಳು, ಗುಂಡಿ



(Button) ಒತ್ತುವ ಗೇರುಗಳು ಹೀಗೆ–ಇತರ ಆವಿಷ್ಕಾರಗಳ ಬಗ್ಗೆ ಅಲ್ಲಿ ವಿವರಿಸಲಾಗಿತ್ತು. ಅಲ್ಲಿ ಪ್ರಸ್ತಾಪವಾಗಿದ್ದ ಇನ್ನೊಂದು ವಿಶೇಷ ಮಾಡ್ಯುಲಾರ್ (Modular) 3 D ಕಟ್ಟಡದ ವಿವಿಧ ಸಂಯೋಜನೆಗಳು. ಇದುವೇ ಪೂರ್ಣ DNA ಆಧಾರಿತ ನ್ಯಾನೋ ಯಂತ್ರಗಳ ಆವಿಷ್ಕಾರ. ಇದು ಒಂದು ಹೊಸ ಬಗೆಯ ಅಧ್ಯಯನ. ಇದರ ಹೆಸರು DNA ಒರಿಗಾಮಿ (DNA Origami). ಇವು ತುಂಬ ಮಾಡೆಲ್ ಅಧ್ಯಯನಕ್ಕೆ ಉಪಯೋಗ ವಾಗುವಂಥದ್ದು.

ಈ ಎಲ್ಲ ಬಗೆಯ DNA ರೂಪಾಂತರಗಳ ಬಳಕೆಯಿಂದ ಸುಸ್ಥಿರ ಅಭಿವೃದ್ಧಿಗೆ ಅತ್ಯುತ್ತಮ ತಾಂತ್ರಿಕತೆ ಸಹಾಯ ದೊರೆಯುತ್ತದೆ. ವಿಜ್ಞಾನ ಮತ್ತು ಪರಿಸರ ಎರಡೂ ಒಟ್ಟಾಗಿಯೇ ಹೋಗಬೇಕು. ಮುಂದೆ ಇದನ್ನು ನಾನು ನಾಲ್ಕು ಆಯಾಮದ (4-D) Bio-Nano-Info-Eco ಎಂದು ಕರೆಯಲು ಇಚ್ಛಿಸುತ್ತೇನೆ.

**ಸಮಾರೋಪ: ನೀವು ಏನನ್ನು ಜ್ಞಾಪಿಸಿಕೊಳ್ಳುತ್ತೀರಿ?**

ಸ್ನೇಹಿತರೆ, ಅಂತಿಮವಾಗಿ ನೀವು ಏನನ್ನು ಜ್ಞಾಪಿಸಿಕೊಳ್ಳುತ್ತೀರಿ? ನೀವು ನೀವಾಗಿಯೇ ಸುಂದರವನ್ನಾಗಿ ರೂಪುಗೊಂಡು ನಿಮ್ಮ ಜೀವನವನ್ನು ಮಾಡುತ್ತೀರೆಂಬುದು, ಅಲ್ಲವೆ? ಒಂದು ಕಾಗದದಲ್ಲಿ ಈಗ ಬರೆಯಿರಿ. ಆ ಕಾಗದವು ನಿಮ್ಮ ಜೀವನದ ಬಹಳ ಮುಖ್ಯ ಕಾಗದವಾಗಲಿ. ನೀವೇನಾಗುವಿರಿ? ಏನು ಮಾಡುವಿರಿ? ಏನು ಸೃಜನಶೀಲತೆಯನ್ನು ಬೆಳೆಸುವಿರಿ? ಎಂಬುದನ್ನು. ಮುಂದೆ ಇದೇ ಕಾಗದವು ಹೊಸ ಸಂಶೋಧನೆಗೆ ನಾಂದಿಯಾಗಲಿ ಅದರಿಂದ ಮನುಕುಲಕ್ಕೆ ಉಪಯೋಗವಾಗಲಿ.

ನಿಮಗೆಲ್ಲರಿಗೂ ನನ್ನ ಶುಭಕಾಮನೆಗಳು. ಜ್ಞಾನದೇಗುಲವನ್ನು ಕಟ್ಟುವಲ್ಲಿ ನಿಮ್ಮ ಪಾತ್ರ ದೊಡ್ಡದಾಗಿರಲಿ. ನಿಮ್ಮೆಲ್ಲರಿಗೂ ಶುಭವಾಗಲಿ ದೇವರು ಒಳ್ಳೆಯದು ಮಾಡಲಿ.

**ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಬೋಧಿಸಿದ ಸಪ್ತ ಸೂತ್ರಗಳು**

1. ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನವು ನನ್ನ ಜೀವಾವಧಿಯ ಕಾರ್ಯಕ್ಷೇತ್ರ, ನಾನು ಇಲ್ಲಿ ಕಾಯಕ-ಕಾಯಕ-ಕಾಯಕ ಮಾಡಿ ಗೆಲ್ಲುತ್ತೇನೆ.
2. ನಾನು ಎಲ್ಲೇ ಇರಲಿ, ನನಗೊಂದು ಯೋಚನೆ ಬರುತ್ತದೆ. ಅದೇನೆಂದರೆ ನಾನು ಸೃಜಿಸಬೇಕು, ಸಂಶೋಧಿಸಬೇಕು, ಹೊಸದನ್ನು ಕಂಡುಹಿಡಿಯಬೇಕು.
3. ನಾನು ಒಂದು ದೊಡ್ಡ ತಾಂತ್ರಿಕ ಸಂಶೋಧನೆಯ ಗುರಿಯನ್ನು ಹೊಂದಿ, ಅದನ್ನು ಸಾಧಿಸುತ್ತೇನೆ.
4. ನನ್ನ ಆತ್ಮಸ್ನೇಹಿತರೆಂದರೆ ವಿಜ್ಞಾನಿಗಳು, ತಂತ್ರಜ್ಞಾನಿಗಳು, ಒಳ್ಳೆಯ ಅಧ್ಯಾಪಕರು ಹಾಗೂ ಒಳ್ಳೆಯ ಪುಸ್ತಕಗಳು.
5. ನಾನು ಎಂದೂ ಸೋಲುವುದಿಲ್ಲ. ನಾನು ಸಮಸ್ಯೆಗೆ ನಾಯಕ, ಸಮಸ್ಯೆಯನ್ನು ಸೋಲಿಸಿ ಮುನ್ನುಗ್ಗುತ್ತೇನೆ.

6. ನೀರು, ಇಂಧನ, ವಾಸ್ತವ್ಯ, ತ್ಯಾಜ್ಯವಸ್ತು ನಿರ್ವಹಣೆ, ಪರಿಸರ ಸಂಬಂಧಿ ಹೀಗೆ ಸಮಸ್ಯೆ ಯಾವುದೇ ಇರಲಿ, ಅದಕ್ಕೆ ತಾಂತ್ರಿಕ ಉತ್ತರವನ್ನು ಕೆಲಸ-ಕೆಲಸ-ಕೆಲಸ ಮಾಡಿ ಪರಿಹರಿಸುತ್ತೇನೆ.
7. ನನ್ನ ರಾಷ್ಟ್ರಧ್ವಜ ನನ್ನ ಹೃದಯದಲ್ಲಿ ಹಾರಾಡುತ್ತದೆ. ನನ್ನ ದೇಶಕ್ಕೆ ನಾನು ಕೀರ್ತಿ ತರುತ್ತೇನೆ.

## ರಜೆಯಲ್ಲ; ಕೆಲಸ ಮಾಡುವುದೇ ನಿಜವಾದ ನಮನ

ಅಧಿಕಾರದಲ್ಲಿದ್ದ ರಾಷ್ಟ್ರ ಅಥವಾ ರಾಜ್ಯದ ಪ್ರಮುಖರು ಗತಿಸಿದಾಗ ಅವರ ಗೌರವಾರ್ಥ ಸರ್ಕಾರಿ ರಜೆ ಘೋಷಿಸುವುದು ನಮ್ಮ ದೇಶದಲ್ಲಿ ನಡೆದುಕೊಂಡು ಬಂದಿರುವ ಪರಿಪಾಠವಾಗಿದೆಯಷ್ಟೆ. ರಜೆ ಘೋಷಿಸುವುದರ ಹಿಂದಿನ ಉದ್ದೇಶವೆಂದರೆ ಆ ಪ್ರಮುಖರಿಗೆ ಗೌರವ ಸೂಚಿಸುವುದರ ಜೊತೆಗೆ ಅವರ ಆದರ್ಶ, ಮಾದರಿ ಗುಣಗಳನ್ನು, ಕೆಲಸಗಳನ್ನು ನಾವು ಮೆಲುಕು ಹಾಕಿ ಅವುಗಳನ್ನು ನಾವು ಕೂಡ ನಮ್ಮಲ್ಲಿ ಅಳವಡಿಸಿಕೊಳ್ಳಲು ಪಣ ತೊಡುವು ದಾಗಿದೆ. ಹಾಗೆ ಮಾಡಿದರೆ ಮಾತ್ರವೇ ರಜೆ ಕೊಟ್ಟಿದ್ದಕ್ಕೂ ಸಾರ್ಥಕವಾಗುತ್ತದೆ.

ಆದರೆ, ವಾಸ್ತವದಲ್ಲಿ ನಡೆಯುತ್ತಿರುವುದೇ ಬೇರೆ. ರಜೆ ಕೊಟ್ಟ ದಿನವನ್ನು ಸಾರ್ಥಕ ಮಾಡಿಕೊಳ್ಳುವುದಕ್ಕಿಂತ ಮಜವಾಗಿ ಕಳೆಯುವುದಕ್ಕೆ ಬಳಸುವುದೇ ಹೆಚ್ಚು. ಹೀಗೆ ಮಾಡುವುದರಿಂದ ಮಡಿದ ಗಣ್ಯರಿಗೆ ಗೌರವದ ಬದಲು ಅಗೌರವವನ್ನೇ ಮಾಡಿದಂತಾಗುತ್ತದೆ. ಅಷ್ಟೇ ಅಲ್ಲ, ಒಂದು ದುಡಿಮೆಯ ದಿನವೂ ವ್ಯರ್ಥವಾದಂತಾಗುತ್ತದೆ. ಈ ಹಿನ್ನೆಲೆಯಲ್ಲೇ ಇರಬೇಕು ಮಾಜಿ ರಾಷ್ಟ್ರಪತಿ ಡಾ. ಎಪಿಜೆ ಅಬ್ದುಲ್ ಕಲಾಂ ಅವರು, 'ನಾನು ಮರಣ ಹೊಂದಿದರೆ ನನಗಾಗಿ ರಜೆ ಕೊಡಬೇಡಿ; ಅದರ ಬದಲಿಗೆ ಒಂದು ದಿನ ಹೆಚ್ಚು ಕೆಲಸ ಮಾಡಿದರೆ ಅದಕ್ಕಿಂತ ನನಗೆ ಕೊಡುವ ದೊಡ್ಡ ಗೌರವ ಮತ್ತೊಂದಿಲ್ಲ' ಎಂದು ಹೇಳಿದ್ದರು.

ಸೋಮವಾರ ನಮ್ಮನ್ನು ಅಗಲಿದ 'ಜನರ ರಾಷ್ಟ್ರಪತಿ' ಎಂದೇ ಹೆಸರಾಗಿದ್ದ ಕಲಾಂ ಅವರ ಗೌರವಾರ್ಥ ಅವರು ಬಯಸಿದ್ದಂತೆ ದೇಶದಲ್ಲಿ ಸರ್ಕಾರಿ ರಜೆ ಘೋಷಿಸಲಿಲ್ಲ; ಬದಲಿಗೆ ದೇಶ ಕೆಲಸ ಮಾಡಿತು. ಅವರ ಆದರ್ಶಗಳನ್ನು ಕೆಲಸ ಮಾಡುತ್ತಲೇ ಸ್ಮರಿಸಿತು. ಆ ಮೂಲಕ ಅವರಿಗೆ ನಿಜವಾದ ಗೌರವವನ್ನು ಸಲ್ಲಿಸಿತೆಂದೇ ಹೇಳಬೇಕು. ಇವತ್ತು ಮಾಡಿದ್ದು ಇನ್ನು ಮುಂದೆ ಪರಿಪಾಠ ವಾಗಬೇಕು. ಗಣ್ಯರು ಮಡಿದಾಗ ಘೋಷಿಸುವ ಸರ್ಕಾರಿ ರಜೆ ನಿಲ್ಲಬೇಕು; ಹಾಗೆ ಮಾಡಿದರೆ ಮಾತ್ರವೇ ಕಲಾಂ ಕನಸು ಕಂಡಿದ್ದಂತೆ ದೇಶ ಕಟ್ಟುವ ಕೆಲಸ ನಡೆದಂತಾಗುತ್ತದೆ. ದೇಶ ಅಭಿವೃದ್ಧಿ ಕಾರಣಲು ಸಾಧ್ಯವಾಗುತ್ತದೆ. ಅದೇ ಈಗ ಆಗಬೇಕಾದ್ದು. (ಸಂಪಾದಕೀಯ)

**ರಾಜಶೇಖರ ಕೋಟಿ**
**ಸಂಪಾದಕರು: ಆಂದೋಲನ ದಿನಪತ್ರಿಕೆ (ಜುಲೈ 29, 2015)**

# ಶ್ರೇಷ್ಠ ಮಾನವತಾವಾದಿ, ವಿಜ್ಞಾನಿ-ಸಂತ, ಅಪ್ರತಿಮ ಶಿಕ್ಷಕ, ಭವ್ಯ ಭಾರತದ ಕನಸಿಗ, ಮಹಾನ್ ಕರ್ಮಯೋಗಿ ಕಲಾಂ

**ಕೆ. ನರಸಿಂಹ**

ಅಬ್ದುಲ್ ಕಲಾಂ ಅವರಂತೆ ಬಾಳುವುದು, ಬದುಕುವುದು ಯಾರಿಗಾದರೂ ದುರ್ಲಭ, ದುಸ್ತರ. ಹಾಗೆಯೇ, ಅವರಂತೆ ಸಾಯುವುದು ಕೂಡ! ಸುಖಕರ ಸಾವಿನ ವರ ಪಡೆದುಕೊಂಡವರಂತೆ ಅವರು ತಮ್ಮ 83 ವಸಂತಗಳ ಅರ್ಥಪೂರ್ಣ ಬದುಕನ್ನು ಪೂರೈಸಿ, ತಮ್ಮ ಹಿಂದೆ ಅಳಿಸಲಾಗದ ಹೆಜ್ಜೆಗಳನ್ನು ಮೂಡಿಸಿ, ಇಹಲೋಕದ ಯಾತ್ರೆಯನ್ನು ಮುಗಿಸಿದ ವೀರ ಬ್ರಹ್ಮಚಾರಿ. ತಮಗೆ ಅತ್ಯಂತ ಪ್ರಿಯವೂ ಆಪ್ತವೂ ಆದ ವಿದ್ಯಾರ್ಥಿಗಳಿಗೆ ಪಾಠ ಮಾಡುತ್ತಲೇ ಕೊನೆಯುಸಿರೆಳೆದ ಅಸಾಮಾನ್ಯ ಕರ್ಮಯೋಗಿ. ಅವರದು ಒಂದು ರೀತಿಯಲ್ಲಿ ಇಚ್ಛಾಮರಣ.

ಈಶಾನ್ಯ ಭಾರತದ ಆಯಕಟ್ಟಿನ ಮೇಘಾಲಯ ರಾಜ್ಯದ ರಾಜಧಾನಿ ಶಿಲ್ಲಾಂಗ್‌ನ ವಿಮಾನ ನಿಲ್ದಾಣದಲ್ಲಿ ಜುಲೈ 27ರಂದು ಬಂದಿಳಿದಾಗ, ಎಂದಿನಂತೆ ನಗುಮೊಗದಿಂದ ಸರ್ವರತ್ತ ಕೈಬೀಸಿ, ನಮಸ್ಕಾರ ಹೇಳಿ ಅಲ್ಲಿಯ ರಾಜೀವ ಗಾಂಧಿ ಭಾರತೀಯ ನಿರ್ವಹಣಾ ಸಂಸ್ಥೆ (ಐಐಎಂ)ಯ ವಿದ್ಯಾರ್ಥಿಗಳಿಗೆ ಪಾಠ ಹೇಳಲು ತೆರಳಿದರು. ಅವರು ವಿಮಾನ ನಿಲ್ದಾಣದಲ್ಲಿ ಜನತೆಗೆ ಮಾಡಿದ ನಮಸ್ಕಾರವೇ ಕೊನೆಯ ನಮಸ್ಕಾರವಾದೀತೆಂದು ಯಾರಿಗಾದರೂ ಊಹಿಸಲು ಹೇಗೆ ಸಾಧ್ಯ? ಐಐಎಂನಲ್ಲಿ ಉಪನ್ಯಾಸ ನೀಡುತ್ತಲೇ ಕುಸಿದುಬಿದ್ದರು. ಮತ್ತೆ ಮೇಲೇಳಲೇ ಇಲ್ಲ. ಯಾರದಾದರೂ ಮಹಾನ್ ವ್ಯಕ್ತಿಯ ಸಾವಿನ ವೈಖರಿಯಲ್ಲಿ ಅವರ ಜೀವನದ ಸಂದೇಶ ಅಡಗಿರುವುದನ್ನು ಗುರುತಿಸುವುದಾದರೆ, ಅದನ್ನು ನಿಶ್ಚಿತವಾಗಿ ಭಾರತದ 11ನೆಯ ರಾಷ್ಟ್ರಪತಿ, ಸುವಿಖ್ಯಾತ ವಿಜ್ಞಾನಿ, ತಂತ್ರಜ್ಞಾನಿ ಮತ್ತು ಭವ್ಯ ಭಾರತದ ಕನಸುಗಾರ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಅವರ ಮರಣದಲ್ಲಿ ಗುರುತಿಸಲು ಸಾಧ್ಯ.

"ಜೀವನದ ಕೊನೆಯ ಕ್ಷಣದವರೆಗೂ ಲವಲವಿಕೆಯಿಂದ ಇದ್ದು, ದೇವರು ತನಗೆ ನಿರ್ವಹಿಸಿದ ಕಾರ್ಯವನ್ನು ನಿರ್ವಂಚನೆಯಿಂದ ಮಾಡುತ್ತಲೇ ಇರಬೇಕು" ಪ್ರಾಯಶಃ ಇದು ಅವರ ಸಾವಿನ ಸಂದೇಶವಾಗಿರಬೇಕು. ಅವರು ತಮ್ಮ ಜೀವನದ ಒಂದು ಕ್ಷಣವನ್ನು ಕೂಡ ವ್ಯರ್ಥವಾಗಿ ಕಳೆದವರಲ್ಲ. ಆಜನ್ಮ ಬ್ರಹ್ಮಚಾರಿಯಾಗಿದ್ದ ಅವುಲ್

ಫಕೀರ್ ಜೈನುಲಾಬ್ದೀನ್ ಅಬ್ದುಲ್ ಕಲಾಂ ಮಹಾನ್ ಸಂತನಂತೆ ಬಾಳಿ, ಪರಿವ್ರಾಜಕನಂತೆ ಸಂಚರಿಸಿ ಭಾರತವನ್ನು ಎಚ್ಚರಿಸಿದವರು, ಎತ್ತರಕ್ಕೇರಿಸಿದವರು. ಮಹಾನ್ ತತ್ತ್ವಜ್ಞಾನಿ ಮತ್ತು ದಾರ್ಶನಿಕ ಸರ್ವೇಪಲ್ಲಿ ರಾಧಾಕೃಷ್ಣನ್ ಅವರ ಅನಂತರ ಭಾರತದ ಪತಾಕೆಯನ್ನು ಅಂತಾರಾಷ್ಟ್ರೀಯ ದಿಗಂತದಲ್ಲಿ ಅತಿ ಎತ್ತರದಲ್ಲಿ ಎತ್ತಿ ಹಿಡಿದ ಇನ್ನೋರ್ವ ರಾಷ್ಟ್ರಪತಿ ಎಂದರೆ ಪ್ರಾಯಶಃ ಅಬ್ದುಲ್ ಕಲಾಂ ಒಬ್ಬರೇ.

**ಅನನ್ಯ, ಅಸಾಮಾನ್ಯ, ಅವರ್ಣನೀಯ ಸಾಧನೆ**

ಸರ್ವೋತ್ಕೃಷ್ಟ ವಿಜ್ಞಾನಿ, ತಂತ್ರಜ್ಞಾನಿ, ಬೋಧಕ, ವೈಜ್ಞಾನಿಕ ಆಡಳಿತಗಾರ, ಭಾರತದ ಕ್ಷಿಪಣಿ ಪಿತಾಮಹ, ಸ್ವದೇಶಿ ಉಪಗ್ರಹ ವಾಹಕಗಳ ಆದ್ಯ, ಅಣುಬಾಂಬಿನ ಅಧ್ವರ್ಯು, ಭವ್ಯ-ಶಕ್ತಿಶಾಲಿ-ಸಮೃದ್ಧ ಭಾರತದ ಕನಸುಗಾರ ಮತ್ತು ಈ ಮಹಾನ್ ರಾಷ್ಟ್ರದ ರಾಷ್ಟ್ರಪತಿಯಾಗಿ ಅವರು ಮಾಡಿದ ಕಾರ್ಯ, ಗೈದ ಸಾಧನೆ, ಸಾಧಿಸಿದ ಯಶಸ್ಸು, ಸಂಪಾದಿಸಿದ ಕೀರ್ತಿ, ಪಡೆದ ಪ್ರಶಸ್ತಿ, ಪುರಸ್ಕಾರ ಇತ್ಯಾದಿಗಳು ಅನನ್ಯ, ಅಸಮಾನ, ಅಸಾಮಾನ್ಯ ಮತ್ತು ವರ್ಣಿಸಲಸದಳ. ನಡುವಿನ ಬೈತಲೆಯ ಇಕ್ಕೆಲಗಳಲ್ಲಿ ಹಣೆಯ ಮೇಲೆ ತಲೆಗೂದಲನ್ನು ಮಡಿಕೆಯಾಗಿ ಬಾಚಿಕೊಂಡು, ಚಾಚಿಕೊಳ್ಳುವ ಕೇಶವಿನ್ಯಾಸ ಅವರ ವ್ಯಕ್ತಿತ್ವದಷ್ಟೇ ವಿಶಿಷ್ಟ ಮತ್ತು ವಿನೂತನ. ಅದು ಕಲಾಂ ಬ್ರಾಂಡ್ ಹೇರ್‌ಸ್ಟೈಲೇ ಸರಿ!

ಅವರಿಗೆ ದೊರೆತ ಪ್ರಶಸ್ತಿ-ಪುರಸ್ಕಾರ-ಗೌರವಗಳು ಅಸಂಖ್ಯಾತ. ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ವಿವಿಧ ವಿಶ್ವವಿದ್ಯಾಲಯಗಳಿಂದ ದೊರೆತ ಗೌರವ ಡಾಕ್ಟರೇಟ್ ಪದವಿಗಳೇ ಬರೋಬರಿ 30! ಮೂರು ಪದ್ಮ ಪ್ರಶಸ್ತಿಗಳಾದ-ಪದ್ಮಶ್ರೀ, ಪದ್ಮಭೂಷಣ, ಪದ್ಮವಿಭೂಷಣಗಳ ಪೈಕಿ ಕೊನೆಯ ಎರಡಕ್ಕೆ ಅವರು ಭಾಜನರಾಗಿದ್ದರು. ಅನಂತರ ಅವರ ಕಿರೀಟಕ್ಕೆ ಬಂದು ಸೇರಿದ್ದು ರಾಷ್ಟ್ರದ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ 'ಭಾರತರತ್ನ'. ಆದರೆ, ಇವೆಲ್ಲಕ್ಕೂ ಕಲಶಪ್ರಾಯವೆಂಬಂತೆ ಈ ದೇಶದ ಜನತೆಯಿಂದ ಅವರಿಗೆ ಪ್ರಾಪ್ತವಾದ ಎರಡು ಉಪಾಧಿಗಳು- 'ಭಾರತದ ಕ್ಷಿಪಣಿ ಪುರುಷ' (ಮಿಸೈಲ್ ಮ್ಯಾನ್ ಆಫ್ ಇಂಡಿಯಾ) ಮತ್ತು 'ಜನಸಾಮಾನ್ಯರ ರಾಷ್ಟ್ರಪತಿ' (ಪೀಪಲ್ಸ್ ಪ್ರೆಸಿಡೆಂಟ್).

ಅವರ ಸುದೀರ್ಘ ಹಾಗೂ ಅರ್ಥಪೂರ್ಣ ಬದುಕಿನ ಕೊನೆಯ ದಿನದ ಚಟುವಟಿಕೆ ಮತ್ತು ಚಿಂತನಾಲಹರಿ ಅವರ ವ್ಯಕ್ತಿತ್ವಕ್ಕೆ ವಿಶಿಷ್ಟವಾದದ್ದು. ಅದರಿಂದ ಭಾರತದ ರೋಗಗ್ರಸ್ತ ಮನಸ್ಸಿನ ಒಂದು ಕರಾಳತೆಯ ಪರಿಚಯವೂ ಉಂಟಾಗುತ್ತದೆ. ಅವರ ಕೊನೆಯ ಉಪನ್ಯಾಸದ ವಿಷಯ 'ಜೀವಿಸಲು ಯೋಗ್ಯವಾದ ಭೂಗ್ರಹ ನಿರ್ಮಾಣ' (ಕ್ರಿಯೇಟಿಂಗ್ ಲಿವೇಬಲ್ ಪ್ಲಾನೆಟ್ ಅರ್ತ್). ಈ ವಿಷಯದ ಹರವು ಬಹುದೊಡ್ಡದು ಮತ್ತು ವಿಸ್ತೃತವಾದದ್ದು. ಭೂತಾಪ ಹೆಚ್ಚಳ, ವಾತಾವರಣ



ಬದಲಾವಣೆ, ನಿರಂತರವಾಗಿ ಹೆಚ್ಚುತ್ತಿರುವ ವಾಯು ಹಾಗೂ ಜಲಮಾಲಿನ್ಯ, ಅರಣ್ಯನಾಶ ಇತ್ಯಾದಿಗಳಿಗೆ ಕಾರಣವಾಗಿರುವ ಭೂಗ್ರಹವಾಸಿಗಳು ಭೂಮಿಯ ಮೇಲೆ ನೆಮ್ಮದಿಯಿಂದ ಜೀವಿಸುವ ಅವಕಾಶದಿಂದ ವಂಚಿತರನ್ನಾಗಿ ಮಾಡುತ್ತಿದ್ದಾರೆ ನಿಜ.

ಆದರೆ, ಅವರ ಸಾವಿನ ಹಿಂದಿನ ದಿನವೇ ಪಂಜಾಬ್‌ನಲ್ಲಿ ನಡೆದ ಭಯೋತ್ಪಾದಕರ ದಾಳಿ ಅವರನ್ನು ತಲ್ಲಣಕ್ಕೀಡು ಮಾಡಿತ್ತು. ಭಯೋತ್ಪಾದಕರ ವಿಧ್ವಂಸಕ ಕೃತ್ಯಗಳಿಂದ ಅಮಾಯಕರು ನಿರಂತರವಾಗಿ ಹತ್ಯೆಯಾಗುತ್ತಿರುವುದನ್ನು ಅಬ್ದುಲ್ ಕಲಾಂ ತಮ್ಮ ಅಂದಿನ ಉಪನ್ಯಾಸದ ವಿಷಯದೊಂದಿಗೆ ತಳುಕುಹಾಕಿಕೊಂಡಿದ್ದರೆಂದು ಅಂದು ಇಡೀ ದಿನ ಅವರ ಜತೆಗಿದ್ದ ಅವರ ನಿಕಟವರ್ತಿ ಸೃಜನಪಾಲ್ ಸಿಂಗ್ ಹೇಳುತ್ತಾರೆ. ಭಯೋತ್ಪಾದನೆ ಉಂಟುಮಾಡುತ್ತಿರುವ ಸಾಮಾಜಿಕ ಮಾಲಿನ್ಯ, ವಾತಾವರಣ ಮಾಲಿನ್ಯದಷ್ಟೇ ಅಪಾಯಕಾರಿ ಎಂಬುದು ಅವರ ತರ್ಕ.

ಅವರ ಸಾವಿಗೆ ಪೂರ್ವದಲ್ಲಿ, ನಾಲ್ಕು ದಿನಗಳ ಹಿಂದಷ್ಟೇ ಸಂಸತ್ತಿನ ಮಳೆಗಾಲದ ಅಧಿವೇಶನ ಆರಂಭವಾಗಿತ್ತು. ಪ್ರಜಾಪ್ರಭುತ್ವದ ಪರಮೋಚ್ಚ ವೇದಿಕೆಯಾದ ಸಂಸತ್ತು ಕಾರ್ಯನಿರ್ವಹಿಸದೆ ಸ್ಥಗಿತಗೊಂಡಿದ್ದರ ಬಗ್ಗೆಯೂ ಅಬ್ದುಲ್ ಕಲಾಂ ಕಳವಳ ಗೊಂಡಿದ್ದು, ಅದನ್ನು ವ್ಯಕ್ತಪಡಿಸಿದ್ದರು. ಕ್ಷುಲ್ಲಕ ವಿಷಯಗಳು, ಕಾರಣಗಳ ಮೇಲೆ, ಕೇವಲ ರಾಜಕೀಯ ದುರುದ್ದೇಶದಿಂದ ಸಂಸತ್ತಿನ ಕಾರ್ಯಕಲಾಪಗಳಿಗೆ ಅಡ್ಡಿಯುಂಟುಮಾಡಿ ಪ್ರಜಾತಂತ್ರದ ದೇಗುಲವನ್ನು ನಿಷ್ಕ್ರಿಯಗೊಳಿಸುವ, ಕಲುಷಿತ ಗೊಳಿಸುವ ಭಾರತದ 'ರಾಜಕೀಯ ಸಂಸ್ಕೃತಿ'ಯಿಂದ ಅವರು ದಿಗ್ಭ್ರಾಂತರಾಗಿದ್ದರು.

ಮೊದಲೇ ಕಾರ್ಯ ನಿರ್ವಹಿಸದೆ ನಾಲ್ಕು ದಿನಗಳಿಂದ ಸ್ಥಗಿತಗೊಂಡಿದ್ದ ಸಂಸತ್ತು, ಅಬ್ದುಲ್ ಕಲಾಂ ಅವರ ನಿಧನದ ನೆವದಲ್ಲಿ ಮತ್ತೆರಡು ದಿನಗಳ ಕಾಲ ಮುಂದೂಡಿದ್ದನ್ನು ಗಮನಿಸಿದರೆ, ಕಲಾಂ ಅವರ ಕರ್ಮಯೋಗಿತ್ವಕ್ಕೆ ಅಪಚಾರ ಬಗೆಯಬಾರದೆಂಬ ಕನಿಷ್ಠ ಎಚ್ಚರಿಕೆಯೂ ನಮ್ಮ ಸಂಸದರಿಗೆ ಇಲ್ಲದೆಹೋದದ್ದರ ಪರಿಚಯವಾಗುತ್ತದೆ.

**ಗೀತೆ-ಕುರಾನ್-ಬಾಂಬ್-ಮಿಸೈಲ್**

ಎ.ಪಿ.ಜೆ. ಅಬ್ದುಲ್ ಕಲಾಂ ಅವರನ್ನು ಓರ್ವ ಚತುರ್ಭುಜಾಕೃತಿಯ ವ್ಯಕ್ತಿಯನ್ನಾಗಿ ಊಹಿಸುವುದಾದರೆ ಅವರ ಒಂದು ಕೈಯಲ್ಲಿ ಭಗವದ್ಗೀತೆ, ಮತ್ತೊಂದು ಕೈಯಲ್ಲಿ ಕುರಾನ್, ಮೂರನೆಯದರಲ್ಲಿ ಅಣುಬಾಂಬ್ ಮತ್ತು ನಾಲ್ಕನೆಯ ಕೈಯಲ್ಲಿ ಕ್ಷಿಪಣಿ ಹೊಂದಿರುವುದನ್ನು ಊಹಿಸಬಹುದೇನೋ! ಇಸ್ಲಾಮ್ ಮತದಲ್ಲಿ ಅವರ ನಂಬಿಕೆ, ಶ್ರದ್ಧೆ ಸಹಜವಾದದ್ದೇ. ಆದರೆ ಅಷ್ಟೇ ನಂಬಿಕೆ, ಶ್ರದ್ಧೆ ಅವರಿಗೆ ಹಿಂದೂಗಳ ಪವಿತ್ರ ಗ್ರಂಥಗಳಲ್ಲಿ ಒಂದಾಗಿರುವ ಭಗವದ್ಗೀತೆಯಲ್ಲೂ ಇತ್ತು.

ಅಷ್ಟೇ ಅಲ್ಲ, ಅವರಿಗೆ ಸನಾತನ ಧರ್ಮ, ಸಂಸ್ಥೆ, ಸಂಪ್ರದಾಯ, ವಾಡಿಕೆ, ನಡವಳಿಕೆಗಳು ಇತ್ಯಾದಿಗಳಲ್ಲೂ ಆಸಕ್ತಿ, ಅಭಿರುಚಿ. ವೇದ-ಉಪನಿಷತ್ತುಗಳ ಅಧ್ಯಯನದ ಪಾಂಡಿತ್ಯ ಅವರಿಗಿರಲಿಲ್ಲವಾದರೂ ಅವರು ವೇದ-ಉಪನಿಷತ್ತುಗಳನ್ನು ಸಾಂದರ್ಭಿಕವಾಗಿ ಉಲ್ಲೇಖಿಸುತ್ತಿದ್ದರು. ಅವುಗಳ ಹಿರಿಮೆ ಮತ್ತು ಮಹತ್ತ್ವ ಕುರಿತು ಮಾತನಾಡುತ್ತಿದ್ದರು. ಇದರಿಂದಾಗಿ ಅವರು ಕೆಲವೊಂದು ಬಾರಿ ಇಸ್ಲಾಮ್ ಕಟ್ಟರ್‌ವಾದಿಗಳಿಂದ ಟೀಕೆಗೂ ಗುರಿಯಾಗುತ್ತಿದ್ದರು. ಸಂಸ್ಕೃತ ಪಾಠಶಾಲೆಗಳಿಗೆ ಹೋದಾಗ ಅಲ್ಲಿಯ ವಿದ್ಯಾರ್ಥಿಗಳೊಂದಿಗೆ ಋಗ್ವೇದದ ಆಶಯ ಕುರಿತು ಚರ್ಚಿಸುತ್ತಿದ್ದರು.

ಹಿಂದೂ ಧಾರ್ಮಿಕ ಸಂಸ್ಥೆ, ಮಠ, ಮಂದಿರ ಮುಂತಾದುವುಗಳಲ್ಲಿ ಅವರಿಗೆ ಅಪಾರ ಶ್ರದ್ಧೆ ಇತ್ತು. ಶೃಂಗೇರಿಯ ಶ್ರೀ ಶಂಕರಾಚಾರ್ಯರ ಮಠ, ಮಂತ್ರಾಲಯದ ಶ್ರೀ ರಾಘವೇಂದ್ರ ಸ್ವಾಮಿ ಮಠ, ತುಮಕೂರಿನ ಶ್ರೀ ಸಿದ್ಧಗಂಗಾ ಮಠ ಅಥವಾ ಆದಿಚುಂಚನಗಿರಿಯ ಮಠಗಳಿಗೆ ಯಾವುದೇ ಸಂಕೋಚವಿಲ್ಲದೆ ಭೇಟಿ ನೀಡುತ್ತಿದ್ದರು. ಅಲ್ಲಿಯ ಸ್ವಾಮಿಗಳೊಂದಿಗೆ, ಮಠಾಧೀಶರೊಂದಿಗೆ ಅವರು ಅನೇಕ ವಿಷಯಗಳ ಬಗ್ಗೆ ಕುತೂಹಲದಿಂದ ಚರ್ಚಿಸುತ್ತಿದ್ದರು.

ಅವರು ವಿದ್ಯಾರ್ಥಿಯಾಗಿದ್ದಾಗ ಶಾಲಾ ಗುರುಗಳಾಗಿದ್ದ ಅಯ್ಯರ್ ಎಂಬ ಬ್ರಾಹ್ಮಣ ಅಧ್ಯಾಪಕರು, ಅಬ್ದುಲ್ ಕಲಾಂ ಅವರ ಮೇಲೆ ವಿಶೇಷ ಪ್ರಭಾವ ಉಂಟುಮಾಡಿದ್ದರು. ಒಮ್ಮೆ ಶಾಲೆಯಲ್ಲಿ ಪಕ್ಷಿಗಳ ಚಲನವಲನ, ಅವು ರೆಕ್ಕೆ ಬಿಚ್ಚಿ ಹಾರುವ ಬಗೆ ಹಾಗೂ ಅದರ ಹಿಂದಿರುವ ವೈಜ್ಞಾನಿಕ ರಹಸ್ಯ ಮುಂತಾದುವುಗಳನ್ನು ಚಿತ್ರ ಬಿಡಿಸಿ ವಿವರಿಸಿದ್ದರು. ಕಲಾಂ ಸೇರಿದಂತೆ ಇತರ ಅನೇಕ ವಿದ್ಯಾರ್ಥಿಗಳಿಗೆ ಅದರಿಂದ ಸಮಾಧಾನವಾದಂತೆ ಕಂಡುಬಾರದಿರುವುದನ್ನು ಗಮನಿಸಿದ ಅಧ್ಯಾಪಕ ಅಯ್ಯರ್ ಅವರು ವಿದ್ಯಾರ್ಥಿಗಳನ್ನೆಲ್ಲ ಸಮುದ್ರದಂಡೆಗೆ ಕರೆದೊಯ್ದು ಅಲ್ಲಿ ಪಕ್ಷಿಗಳ ಹಾರುವಿಕೆ, ಅವುಗಳ ಚಲನವಲನದ ಪ್ರತ್ಯಕ್ಷ ದರ್ಶನ ಮಾಡಿಸಿದರು. ಕಲಾಂ ಅವರಲ್ಲಿ ಅಮೂರ್ತವಾಗಿ ವೈಮಾನಿಕ ಆಸಕ್ತಿ ಮೊಳಕೆಯೊಡೆದದ್ದು ಅಲ್ಲಿಯೇ. ಅಂತೆಯೇ ಮುಂದೆ ಅವರು ದೊಡ್ಡ ವಿಜ್ಞಾನಿಯಾಗಿ ದೇಶಕ್ಕಾಗಿ ಹಗುರ ಹೆಲಿಕಾಪ್ಟರ್‌ಗಳನ್ನು ನಿರ್ಮಿಸಿದರು!

ಧಾರ್ಮಿಕ ಶ್ರದ್ಧೆ ಹೊಂದಿದ್ದ ಕಲಾಂ ಬಾಂಬ್‌ಗಳನ್ನು ಮತ್ತು ಕ್ಷಿಪಣಿಗಳನ್ನು ಸೃಷ್ಟಿಸಿದ್ದು ವಿಪರ್ಯಾಸವೋ ವಿರೋಧಾಭಾಸವೋ ಎನ್ನಿಸಬಹುದಲ್ಲವೇ? ಆದರೆ ಕಲಾಂ ಅವರದು ವ್ಯವಹಾರಿಕ ಬುದ್ಧಿ, ಚತುರತೆ. ಭಾರತ ದೇಶ ಸುಭದ್ರವಾಗಿ ಉಳಿಯಬೇಕಾದರೆ, ಅದು ಬಲಿಷ್ಠ ರಾಷ್ಟ್ರವಾಗಿ ರೂಪುಗೊಳ್ಳಬೇಕಾದರೆ ಅದು ಪರಮಾಣು ಶಕ್ತಿ ರಾಷ್ಟ್ರವಾಗಲೇಬೇಕೆಂಬುದು ಅವರ ಪ್ರಬಲ ವಾದ. ಪರಮಾಣು ಬಾಂಬನ್ನು ಬೇರೆಯವರ ಮೇಲೆ ಪ್ರಯೋಗಿಸುವುದಕ್ಕಲ್ಲ, ತನ್ನ ಸ್ವಂತ ರಕ್ಷಣೆಗಾಗಿ! ಅರ್ಥಾತ್, ಭಾರತದ ಆತ್ಮರಕ್ಷಣೆಗಾಗಿ. ಭಾರತ ಪರಮಾಣು ರಾಷ್ಟ್ರವಾಗಿರುವುದರಿಂದಲೇ ಅಮೆರಿಕಾ ಸೇರಿದಂತೆ ಇತರ ಎಲ್ಲ ರಾಷ್ಟ್ರಗಳು ಈಗ ಭಾರತವನ್ನು ಗೌರವದಿಂದ ಕಾಣಲಾರಂಭಿಸಿವೆ! ಪಾಕಿಸ್ತಾನ, ಚೀನಾದಂಥ ತರಲೆ ರಾಷ್ಟ್ರಗಳು ಭಾರತದ ನೆರೆಹೊರೆಯಲ್ಲಿರುವಾಗ ಭಾರತ ಸ್ವಂತ ರಕ್ಷಣೆಗೆ ಬದ್ಧವಾಗಬೇಕಾದ ಅಗತ್ಯವನ್ನು ಮನಗಂಡವರು ಅಬ್ದುಲ್ ಕಲಾಂ.



ಉಪಗ್ರಹ ತಯಾರಿಕೆ, ಉಡಾವಣೆ, ಉಪಗ್ರಹವಾಹಕ, ರಾಕೆಟ್ ತಯಾರಿಕೆ ಮುಂತಾದುವುಗಳಿಗೆ ಅತ್ಯಗತ್ಯವಾದ ಕ್ಷಿಪಣಿಗಳನ್ನು ತಯಾರಿಸಿ, ಅದರಲ್ಲಿ ಸ್ವಂತಿಕೆ ಮತ್ತು ಸ್ವಾವಲಂಬನೆಯನ್ನು ತಂದವರು ಅಬ್ದುಲ್ ಕಲಾಂ. ಪರಿಣಾಮ, ಇಂದು ಭಾರತ ಬೇರೆ ರಾಷ್ಟ್ರಗಳ ಉಪಗ್ರಹಗಳನ್ನು ತನ್ನ ಸ್ವಂತ ನೆಲೆಯಿಂದಲೇ ಹಾರಿಸುವ ಅಪರೂಪದ ಸಾಮರ್ಥ್ಯವನ್ನು ಪಡೆದಿದೆ. ಇದರಿಂದ ನೂರಾರು ಕೋಟಿ ರೂಪಾಯಿಗಳ ವಿದೇಶೀ ವಿನಿಮಯ ಭಾರತದ ಬೊಕ್ಕಸಕ್ಕೆ ಹರಿದು ಬರುತ್ತಿದೆ.

ಮನುಷ್ಯ ಬರೀ ವಿಜ್ಞಾನಿ-ತಂತ್ರಜ್ಞಾನಿ ಆದರೆ ಸಾಲದು. ಅದರ ಜತೆಗೆ ದೂರದರ್ಶಿತ್ವ, ರಾಷ್ಟ್ರಪ್ರೇಮ, ಜನಗಳ ಬಗ್ಗೆ ಪ್ರೀತಿ, ಬಲಿಷ್ಠ ರಾಷ್ಟ್ರದ ಕನಸು, ಇತ್ಯಾದಿಗಳೆಲ್ಲವೂ ಮೇಳೈಸಬೇಕೆಂಬುದು ಕಲಾಂ ವ್ಯಕ್ತಿತ್ವದಿಂದ ಸಾಬೀತಾಗುತ್ತದೆ. ಅಂತೆಯೇ ಅವರು ಭಾರತವಷ್ಟೇ ಅಲ್ಲ, ವಿಶ್ವ ಕಂಡ ಮಹತ್ತ್ವದ ಮುತ್ಸದ್ದಿಗಳಲ್ಲಿ ಒಬ್ಬರು.

ಆಜನ್ಮ ಬ್ರಹ್ಮಚಾರಿಯಾಗಿದ್ದ ಅವುಲ್ ಪಕೀರ್ ಜೈನುಲಬ್ದೀನ್ ಅಬ್ದುಲ್ ಕಲಾಂ ಮಹಾನ್ ಸಂತನಂತೆ ಬಾಳಿ, ಪರಿವ್ರಾಜಕನಂತೆ ಸಂಚರಿಸಿ ಭಾರತವನ್ನು ಎಚ್ಚರಿಸಿದವರು, ಎತ್ತರಕ್ಕೇರಿಸಿದವರು. ಮಹಾನ್ ತತ್ತ್ವಜ್ಞಾನಿ ಮತ್ತು ದಾರ್ಶನಿಕ ಸರ್ವೆಪಲ್ಲಿ ರಾಧಾಕೃಷ್ಣನ್ ಅವರ ಅನಂತರ ಭಾರತದ ಪತಾಕೆಯನ್ನು ಅಂತಾರಾಷ್ಟ್ರೀಯ ದಿಗಂತದಲ್ಲಿ ಅತಿ ಎತ್ತರದಲ್ಲಿ ಎತ್ತಿ ಹಿಡಿದ ಇನ್ನೋರ್ವ ರಾಷ್ಟ್ರಪತಿ ಎಂದರೆ ಪ್ರಾಯಶಃ ಅಬ್ದುಲ್ ಕಲಾಂ ಒಬ್ಬರೇ.

## ಬಲಿಷ್ಠ ಭಾರತಕ್ಕೆ ನಾಂದಿ

ಭಾರತದ ಭವಿಷ್ಯ ಕುರಿತು ತಾವು ಹಗಲಿರುಳು ಚಿಂತಿಸಿದ್ದಷ್ಟೇ ಅಲ್ಲ, ದೇಶದ ಜನತೆಯನ್ನು ಚಿಂತನೆಗೆ ಹಚ್ಚಿದವರು ಅಬ್ದುಲ್ ಕಲಾಂ. ಮಕ್ಕಳು ಮತ್ತು ಯುವಕರು ದೊಡ್ಡ ಕನಸುಗಳನ್ನು ಕಾಣುವುದನ್ನು ಕಲಿಸಿಕೊಟ್ಟವರು. ರಾಷ್ಟ್ರಪತಿ ಆಗುವ ಮುಂಚೆ, ಆಗಿದ್ದಾಗಲೂ ಮತ್ತು ಅನಂತರದಲ್ಲೂ ಅವರು ಪ್ರಾಚೀನ ಭಾರತದ ಪರಮಹಂಸ ಪರಿವ್ರಾಜಕರಂತೆ ದೇಶದ ಮೂಲೆಮೂಲೆಯಲ್ಲಿ ಸಂಚರಿಸಿ ಮಕ್ಕಳನ್ನು ಯುವಕರನ್ನು ನೇರವಾಗಿ ಸಂಪರ್ಕಿಸಿ, ಅವರೊಂದಿಗೆ ಸಂವಾದ ನಡೆಸಿ, ಅವರಿಂದ ಪ್ರಶ್ನೆಗಳನ್ನು

ಸ್ವೀಕರಿಸಿ, ಸಮಾಧಾನಕರ ಉತ್ತರ ನೀಡಿ ಅವರನ್ನು ಬಲಿಷ್ಠ ಭಾರತ ನಿರ್ಮಾಣ ಕಾರ್ಯದಲ್ಲಿ ತೊಡಗಿಸಿಕೊಳ್ಳುವಂತೆ ಪ್ರೇರಣೆ ನೀಡಿದ ಪರಿ ಅನನ್ಯವಾದದ್ದು. ಈ ಕಾರ್ಯದಲ್ಲಿ ಅವರು ಭಾರತದ ವಿಜ್ಞಾನ ಸಂಸ್ಥೆ ಐಐಎಂ, ಐಐಟಿಗಳಂಥ ಅತ್ಯುನ್ನತ ವಿದ್ಯಾಕೇಂದ್ರಗಳನ್ನು ಸಂದರ್ಶಿಸಿದಂತೆ, ಕಲಬುರಗಿ ಜಿಲ್ಲೆಯ ಫರಹತಾಬಾದ್ ಸಮೀಪದ ತೀರಾ ಆಯಕಟ್ಟಿನ ಹಳ್ಳಿಯೊಂದರಲ್ಲಿ ಕೇವಲ ಗ್ರಾಮೀಣ ಬಡ ವಿದ್ಯಾರ್ಥಿಗಳಿಗಾಗಿ ರಾಮಕೃಷ್ಣ-ವಿವೇಕಾನಂದ ಆಶ್ರಮ ನಡೆಸುವ ಕನ್ನಡ ಮಾಧ್ಯಮ ಶಾಲೆಯಾಗಿರುವ ವಿವೇಕಾನಂದ ವಿದ್ಯಾಪೀಠಕ್ಕೂ ಅಷ್ಟೇ ಉತ್ಸುಕತೆಯಿಂದ ಭೇಟಿ ನೀಡಿ, ಅಲ್ಲಿಯ ಮಕ್ಕಳೊಂದಿಗೆ ಸಂವಾದ ನಡೆಸಿದರು.

ಹಾಗೆಂದು ಅಬ್ದುಲ್ ಕಲಾಂ ಅವರು ಬರೀ ಸಂದರ್ಶನ, ಭಾಷಣ, ಸಂವಾದ, ಉಪನ್ಯಾಸಗಳ ಮೂಲಕವೇ ಬಲಿಷ್ಠ ರಾಷ್ಟ್ರ ನಿರ್ಮಾಣ ಯಜ್ಞದಲ್ಲಿ ತೊಡಗಿದ್ದರೆಂದು ಅರ್ಥವಲ್ಲ. ಅವರು ಭಾರತವನ್ನು ಒಂದು ಹಂತದವರೆಗೆ ಬಲಿಷ್ಠ ರಾಷ್ಟ್ರವನ್ನಾಗಿ ಮಾಡಿದ ಅನಂತರವಷ್ಟೇ ತಮ್ಮ ವಿಚಾರಗಳ ಪ್ರಸರಣ ಕಾರ್ಯದಲ್ಲಿ ತೊಡಗಿದ್ದರು.

ಅಂತಾರಾಷ್ಟ್ರೀಯ ಸಮುದಾಯದಲ್ಲಿ ಭಾರತವನ್ನು 'ಕ್ಯಾರೆ' ಎನ್ನದಷ್ಟು ಸಂದಿಗ್ಧ ಸ್ಥಿತಿಯಲ್ಲಿ, ಅಣು ವಿಜ್ಞಾನಿ ಡಾ. ರಾಜಾರಾಮಣ್ಣ ಅವರೊಂದಿಗೆ ಕೈಜೋಡಿಸಿ ಪ್ರಧಾನಮಂತ್ರಿ ಅಟಲ್ ಬಿಹಾರಿ ವಾಜಪೇಯಿ ಅವರ ಸಮರ್ಥ ರಾಜಕೀಯ ನಾಯಕತ್ವದಲ್ಲಿ 1998ರಲ್ಲಿ 'ಪೋಖರಣ್-2' ಪರಮಾಣು ಬಾಂಬ್ ಸ್ಫೋಟ ಪ್ರಯೋಗ ಕೈಗೊಂಡು ಇಡೀ ವಿಶ್ವವೇ ಬೆಚ್ಚಿ ಬೀಳುವಂತೆ ಮಾಡಿದರು! ಅಮೆರಿಕದ ಬಲಿಷ್ಠ ಬೇಹುಗಾರಿಕೆ ಉಪಗ್ರಹಗಳಿಗೂ ಸುಳಿವು ನೀಡದಂತೆ, ಪ್ರಪಂಚದಲ್ಲಿ ಯಾರಿಗೂ ಗೊತ್ತಾಗದಂತೆ, ವಿಶಾಲವಾದ ಮರುಭೂಮಿಯಲ್ಲಿ ಕೈಗೊಂಡ ಪರಮಾಣು ಬಾಂಬ್ ಸ್ಫೋಟ ಪ್ರಯೋಗ, ಭಾರತದ ಪರಮಾಣು ಸಾಮರ್ಥ್ಯದ ಪ್ರದರ್ಶನವಷ್ಟೇ ಅಲ್ಲ, ಭಾರತ ಮನಸ್ಸು ಮಾಡಿದರೆ ಏನನ್ನಾದರೂ ಮಾಡಲು ಸಾಧ್ಯ ಎಂಬುದನ್ನು ವಿಶ್ವಸಮುದಾಯಕ್ಕೆ ತೋರಿಸಿದ ರೀತಿ ಅದಾಗಿತ್ತು. ಅಂದೇ ಉದಯವಾಯಿತು ಬಲಿಷ್ಠ ಭಾರತ! ಅಮೆರಿಕಾ, ರಷ್ಯಾದಂಥ ಪರಮಾಣು ದೈತ್ಯ ರಾಷ್ಟ್ರಗಳು ಭಾರತದ ಸಾಮರ್ಥ್ಯ ಕಂಡು ಮೂಕವಿಸ್ಮಿತಗೊಂಡವು. ಈ ರಾಷ್ಟ್ರಗಳು ಭಾರತದ ವಿರುದ್ಧ ಪರಮಾಣು ನಿಷೇಧ ಹೇರಿದ್ದು ನಿಜ. ಆದರೆ ಅದು ಬಹಳ ಕಾಲ ನಡೆಯಲಿಲ್ಲ.

ಇನ್ನೊಬ್ಬರ ಮೇಲೆ ಆಕ್ರಮಣ ಮಾಡಿದ ಒಂದು ನಿದರ್ಶನವಾದರೂ ಭಾರತದ ಹತ್ತಾರು ಸಾವಿರ ವರ್ಷಗಳ ಇತಿಹಾಸದಲ್ಲಿ ಇಲ್ಲ. ಇಲ್ಲಿಗೆ ಬಂದವರೆಲ್ಲರನ್ನು ತನ್ನವರನ್ನಾಗಿಸಿ ಕೊಂಡ ಭಾರತದ ಹೃದಯವೈಶಾಲ್ಯಕ್ಕೆ ಸಾಟಿಯೇ ಇಲ್ಲ, ನಿಜ. ಆದರೆ ಅದೇ ಒಂದು ದೊಡ್ಡ ದೌರ್ಬಲ್ಯವಾಗಿ ರಾಷ್ಟ್ರದ ಪ್ರಗತಿಗೆ, ವಿಕಾಸಕ್ಕೆ ಕಂಟಕವಾದರೆ? ಮುಸ್ಲಿಮರೂ ಸೇರಿದಂತೆ ಅನೇಕರು ಈ ರಾಷ್ಟ್ರದ ಮೇಲೆ ಆಕ್ರಮಣ ಮಾಡಿ ಇಲ್ಲಿಯ



ಸಂಪತ್ತನ್ನೆಲ್ಲ ಕೊಳ್ಳೆ ಹೊಡೆದು, ವಿವಿಧ ಜಾತಿ-ಜನಾಂಗಗಳಲ್ಲಿ ಛಿದ್ರಛಿದ್ರಗೊಂಡು ಒಗ್ಗಟ್ಟೇ ಇಲ್ಲದ ಭಾರತದ ಜನತೆಯ ದೌರ್ಬಲ್ಯವನ್ನು ಮನಗಂಡ ವಿದೇಶೀಯರು, ಇಲ್ಲಿಯವರನ್ನು ಒಡೆದು ಆಳಿ, ಧ್ವನಿ ಎತ್ತದಂತೆ ಮಾಡಿ ಇನ್ನಷ್ಟು ದುರ್ಬಲಗೊಳಿಸಿದ್ದರಲ್ಲವೇ? ಭಾರತದಲ್ಲಿ ಸಂಪತ್ತು ಅಕ್ಷಯವಾಗಿತ್ತು ನಿಜ. ಆದರೆ ಅದರಿಂದಲೇ ಭಾರತ ಬಲಿಷ್ಠವಾಗಲು ಸಾಧ್ಯವೇನು? ಸ್ವಯಂ ರಕ್ಷಣೆಯ ಸಾಮರ್ಥ್ಯವೇ ಇಲ್ಲದ ಮೇಲೆ ಸಂಪತ್ತಿನ ಲೂಟಿ ನಡೆಯುವಂಥದ್ದೇ. ಸಂಪತ್ತಿನೊಂದಿಗೆ, ಸಂಪತ್ತನ್ನು ಕಾಪಾಡಿಕೊಳ್ಳುವ, ವೈರಿಗಳನ್ನು ಎದುರಿಸುವ, ಜನರನ್ನು ರಕ್ಷಿಸುವ ಸಾಮರ್ಥ್ಯ ಒಂದು ರಾಷ್ಟ್ರಕ್ಕೆ ಬೇಕಿಲ್ಲವೇನು? ಈ ಅಗತ್ಯವನ್ನೇ ಮನಗಂಡಿದ್ದರು ಅಬ್ದುಲ್ ಕಲಾಂ.

## ಶುದ್ಧ ಶಾಕಾಹಾರಿ, ಸಂಗೀತಪ್ರೇಮಿ

ಜನ್ಮತಃ ಮತ್ತು ಇಸ್ಲಾಮಿ ಆಹಾರ ಪರಂಪರೆಯಲ್ಲಿ ಮಾಂಸಾಹಾರಿಗಳಾಗ ಬೇಕಿದ್ದ ಅಬ್ದುಲ್ ಕಲಾಂ ಅವರು ಶುದ್ಧ ಶಾಕಾಹಾರಿಯಾಗಿದ್ದುದು ಒಂದು ಅಚ್ಚರಿಯೇ ಸರಿ. ಕಾಲೇಜಿನಲ್ಲಿ ಓದುತ್ತಿರುವಾಗ ಅವರ ಸ್ನೇಹಿತರೆಲ್ಲರೂ ಅವರನ್ನು 'ಕಲಾಂ ಐಯ್ಯರ್' ಎಂದೇ ಕರೆಯುತ್ತಿದ್ದರಂತೆ. ಕಾರಣ ಅವರು ಮಾಂಸವನ್ನು ಅಪ್ಪಿತಪ್ಪಿಯೂ ಸೇವಿಸುತ್ತಿರಲಿಲ್ಲ. ತಮ್ಮ ಜೀವನದುದ್ದಕ್ಕೂ ಶಾಕಾಹಾರಿಯಾಗಿಯೇ ಉಳಿದುಕೊಂಡರು. ಸಿಹಿತಿಂಡಿಗಳಲ್ಲಿ ಅವರಿಗೆ ಹೂರಣದ ಹೋಳಿಗೆ ಎಂದರೆ ತುಂಬಾ ಇಷ್ಟ. ಕಾಲೇಜಿನ ವಿದ್ಯಾರ್ಥಿನಿಲಯದ ಸಸ್ಯಾಹಾರಿ ಭೋಜನ ವಿಭಾಗದ ಕಾರ್ಯದರ್ಶಿಯೂ ಅವರಾಗಿದ್ದರು.

ಅವರು ಸಂಗೀತಪ್ರೇಮಿ. ಅದರಲ್ಲೂ ಕರ್ನಾಟಕ ಸಂಗೀತವೆಂದರೆ ಪಂಚಪ್ರಾಣ. ಎಂ.ಎಸ್. ಸುಬ್ಬಲಕ್ಷ್ಮೀ ಅವರ ಗಾಯನ, ಹಾಡು, ಕೀರ್ತನೆಗಳೆಂದರೆ ಮುಗಿದು ಹೋಯಿತು. ಅವುಗಳಲ್ಲೇ ಮಗ್ನರಾಗಿಬಿಡುತ್ತಿದ್ದರು. ದಕ್ಷಿಣ ಭಾರತದ ಖ್ಯಾತ ಸಂಗೀತ ವಾದ್ಯವಾದ ವೀಣೆಯನ್ನು ಕೂಡ ಅವರು ಆಗಾಗ ನುಡಿಸುತ್ತಿದ್ದರು.

ಕಲಾಂ ಅವರ ಮನೆಯಲ್ಲಿ ಟೆಲಿವಿಷನ್ ಇರಲಿಲ್ಲ. ಅವರು ಟಿ.ವಿ. ನೋಡು ತ್ತಿದ್ದುದೇ ತೀರಾ ಅಪರೂಪ. ಆದರೆ, ರೇಡಿಯೋ ಮಾತ್ರ ತಪ್ಪದೆ ಕೇಳುತ್ತಿದ್ದರು. ಸುದ್ದಿಗಾಗಿ ಅವರು ಆಕಾಶವಾಣಿ ಬುಲೆಟಿನ್‌ಗಳನ್ನು ಆಲಿಸುತ್ತಿದ್ದರು. ಅವರ ರೇಡಿಯೋ ಪ್ರೇಮಕ್ಕೆ ಮತ್ತೊಂದು ಕಾರಣವೆಂದರೆ ಅದರಲ್ಲಿ ಪ್ರಸಾರವಾಗುವ ವೈವಿಧ್ಯಮಯ ಸಂಗೀತ ಕಾರ್ಯಕ್ರಮಗಳು.

ಆದರೆ ಮಾಹಿತಿ ತಂತ್ರಜ್ಞಾನದ ಸಂಪೂರ್ಣ ಪ್ರಯೋಜನ ಪಡೆಯುತ್ತಿದ್ದರು. ಇಂಟರ್‌ನೆಟ್‌ನಲ್ಲಿ ಸಾಕಷ್ಟು ಸಮಯ ವ್ಯಯಿಸುತ್ತಿದ್ದರು. ತಮಗೆ ಬಂದ ಮಿಂಚಂಚೆ (ಇ-ಮೇಲ್)ಗಳಲ್ಲಿ ಕೆಲವುಗಳಿಗಾದರೂ ಪ್ರತಿನಿತ್ಯ ಉತ್ತರಿಸುವ ಪರಿಪಾಠ ಇಟ್ಟುಕೊಂಡಿ ದ್ದರು. ಟ್ವಿಟ್ಟರ್ ಮಾಧ್ಯಮವನ್ನು ಸಂಪರ್ಕಕ್ಕಾಗಿ ಬಳಸುತ್ತಿದ್ದರು.

ಅವರು ತಮ್ಮ ಜೀವನದ ಕೊನೆಯ ದಿನದಂದು ಶಿಲ್ಲಾಂಗ್‌ನ ಐಐಎಂನಲ್ಲಿ ಉಪನ್ಯಾಸ ನೀಡುವ ಕಾರ್ಯಕ್ರಮವನ್ನು ಟ್ವಿಟ್ಟರ್ ಮೂಲಕ ತಮ್ಮ ಅಭಿಮಾನಿಗಳಿಗೆ ತಿಳಿಸಿದ್ದರು.

## ಬಾಹ್ಯಾಕಾಶ ವಿಜ್ಞಾನ-ತಂತ್ರಜ್ಞಾನದಲ್ಲಿ ಸಾಧನೆ

ಒಂದು ಕಡೆ ಬಾಂಬ್ ನಿರ್ಮಾಣವಾದರೆ ಇನ್ನೊಂದು ಕಡೆ ಬಾಹ್ಯಾಕಾಶ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಸ್ವಂತಿಕೆ ಮತ್ತು ಸ್ವಾವಲಂಬನೆಯನ್ನು ಸಾಧಿಸುವ ದಿಟ್ಟ ಕಾರ್ಯಕ್ಕೆ ತಮ್ಮ ತಾರುಣ್ಯದಲ್ಲೇ ಕೈ ಹಾಕಿದವರು ಅಬ್ದುಲ್ ಕಲಾಂ. ಇದಕ್ಕೆ ಮೂಲ ಪ್ರೇರಣೆ ಬಾಹ್ಯಾಕಾಶ ವಿಜ್ಞಾನಿ ವಿಕ್ರಂ ಸಾರಾಭಾಯಿ. ಭಾರತೀಯ ಬಾಹ್ಯಾಕಾಶ ಸಂಶೋಧನ ಸಂಸ್ಥೆ (ಇಸ್ರೋ) ಬರೀ ಉಪಗ್ರಹಗಳನ್ನು ತಯಾರಿಸಿದರಷ್ಟೇ ಸಾಕೇನು? ಉಪಗ್ರಹಗಳನ್ನು ಮೇಲಕ್ಕೆತ್ತಿ ತೂರಿಸಬಲ್ಲ ಕ್ಷಿಪಣಿಗಳೂ ಅಷ್ಟೇ ಆವಶ್ಯಕ. ಅದರ ಜತೆಗೆ ಉಪಗ್ರಹಗಳನ್ನು ಆಗಸಕ್ಕೆ ಒಯ್ಯಬಲ್ಲ ರಾಕೆಟ್‌ಗಳೂ ಅಷ್ಟೇ ಮುಖ್ಯ. ಇವುಗಳ ಸ್ವದೇಶಿ ತಯಾರಿಕೆಯ ಅಗತ್ಯವನ್ನು ಬಲವಾಗಿ ಪ್ರತಿಪಾದಿಸಿದವರು ಅಬ್ದುಲ್ ಕಲಾಂ. ಭಾರತದ ಮೊತ್ತಮೊದಲ ಉಪಗ್ರಹವಾದ 'ರೋಹಿಣಿ'ಯನ್ನು 1980ರಲ್ಲಿ ಮೇಲಕ್ಕೆತ್ತಿದ ರಾಕೆಟ್ಟನ್ನು ತಯಾರಿಸಿದ್ದು ಕಲಾಂ ಮಾರ್ಗದರ್ಶನದಲ್ಲಿ. ಕ್ಷಿಪಣಿ ಕ್ಷಮತೆಯನ್ನು ಸಾಧಿಸುವ ಹಾದಿಯಲ್ಲಿದ್ದ ಕಲಾಂ ಅವರು ಬಾಹ್ಯಾಕಾಶ ತಂತ್ರಜ್ಞಾನದಿಂದ ಜನತೆಗೆ ಮತ್ತು ದೇಶಕ್ಕೆ ಏನೆಲ್ಲ ಲಾಭಗಳು, ಪ್ರಯೋಜನಗಳು ಇವೆ ಎಂಬುದನ್ನು ಮನದಟ್ಟು ಮಾಡಿಕೊಡಲು ಶ್ರಮಿಸಿದರು.

ಖಂಡಾಂತರ ಕ್ಷಿಪಣಿಗಳ ತಯಾರಿಕೆಯ ಕಲಾಂ ಅವರ ಯೋಜನೆಗೆ ಕೇಂದ್ರದ ಮಂತ್ರಿಮಂಡಲ ಒಪ್ಪಿಗೆ ನೀಡದಿದ್ದಾಗ 1970ರ ದಶಕದಲ್ಲಿ ಅಂದಿನ ಪ್ರಧಾನ ಮಂತ್ರಿ ಇಂದಿರಾ ಗಾಂಧಿಯವರು ರಹಸ್ಯವಾಗಿ ಅವರಿಗೆ ಬೆಂಬಲ ಮತ್ತು ಹಣಕಾಸು ನೆರವನ್ನು ಒದಗಿಸಿದರು! ಇದು ಕಲಾಂ ಅವರ ಕರ್ತೃತ್ವಶಾಲಿತ್ವದಲ್ಲಿ ಇಂದಿರಾ ಗಾಂಧಿಯವರು ಇರಿಸಿದ್ದ ಅಚಲ ವಿಶ್ವಾಸ ಮತ್ತು ನಂಬಿಕೆಯ ಪ್ರತೀಕವಾಗಿದೆ. ಅನಂತರ ಭವಿಷ್ಯದ ಅವರ ಎಲ್ಲ ಕ್ಷಿಪಣಿ ಕಾರ್ಯಕ್ರಮಗಳಿಗೆ ಆಯಾ ಸರಕಾರಗಳು ಬೆಂಬಲ ನೀಡುತ್ತ ಬಂದವು.

ವಿಜ್ಞಾನಿಯ ಕೆಲಸ ಸುಲಭವಾದದ್ದೇನಲ್ಲ. ಆತ ನಂಬಿಕೊಂಡದ್ದನ್ನು ಜನರಿಗೆ ವಿವರಿಸುವ, ಅವರಿಗೆ ಮನವರಿಕೆ ಮಾಡಿಕೊಡುವ ಕೆಲಸ ಬಹಳ ಕಷ್ಟದಾಯಕವಾದದ್ದು. ಅದರಲ್ಲಿ ಸಫಲತೆ, ವಿಫಲತೆಯನ್ನು ಲೆಕ್ಕಿಸದೆ ಕಲಾಂ ಭಾರತದ ಬಲಿಷ್ಠತೆ, ಸ್ವಾವಲಂಬನೆಯ ದೃಷ್ಟಿಯಿಂದ ಮುನ್ನಡೆಯುತ್ತಿದ್ದರು. ತಮಿಳುನಾಡಿನ ಕೂಡಂಕುಲಂನಲ್ಲಿ ಸ್ಥಾಪನೆಯಾಗಿರುವ ಪರಮಾಣು ವಿದ್ಯುತ್ ಘಟಕದ ವಿಷಯದಲ್ಲಿ ತಳೆದಿದ್ದ ಸಕಾರಾತ್ಮಕ ನಿಲುವಿನಿಂದಾಗಿ ಕಲಾಂ ಅವರು ಅನೇಕ ನಾಗರಿಕ ಗುಂಪುಗಳ ಟೀಕೆಗೆ, ವಿರೋಧಕ್ಕೆ ಗುರಿಯಾಗಬೇಕಾಯಿತು. ಈ ವಿಷಯದಲ್ಲಿ ಸ್ಥಳೀಯ ಜನರನ್ನು



ವಿಶ್ವಾಸಕ್ಕೆ ತೆಗೆದುಕೊಳ್ಳದಿರುವ ಕಲಾಂ ಅವರ ವರ್ತನೆ ತೀವ್ರ ಖಂಡನೆಗೆ ಒಳಗಾಯಿತು. ಪರಮಾಣು ವಿದ್ಯುತ್ ಸ್ಥಾವರದ ಸುರಕ್ಷತೆಯ ಕುರಿತಾಗಿ ಅಬ್ದುಲ್ ಕಲಾಂ ನೀಡಿದ್ದ ವಿವರಣೆ, ಭರವಸೆ ಪರಮಾಣು ಸ್ಥಾವರ ವಿರೋಧಿ ಚಳವಳಿ ನಿರತರಿಗೆ ಸಮಾಧಾನ ಉಂಟುಮಾಡಿರಲಿಲ್ಲ.

ದೇಶದ ಸರ್ವಾಂಗೀಣ ಅಭಿವೃದ್ಧಿಗೆ ವಿಜ್ಞಾನ ಮತ್ತು ತಂತ್ರಜ್ಞಾನದ ಅಗತ್ಯದ ಅರಿವನ್ನು ಉಂಟುಮಾಡುವಲ್ಲಿ ಅವರು ಪಟ್ಟ ಪರಿಶ್ರಮ ಅಪಾರವಾದದ್ದು. ವಿಜ್ಞಾನವನ್ನು ರಾಷ್ಟ್ರೀಯ ಕಾರ್ಯಸೂಚಿಯಲ್ಲಿ ತಂದು ನಿಲ್ಲಿಸಿದ ಶ್ರೇಯಸ್ಸು ಅವರಿಗೆ ಸಲ್ಲಬೇಕು. ಐದು ವರ್ಷಗಳ ಅವಧಿಗೆ ರಾಷ್ಟ್ರಪತಿ ಆಗಿದ್ದ ಸಂದರ್ಭ, ಅವರ ವೈಜ್ಞಾನಿಕ ಯಜ್ಞಕ್ಕೆ ಅಯಾಚಿತವಾಗಿ ದೊರೆತ ಒಂದು ಸುವರ್ಣ ಅವಕಾಶ. ಭಾರತದ ಮೊದಲ ವಿಜ್ಞಾನಿ-ತಂತ್ರಜ್ಞಾನಿಯಾದ ಅಬ್ದುಲ್ ಕಲಾಂ ಅವರು ಕಂಪ್ಯೂಟರ್ ಯುಗದ ಆಧುನಿಕ ಭಾರತದ ಜನತೆ ವಿಜ್ಞಾನದ ಬಗ್ಗೆ ಆಸಕ್ತಿ ತಾಳುವಂತೆ ಮಾಡಿದ ಅಪರೂಪದ ವಿಜ್ಞಾನಿ-ಸಂತ.

## ರಾಷ್ಟ್ರಪತಿ ಭವನದಲ್ಲಿ....

ವಿಜ್ಞಾನಿ ಅಬ್ದುಲ್ ಕಲಾಂ ಅವರು ಸ್ವತಂತ್ರ ಭಾರತ ಗಣರಾಜ್ಯದ ರಾಷ್ಟ್ರಪತಿ ಆಗುವರೆಂದು ಯಾರೂ ಕನಸಿನಲ್ಲಿ ಊಹಿಸಿರಲಿಲ್ಲ. ಆದರೆ ಭಾರತೀಯ ಜನತಾ ಪಾರ್ಟಿ ಹಿರಿತನದ ಅಟಲ್ ಬಿಹಾರಿ ವಾಜಪೇಯಿ ಅವರ ಎನ್‌ಡಿಎ ಸರಕಾರ ಕಲಾಂ ಅವರನ್ನು ರಾಷ್ಟ್ರಪತಿ ಚುನಾವಣಾ ಕಣಕ್ಕೆ ಎಳೆದುತಂದು ಪ್ರಧಾನ ವಿರೋಧ ಪಕ್ಷವಾದ ಕಾಂಗ್ರೆಸ್ ಪಕ್ಷ ಅವರಿಗೆ ಬೆಂಬಲ ಸೂಚಿಸುವ ಅನಿವಾರ್ಯತೆಯನ್ನು ಸೃಷ್ಟಿಸಿತ್ತು. ಅಂದಿನ ಬಿಜೆಪಿ ಯುವ ನಾಯಕ ಪ್ರಮೋದ್ ಮಹಾಜನ್ ಅವರು ಕಲಾಂ ಉಮೇದುವಾರಿಕೆಯ ರೂವಾರಿ ಎಂದು ಹೇಳಲಾಗಿದೆ.

ಕಲಾಂ ಅವರ ಆಯ್ಕೆ ಅವಿರೋಧವಾಗಿ ಆಗದಿದ್ದರೂ ತಮ್ಮ ಪ್ರತಿಸ್ಪರ್ಧಿ ಲಕ್ಷ್ಮೀ ಸೆಹೆಗಲ್ ಅವರನ್ನು ಭಾರೀ ಅಂತರದಿಂದ ಪರಾಭವಗೊಳಿಸಿ ಜುಲೈ 25, 2002ರಿಂದ 11ನೆಯ ರಾಷ್ಟ್ರಪತಿಯಾಗಿ ಅಧಿಕಾರ ಸ್ವೀಕರಿಸಿದರು. ಅವರು ರಾಷ್ಟ್ರಪತಿ ಭವನದ ಬಾಗಿಲುಗಳನ್ನು ಜನಸಾಮಾನ್ಯರಿಗಾಗಿ ತೆರೆದಿಡುವ ಪ್ರಯತ್ನ ಮಾಡಿದರು. ದೇಶದ ಪ್ರಥಮ ಪ್ರಜೆಯಾಗಿರುವಾಗಲೇ ಅವರು ಜನರಿಂದ ದೂರ ಸರಿಯದೆ ಎಷ್ಟು ಸಾಧ್ಯವೋ ಅಷ್ಟು ಹತ್ತಿರವಾಗಲು ಬಯಸಿದರು. ತಾವು ಭೇಟಿ ನೀಡಿದ ಸ್ಥಳಗಳಲ್ಲಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಭಾಷಣ ಮಾಡುವ ಪರಿಪಾಠವನ್ನು ಬೆಳೆಸಿಕೊಂಡರು. ಈ ಎಲ್ಲ ಕಾರಣಗಳಿಂದ ಅವರು 'ಜನತೆಯ ರಾಷ್ಟ್ರಪತಿ' ಎಂಬ ಪ್ರೀತಿಯ ಹೆಗ್ಗಳಿಕೆಗೆ ಪಾತ್ರರಾದರು.

ತಮ್ಮ ಅವಧಿಯಲ್ಲಿ ಪ್ರಧಾನಿಗಳಾಗಿದ್ದ ಅಟಲ್ ಬಿಹಾರಿ ವಾಜಪೇಯಿ ಮತ್ತು ಮನಮೋಹನ್ ಸಿಂಗ್ ಅವರ ಸರಕಾರದ ಆಡಳಿತವನ್ನು ನಡೆಸಿಕೊಂಡು ಹೋದರು. 2004ರಲ್ಲಿ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ರಾಷ್ಟ್ರಪತಿ ಕಲಾಂ ಅವರನ್ನು ಕಂಡು ಬಂದ ಮೇಲೆ ಪ್ರಧಾನಮಂತ್ರಿ ಪದವಿಯನ್ನು ನಿರಾಕರಿಸಿದ್ದು ಇಂದಿಗೂ ಒಗಟಾಗಿಯೇ ಉಳಿದಿದೆ. ಇದರಲ್ಲಿ ತಮ್ಮ ಪಾತ್ರವೇನೂ ಇರಲಿಲ್ಲ ಎಂದು ಕಲಾಂ ಅನಂತರ ಸ್ಪಷ್ಟಪಡಿಸಿದರು.

ತಾವು ಎಲ್ಲ ಸಂದರ್ಭಗಳಲ್ಲಿ ಸಂವಿಧಾನಕ್ಕೆ ಅನುಗುಣವಾಗಿಯೇ ನಡೆದುಕೊಂಡಿದ್ದಾಗಿ ಕಲಾಂ ಸಂದರ್ಶನವೊಂದರಲ್ಲಿ ಹೇಳಿದ್ದರು. ಆದರೆ ರಷ್ಯಾದ ಪ್ರವಾಸದಲ್ಲಿ ಇದ್ದಾಗಲೇ ಬಿಹಾರ ರಾಜ್ಯ ಸರಕಾರವನ್ನು ವಜಾ ಮಾಡುವ ಕೇಂದ್ರ ಮಂತ್ರಿಮಂಡಲ ಶಿಫಾರಸಿಗೆ ಸಹಿ ಹಾಕಿದ್ದು ವಿವಾದಕ್ಕೆ ಎಡೆಮಾಡಿಕೊಟ್ಟಿತು. ಸಂಸತ್ ಮೇಲೆ ದಾಳಿ ಪ್ರಕರಣದ ಭಯೋತ್ಪಾದಕ ಅಫ್ಜಲ್ ಗುರು ಸೇರಿದಂತೆ ಅನೇಕ ಮರಣದಂಡನೆ ಆರೋಪಿಗಳ ಕ್ಷಮಾದಾನದ ಅರ್ಜಿಗಳ ಮೇಲೆ ನಿರ್ಧಾರ ಕೈಗೊಳ್ಳದಿದ್ದುದೂ ಟೀಕೆಗೆ ಗುರಿಯಾಗಿದೆ. 2003ರಲ್ಲಿ ಚಂಡಿಗಢದ ಸಂವಾದ ಕಾರ್ಯಕ್ರಮದಲ್ಲಿ ಸಮಾನ ನಾಗರಿಕ ಸಂಹಿತೆಗೆ ತಮ್ಮ ಬೆಂಬಲ ಸೂಚಿಸಿ ಮತೀಯ ಅಲ್ಪಸಂಖ್ಯಾತರಲ್ಲಿ ಅಚ್ಚರಿಯನ್ನುಂಟುಮಾಡಿದ್ದರು.

## ಕಲಾಂ ಪಂಚಸೂತ್ರಗಳು

ಭಾರತದ ಉತ್ತಮ ಭವಿಷ್ಯದ ನಿರ್ಮಾಣಕ್ಕಾಗಿ ಅಬ್ದುಲ್ ಕಲಾಂ ಅವರು ಐದು ಅಂಶಗಳ ಸೂತ್ರವನ್ನು ದೇಶದ ಮುಂದಿಟ್ಟಿದ್ದರು. ಈ ದೇಶದ ಅಂತಃಸತ್ತ್ವದ ಆಧಾರದ ಮೇಲೆ ಅವರು ಭಾರತ ಸಾಧಿಸಬಹುದಾದಂಥ ಬೆಳವಣಿಗೆಯ ಕ್ಷೇತ್ರಗಳನ್ನು ಗುರುತಿಸಿದ್ದರು. ಭಾರತ ಕೇವಲ ಆರ್ಥಿಕವಾಗಿ ಮತ್ತು ಮಿಲಿಟರಿ ನೆಲೆಯಲ್ಲಿ ಸೂಪರ್ ಪವರ್ ಆದರಷ್ಟೇ ಸಾಲದು, ಅದು ವಿಶ್ವದ ಜ್ಞಾನದ ಶ್ರೇಷ್ಠ ಶಕ್ತಿಯೂ ಆಗಬೇಕೆಂಬುದು ಅವರ ಒತ್ತಾಸೆಯಾಗಿತ್ತು.

ಕಳೆದ ಸಹಸ್ರಮಾನದ ಆದಿಯಲ್ಲಿ ಭಾರತ ವಿಶ್ವಕ್ಕೇ ಗುರುವಾಗಿತ್ತಲ್ಲವೆ? ತಕ್ಷಶಿಲಾ ಇರಬಹುದು ಅಥವಾ ನಲಂದಾ ಇರಬಹುದು. ವಿಶ್ವದ ನಾನಾ ದೇಶಗಳ ವಿದ್ಯಾರ್ಥಿಗಳು ಇಲ್ಲಿ ಜ್ಞಾನ ಸಂಪಾದನೆಗೆ ಆಗಮಿಸುತ್ತಿದ್ದರಲ್ಲವೆ? ಹಾಗೆಯೇ ಭಾರತದ ಅನೇಕ ಕಡೆಗಳಲ್ಲಿ ಪ್ರಾಚೀನ ಹಾಗೂ ಮಧ್ಯಯುಗಗಳಲ್ಲಿ ಅನೇಕ ಘಟಿಕಾಸ್ಥಾನಗಳು ಅತ್ಯಂತ ಶ್ರೇಷ್ಠ ಮಟ್ಟದ ಉನ್ನತ ಶಿಕ್ಷಣವನ್ನು ನೀಡುತ್ತಿದ್ದವು ಎಂಬುದು ಐತಿಹಾಸಿಕ ಸತ್ಯ. ತನ್ನ ಪರಮಾಣು ಸಾಮರ್ಥ್ಯದಿಂದ ಭಾರತ ಹೇಗೆ ಸೂಪರ್ ಪವರ್ ಆಗಲು ಸಾಧ್ಯವೋ ಜ್ಞಾನದ ಕ್ಷೇತ್ರದಲ್ಲೂ ಹಾಗೆಯೇ ಆಗಲು ಸಾಧ್ಯ ಎಂದು ಅವರು ಬಲವಾಗಿ ನಂಬಿದ್ದರು.



ಈ ನಿಟ್ಟಿನಲ್ಲಿ ಭಾರತ ತನ್ನ ಗಮನವನ್ನು ಕೇಂದ್ರೀಕರಿಸಬೇಕಾದ ಐದು ಮಹತ್ತ್ವದ ಕ್ಷೇತ್ರಗಳೆಂದರೆ: 1. ಕೃಷಿ ಮತ್ತು ಆಹಾರ ಸಂಸ್ಕರಣೆ, 2. ಶಿಕ್ಷಣ ಮತ್ತು ಆರೋಗ್ಯ ರಕ್ಷಣೆ, 3. ಮಾಹಿತಿ ಮತ್ತು ಸಂಪರ್ಕ ತಂತ್ರಜ್ಞಾನ, 4. ಮೂಲ ಸೌಕರ್ಯ, ವಿಶ್ವಾಸಾರ್ಹ ಉತ್ತಮ ಗುಣಮಟ್ಟದ ವಿದ್ಯುಚ್ಛಕ್ತಿ, ಭೂಸಾರಿಗೆ ಮತ್ತು ದೇಶದ ಎಲ್ಲ ಭಾಗಗಳಲ್ಲಿ ಮೂಲ ಸೌಕರ್ಯ ಅಭಿವೃದ್ಧಿ, 5. ಮಹತ್ತ್ವದ ತಂತ್ರಜ್ಞಾನದಲ್ಲಿ ಸ್ವಾವಲಂಬನೆ.

ಅಬ್ದುಲ್ ಕಲಾಂ ಅವರು ಗುರುತಿಸಿರುವ ಈ ಕ್ಷೇತ್ರಗಳು ಅಭಿವೃದ್ಧಿಯ ಪಥದ ಅಂತಿಮ ಕ್ಷೇತ್ರಗಳೆಂದೇನೂ ತಿಳಿಯಬೇಕಾಗಿಲ್ಲ. ಇನ್ನೂ ಹತ್ತಾರು ಕ್ಷೇತ್ರಗಳು ಇದ್ದಾವು. ಉದಾಹರಣೆಗೆ ಸಣ್ಣ ಕೈಗಾರಿಕೆಗಳು. ಆದರೆ, ಅವರು ತಮ್ಮ ನೆಲೆಯಲ್ಲಿ ಕಂಡುಕೊಂಡ ಈ ಐದು ಮಹತ್ತ್ವದ ಕ್ಷೇತ್ರಗಳನ್ನು ಯಾರೂ ಕಡೆಗಣಿಸುವಂತಿಲ್ಲ. 2020ರವರೆಗೆ ಭಾರತ ವಿಶ್ವದಲ್ಲಿ ಶ್ರೇಷ್ಠ ಶಕ್ತಿಯಾಗಿ ಹೊರಹೊಮ್ಮಬೇಕೆಂಬುದು ಅವರ ದೊಡ್ಡ ಕನಸಾಗಿತ್ತು.

ಕಲಾಂ ಕನಸನ್ನು ನನಸು ಮಾಡಲಾಗುವುದೇನು?

**(ಕೃಪೆ: ತರಂಗ, ಅಗಸ್ಟ್ 13, 2015)**

### ಟಿವಿ ಇರಲಿಲ್ಲ

ಮಾಜಿ ರಾಷ್ಟ್ರಪತಿ ಡಾ. ಎಪಿಜೆ ಅಬ್ದುಲ್ ಕಲಾಂ ನಿವಾಸದಲ್ಲಿ ಟಿವಿ ಇರಲಿಲ್ಲ. ಬೆಳಗ್ಗೆ 6.30 ರಿಂದ 7 ಗಂಟೆ ನಡುವೆ ಅವರ ದಿನಚರಿ ಆರಂಭವಾಗುತ್ತಿತ್ತು. ಬೆಳಗಿನ ಜಾವ 2 ಗಂಟೆ ಯವರೆಗೂ ಅವರು ಎಚ್ಚರವಾಗಿರು ತ್ತಿದ್ದರು. ರೇಡಿಯೋದಲ್ಲಿ ವಿಶೇಷವಾಗಿ ಸುದ್ದಿಗಳನ್ನು ಆಲಿಸುತ್ತಿದ್ದರು. ನಿತ್ಯ ತಮ್ಮ ಈ-ಮೇಲ್‌ಗಳನ್ನು ವೈಯಕ್ತಿಕವಾಗಿ ಪರಿಶೀಲಿಸುತ್ತಿದ್ದರು.

**(ಕೃಪೆ: ಸಂಯುಕ್ತ ಕರ್ನಾಟಕ, 29 ಜುಲೈ 2015)**

# ಸರಳ, ಸಜ್ಜನ ಕಲಾಮ್

**ಎಂ. ಅಬ್ದುಲ್ ರೆಹಮಾನ್ ಪಾಷ**

[ಕಳೆದ ಹತ್ತು ವರ್ಷಗಳಲ್ಲಿ ದೇಶದ ಒಂದು ಕೋಟಿಗೂ ಹೆಚ್ಚು ಮಕ್ಕಳು ಮತ್ತು ಯುವಜನರ ಜತೆ ನೇರವಾಗಿ ಮಾತನಾಡಿದ ಏಕೈಕ ರಾಜಕಾರಣಿ ಅಬ್ದುಲ್ ಕಲಾಮ್. ಅವರ ಯಾವ ಸಭೆ ನಡೆದರೂ ಅಲ್ಲಿ ಮಕ್ಕಳ ಜತೆಗೆ ಸಂವಾದ ಇದ್ದೇ ಇತ್ತು.]

ಇಸ್ಲಾಮ್‌ನಲ್ಲಿ ಖಲೀಫಾ ಎಂದರೆ, ಮುಸ್ಲಿಮ್ ರಾಷ್ಟ್ರದ ನಾಗರಿಕ ಮತ್ತು ಧಾರ್ಮಿಕ ನಾಯಕ. ಪ್ರವಾದಿ ಮುಹಮ್ಮದರ ನಂತರ ಮೂರನೆ ಖಲೀಫಾ ಅಗಿದ್ದ ಹಝ್ರುತ್ ಉಸ್ಮಾನ್ ಬಿನ್ ಅಫ್ಫಾನ್ ಅವರು ಒಂದು ಚಿಕ್ಕ ಗುಡಿಸಿಲಿನಲ್ಲಿ ಖಲೀಫಾ ಕಛೇರಿಯನ್ನು ನಡೆಸುತ್ತಿದ್ದರು. ರಾತ್ರಿ ಹೊತ್ತು ದೀಪದ ಬೆಳಕಿನಲ್ಲಿ ಕೆಲಸ ಮಾಡುತ್ತಿದ್ದರು. ಅವರ ಭೇಟಿಗಾಗಿ ಯಾರೋ ಬಂದರು. ಹ. ಉಸ್ಮಾನ್ ಕಛೇರಿ ಕೆಲಸವೋ ಖಾಸಗಿ ಕೆಲಸವೋ ಎಂದು ಕೇಳಿದರು. ಬಂದವರು ಖಾಸಗಿ ಕೆಲಸ ಎಂದರು. ಸರಿ ಎಂದು ಹ. ಉಸ್ಮಾನ್ ಎದುರಿಗಿದ್ದ ದೀಪವನ್ನು ಆರಿಸಿದರು; ಕತ್ತಲಲ್ಲೇ ಮಾತುಕತೆ ನಡೆಯಿತು. ಮುಂದೆ ಅವರು ಹೀಗೇಕೆ ಮಾಡಿದರು ಎಂದು ಕೇಳಿದಾಗ; ಅವರೆಂದರು: 'ಇದು ಸರಕಾರೀ ದೀಪ. ಖಾಸಗಿ ಕೆಲಸಕ್ಕೆ ಬಳಸುವಂತಿಲ್ಲ.'

ಡಾ. ಎ.ಪಿ.ಜೆ. ಅಬ್ದುಲ್ ಕಲಾಮ್ ಅವರು ರಾಷ್ಟ್ರಪತಿಗಳಾಗಿದ್ದಾಗ, ಅವರನ್ನು ನೋಡಲು ಊರಿಂದ ಬಂಧುಗಳು ಬಂದಿದ್ದರು. ಕಲಾಮ್ ಅವರು ಅವರನ್ನು ರೈಲುನಿಲ್ದಾಣದಿಂದ ಟ್ಯಾಕ್ಸಿಯಲ್ಲಿ ಕರೆಸಿಕೊಂಡರು. ಅವರ ಊಟವನ್ನು ಹೊರಗಡೆಯಿಂದ ತರಿಸಿದರು. ಊಟದ ಬಿಲ್ಲನ್ನೂ ಅವರೇ ತಮ್ಮ ಸಂಬಳದಿಂದ ಕೊಟ್ಟರು. ತಮ್ಮ ಖಾಸಗಿ ಕೆಲಸಗಳಿಗಾಗಿ ರಾಷ್ಟ್ರಪತಿ ಭವನ ಕೊಡಮಾಡಿದ ಯಾವುದೇ ಸೌಕರ್ಯಗಳನ್ನು ಕಲಾಮ್ ಅವರು ಬಳಸಲಿಲ್ಲ. ಬಹುಶಃ ಇಂಥ ಚಿಕ್ಕ ಚಿಕ್ಕ ಘಟನೆಗಳಲ್ಲಿಯೇ ದೊಡ್ಡವರ ದೊಡ್ಡ ಗುಣ ವ್ಯಕ್ತವಾಗುತ್ತದೆ. ಮಹಾನ್ ವ್ಯಕ್ತಿತ್ವದ ಅಬ್ದುಲ್ ಕಲಾಮ್ ಅವರ ಸರಳ ಸಜ್ಜನಿಕೆ, ಪ್ರಾಮಾಣಿಕತೆಯನ್ನು ಬಿಂಬಿಸುತ್ತಿದ್ದ ನೂರಾರು ಘಟನೆಗಳಲ್ಲಿ ಇದೂ ಒಂದು.

**ಥಿಂಕಿಂಗ್ ಹಟ್**

ರಾಷ್ಟ್ರಪತಿ ಭವನದಲ್ಲಿ 340 ಅಲಂಕೃತ ಕೋಣೆಗಳು, ಕಛೇರಿಗಳು, ಸಭಾಂಗಣಗಳು



ಇವೆ. ಅಬ್ದುಲ್ ಕಲಾಮ್ ತಮ್ಮ ಅಧಿಕೃತ ವ್ಯವಹಾರಗಳನ್ನು ರಾಷ್ಟ್ರಪತಿ ಭವನದಲ್ಲಿಯೇ ಮಾಡುತ್ತಿದ್ದರು. ಆದರೆ ಅವರ ಬೌದ್ಧಿಕ ಚಿಂತನೆಗೆ ಆ ವೈಭವ ಒಗ್ಗುತ್ತಿರಲಿಲ್ಲವೋ ಏನೋ? ಅದಕ್ಕೆಂದೇ ಅವರು ರಾಷ್ಟ್ರಪತಿ ಭವನದ ಆವರಣದಲ್ಲಿರುವ ಮೊಘಲ್ ಗಾರ್ಡನ್ಸ್‌ನಲ್ಲಿ ಒಂದು ಕುಟೀರವನ್ನು ನಿರ್ಮಿಸಿದ್ದರು. ಅದಕ್ಕೆ 'ಥಿಂಕಿಂಗ್ ಹಟ್' ಎಂದು ಹೆಸರಿಸಿದ್ದರು. ಭಾರತದ ಅಭ್ಯುದಯ ಕುರಿತು ವಾಸ್ತವ ನೆಲೆಯ ಆಲೋಚನೆಗಳು ಅವರಿಗೆ ಅಲ್ಲಿಯೇ ಹೊಳೆಯುತ್ತಿದ್ದವು. ತಾವೊಬ್ಬರೇ ಚಿಂತನೆ ಮಾಡುವಾಗಲೂ ಅವರು ಮಣಿಪುರಿ ಶೈಲಿಯ ಈ ಕುಟೀರದಲ್ಲಿ ಕಳೆಯುತ್ತಿದ್ದರು. 'ಇಂಡೊಮಿಟಬಲ್ ಸ್ಪಿರಿಟ್' (ಅದಮ್ಯ ಚೇತನ) ಎಂಬ ಪುಸ್ತಕ ರಚನೆಯಾಗಿದ್ದು ಈ ಚಿಂತನಾ ಕುಟೀರದಲ್ಲಿಯೇ.

ರಾಷ್ಟ್ರಪತಿಯಾಗಿ ಅವರ ಅವಧಿ ಮುಗಿದು ಅವರು ರಾಷ್ಟ್ರಪತಿ ಭವನವನ್ನು ಬಿಟ್ಟ ಕೆಲವೇ ದಿನಗಳಲ್ಲಿ ಥಿಂಕಿಂಗ್ ಹಟ್‌ಅನ್ನು ತೆರವುಗೊಳಿಸಲಾಯಿತು. ರಾಷ್ಟ್ರಪತಿ ಭವನದ, ಲಚ್ಯನ್ಸ್ ಎಂಬ ವಾಸ್ತುತಜ್ಞ ರೂಪಿಸಿದ ಇಂಗ್ಲಿಷ್ ಮತ್ತು ಮೊಘಲ್ ವಿಶಿಷ್ಟ ಸಂಯೋಜನೆಯ ಭೂವಿನ್ಯಾಸದ ಅಂದವನ್ನು ಅದು ಕೆಡಿಸುತ್ತಿತ್ತು ಎಂದು ತಜ್ಞರ ಸಮಿತಿ ಕೊಟ್ಟ ತೀರ್ಪೇ ಇದಕ್ಕೆ ಕಾರಣ. ಕಲಾಮ್ ಅವರ ಚಿಂತನಾ ಕುಟೀರದ ಜೊತೆ ರಾಷ್ಟ್ರಪತಿ ಭವನದಲ್ಲಿ ಅಪ್ಪಟ ಭಾರತೀಯ ಚಿಂತನೆಯೂ ಮಾಯವಾಯಿತೋ ಏನೋ!

**ಬೆಳೆಯ ಸಿರಿ ಮೊಳಕೆಯಲ್ಲಿ**

ಕಲಾಮ್ ಅವರು ಯಾವುದೇ ಅಧಿಕೃತ ಭೇಟಿಗೆ ಹೋಗಲಿ, ಅದರ ಜೊತೆ ಹಲವು ಶಾಲಾ ಕಾಲೇಜುಗಳಿಗೆ ಭೇಟಿ ನೀಡಿ ವಿದ್ಯಾರ್ಥಿಗಳೊಂದಿಗೆ ಕೆಲಹೊತ್ತು ಕಾಲ ಕಳೆಯದಿದ್ದರೆ ಅವರಿಗೆ ಸಮಾಧಾನವೇ ಇಲ್ಲ. ಒಮ್ಮೆ ವಿಶಾಖಪಟ್ಟಣದ ನೌಕಾನೆಲೆಯ ಪರಿವೀಕ್ಷಣೆಗೆಂದು ಹೋಗಿದ್ದಾಗ, ಆ ಕಾರ್ಯಕ್ರಮದ ನಂತರ ಸುಮಾರು 600ಕ್ಕೂ ಹೆಚ್ಚು ವಿದ್ಯಾರ್ಥಿಗಳು, ಶಿಕ್ಷಕರನ್ನು ಉದ್ದೇಶಿಸಿ ಮಾತಾಡಿ, ಕೊನೆಯಲ್ಲಿ ಪ್ರಶ್ನೆ ಏನಾದರೂ ಇದ್ದರೆ ಕೇಳಿ ಎಂದರು. ಬಹಳ ಹೊತ್ತಿನಿಂದ ಉತ್ಸಾಹವನ್ನು ಹತ್ತಿಕ್ಕಿಕೊಂಡು ಕಾದಿದ್ದ ಶಿಕ್ಷಕರೊಬ್ಬರು ಕೂಡಲೇ ಎದ್ದು ನಿಂತರು. ಕಲಾಮ್‌ರು, 'ಈಗಲ್ಲ, ಮೊದಲು ಮಕ್ಕಳು, ಅದು ಹೆಚ್ಚು ಮುಖ್ಯ. ಆಮೇಲೆ ಸಮಯವಿದ್ದರೆ ದೊಡ್ಡವರ ಪ್ರಶ್ನೆಗಳನ್ನು ಎತ್ತಿಕೊಳ್ಳೋಣ' ಎಂದರು! ಸಾಧಾರಣ ಘಟನೆಯಾದರೂ ಕಲಾಮ್‌ರು ಮಕ್ಕಳಿಗೆ, ಯುವಜನರಿಗೆ, ವಿದ್ಯಾರ್ಥಿಗಳಿಗೆ ನಿರಂತರ ನೀಡುತ್ತಿದ್ದ ಮೊದಲ ಆದ್ಯತೆಗೆ ಇದು ಸಾಕ್ಷಿಯಾಗಿದೆ.

'ಮಕ್ಕಳು ದೇಶದ ಭವಿಷ್ಯ' ಎಂದು ಎಲ್ಲರೂ ಮಾತಾಡುತ್ತಾರೆ; ಆದರೆ, ಇದನ್ನು

ದೃಢವಾಗಿ ನಂಬಿ ತಮ್ಮ ತಮ್ಮ ಕ್ಷೇತ್ರ, ಅಧಿಕಾರದ ವ್ಯಾಪ್ತಿಯಲ್ಲಿ ನಮ್ಮ ದೇಶದ ಭವಿಷ್ಯವನ್ನು ಸುಭದ್ರಗೊಳಿಸಲು ಎಷ್ಟು ಜನ ಶ್ರಮಿಸುತ್ತಾರೆ? ಇಂಥ ವ್ಯಕ್ತಿತ್ವಕ್ಕೆ ಅಬ್ದುಲ್ ಕಲಾಮ್ ಅಪೂರ್ವ ನಿದರ್ಶನ. ಅವರಿಗೆ ಭಾರತದ ಆಂತರಿಕ ಶಕ್ತಿ, ಸಾಮರ್ಥ್ಯದ ಬಗ್ಗೆ ಅಪಾರ ನಂಬಿಕೆ ಇತ್ತು. ಆದರೆ ಅದು ಅನೇಕ ಐತಿಹಾಸಿಕ, ಸಾಮಾಜಿಕ, ರಾಜಕೀಯ, ಸಾಂಪ್ರದಾಯಿಕ ಕಾರಣಗಳಿಂದಾಗಿ ಹತ್ತಿಕ್ಕಲ್ಪಟ್ಟಿದೆ ಎಂಬುದು ಅವರ ಚಿಂತೆಯಾಗಿತ್ತು. 'ಒಮ್ಮೆ ಆ ದಮನಿತ ಶಕ್ತಿ ವಿಮೋಚಿತವಾಯಿತೆಂದರೆ ಭಾರತ ಬಹಳ ಬೇಗನೇ ಜಗತ್ತಿನ ಸೂಪರ್ ಪವರ್‌ಗಳಲ್ಲಿ ಒಂದಾಗುವುದರಲ್ಲಿ ಸಂಶಯವೇ ಇಲ್ಲ' ಎಂಬುದು ಅವರ ದೃಢ ನಂಬಿಕೆಯಾಗಿತ್ತು. ದೇಶದ ಭವಿಷ್ಯವನ್ನು ಬೇರುಮಟ್ಟದಿಂದಲೇ ಸುಭದ್ರವಾಗಿ ಕಟ್ಟಬೇಕು, ಸಿರಿವಂತ ಬೆಳೆಯನ್ನು ಕಾಣಬೇಕು ಎಂದರೆ ಅದನ್ನು ಮೊಳಕೆಯಲ್ಲಿಯೇ ಪೌಷ್ಟಿಕವಾಗಿ ಸಾಕಬೇಕು ಎಂಬ ವ್ಯಾವಹಾರಿಕ ನೆಲೆಗಟ್ಟಿನಲ್ಲಿಯೇ ಅವರು ಮಕ್ಕಳು ಮತ್ತು ಯುವಜನರ ಬೆಳವಣಿಗೆಯ ಕುರಿತು ನಿರಂತರ ಶ್ರಮಿಸಿದ್ದು.

ಸಂಪ್ರದಾಯ, ಜಾತಿ, ಧರ್ಮ, ಮೂಢನಂಬಿಕೆ ಇವೆಲ್ಲದರಿಂದಾಗಿ ಭಾರತದ ಜನರಲ್ಲಿ ಅಭಿವೃದ್ಧಿಯ ಕುರಿತು ಸಕಾರಾತ್ಮಕ ಪ್ರೇರಣೆಯಿಲ್ಲ ಎಂದು ಭಾವಿಸಲಾಗುತ್ತದೆ. ಆದರೆ, ಅಬ್ದುಲ್ ಕಲಾಮ್‌ರ ಪ್ರಕಾರ 'ಈ ಅಸಾಮರ್ಥ್ಯ ವಾಸ್ತವವಾದುದಲ್ಲ; ನಾವೇ ಭ್ರಮಿಸಿ, ನಮ್ಮ ಮೇಲೆ ಹೇರಿಕೊಂಡಿದ್ದು. ಬುದ್ಧಿ ಇಲ್ಲದೇ ಇರುವುದಲ್ಲ ಇದಕ್ಕೆ ಕಾರಣ. ಇನ್ನೊಬ್ಬರಿಂದ ಪ್ರಭಾವಿತರಾಗದೇ ಸ್ವಂತ ಬುದ್ಧಿಯನ್ನು ವಿವೇಕದಿಂದ ಬಳಸುವಲ್ಲಿ ದೃಢನಿರ್ಧಾರ ಮತ್ತು ಧೈರ್ಯದ ಕೊರತೆಯೇ ನಮ್ಮ ಎಲ್ಲ ಸಮಸ್ಯೆಗಳಿಗೆ ಕಾರಣ.'

ಕಳೆದ ಹತ್ತು ವರ್ಷಗಳಲ್ಲಿ ಅವರು ನಮ್ಮ ದೇಶದ ಒಂದು ಕೋಟಿಗೂ ಹೆಚ್ಚು ಜನ ಮಕ್ಕಳು ಮತ್ತು ಯುವಜನರನ್ನು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಭೇಟಿ ಮಾಡಿದ್ದಾರೆ. ಅವರನ್ನು 'ಕನಸು ಕಾಣಿರಿ' ಎಂದು ಪ್ರೇರೇಪಿಸಿದ್ದಾರೆ. 'ಬರೀ ಭ್ರಮೆಯಾದ ಹಗಲುಗನಸನ್ನಲ್ಲ; ಸಾಧಿಸಬಹುದಾದ ವಾಸ್ತವ ಕನಸನ್ನು. ಕನಸನ್ನು ಆಲೋಚನೆಯನ್ನಾಗಿಸಿ. ಕ್ರಿಯೆಯಲ್ಲಿ ಪರಿವರ್ತಿಸಿರಿ' ಎಂಬುದು ಅವರ ಸಲಹೆಯಾಗಿತ್ತು.

## ಶ್ರದ್ಧಾವಂತ ಮುಸಲ್ಮಾನ

ಹೌದು. ಶ್ರದ್ಧಾವಂತ ಧಾರ್ಮಿಕ ವ್ಯಕ್ತಿಯಾಗಿದ್ದರೂ ಕಲಾಮ್ ಮೂಲಭೂತವಾದಿ, ಸಂಪ್ರದಾಯವಾದಿ ಆಗಿರಲಿಲ್ಲ. ಅವರಿಗೆ ಮುಸಲ್ಮಾನನಾಗಿರುವುದು ಎಂದರೆ ಉಳಿದವರಿಗಿಂತ ಭಿನ್ನವಾಗಿ ತೋರುವ ಉಡುಪು, ತೊಡಪು, ಆಚರಣೆ ಇವುಗಳಿಗಿಂತ ಹೆಚ್ಚಾಗಿ, ಇಸ್ಲಾಮ್‌ನ ಮೂಲಭೂತ ಸಂದೇಶಗಳನ್ನು ಜೀವನದಲ್ಲಿ ಅನುಸರಿಸುವುದಾಗಿತ್ತು. ಇತರ ಧರ್ಮಗಳ ಕುರಿತು ಸಹಿಷ್ಣುತೆ, ಬಡವರ ಬಗ್ಗೆ ಕನಿಕರ, ಜನಸೇವೆಯಲ್ಲಿ ನಿಸ್ವಾರ್ಥ-ಇವು ಅವರು ಇಸ್ಲಾಮ್‌ನಿಂದ ಕಲಿತು ಬದುಕಿನಲ್ಲಿ ಅಳವಡಿಸಿಕೊಂಡ ತತ್ವಗಳಾಗಿದ್ದವು. ಬಹುಧರ್ಮೀಯ ದೇಶದಲ್ಲಿ ಒಬ್ಬ ಭಾರತೀಯ ಮುಸಲ್ಮಾನ ಹೇಗಿರುತ್ತಾನೆ ಎಂಬುದಕ್ಕೆ ಅವರು ಅನುಕರಣೀಯ ಮಾದರಿಯಾಗಿದ್ದರು. ಕುರಾನ್ ಓದುವ ಹಾಗೆಯೇ ಗೀತೆಯನ್ನು ಅಷ್ಟೇ ಶ್ರದ್ಧೆಯಿಂದ ಅಧ್ಯಯನ ಮಾಡಿದ್ದರು. 'ಮಹಾನ್ ವ್ಯಕ್ತಿಗಳು ಇತರ ಮಾನವರ ಸ್ನೇಹ ಪ್ರೀತಿಯನ್ನು ಗಳಿಸಿಕೊಳ್ಳಲು ಧರ್ಮವನ್ನು ಪ್ರೇರಣೆಯಾಗಿ ಭಾವಿಸುತ್ತಾರೆ; ಸಣ್ಣ ವ್ಯಕ್ತಿಗಳು ಅದೇ ಧರ್ಮವನ್ನು ದ್ವೇಷ, ಹೊಡೆದಾಟದ ಅಸ್ತ್ರವನ್ನಾಗಿ ಬಳಸುತ್ತಾರೆ' ಎಂಬುದು ಅವರ ಕೊರಗಾಗಿತ್ತು.



ಹುಟ್ಟೂರು, ತಮಿಳುನಾಡಿನ ರಾಮೇಶ್ವರದಲ್ಲಿ ಬಾಲ್ಯದಲ್ಲಿಯೇ ಇತ್ತ ಕಡೆ ಮಸೀದಿಯ ಅಜಾನ್ ಕೂಗು, ಅತ್ತ ಕಡೆ ಶಿವನ ದೇವಸ್ಥಾನದ ಪೂಜೆಯ ಗಂಟೆಯ ಸದ್ದು ಎರಡನ್ನೂ ಕೇಳಿಸಿಕೊಳ್ಳುತ್ತಾ ಬೆಳೆದ ಅವರು, ಚರ್ಚು, ಮಂದಿರ, ದರ್ಗಾ, ಮಠ ಎಲ್ಲ ಕಡೆಗೆ ಹೋಗುತ್ತಿದ್ದರು. ಅವರು ಶಿಕ್ಷಣ, ಆರೋಗ್ಯ, ಗ್ರಾಮೀಣ ಅಭಿವೃದ್ಧಿ ಇತ್ಯಾದಿ ಕ್ಷೇತ್ರದಲ್ಲಿ ಮಾಡುತ್ತಿರುವ ಕಾರ್ಯವನ್ನು ಅವಲೋಕಿಸಿ, ಪ್ರಶಂಸಿಸಿ, ಅವರನ್ನು ಇನ್ನಷ್ಟು ಮಾಡುವಂತೆ ಸ್ಫೂರ್ತಿ ನೀಡಲು. ಅವರು ಹೋದಲ್ಲೆಲ್ಲ ಉತ್ಸಾಹದ ಸೌಹಾರ್ದದ ಮಿಂಚು ಸುಳಿದಾಡುತ್ತಿತ್ತು. ಎಲ್ಲರೂ ಅವರನ್ನು ಪ್ರೀತಿಯಿಂದ ಅಪ್ಪಿಕೊಳ್ಳುತ್ತಿದ್ದರು, ಅವರ ಮಾತನ್ನು ಒಪ್ಪಿಕೊಳ್ಳುತ್ತಿದ್ದರು.

ಧರ್ಮದ ಹೆಸರಿನಲ್ಲಿ ವಿಭಜಿತವಾಗಿ ನಾಶವಾಗುತ್ತಿರುವ ಯುವಶಕ್ತಿಯ ಕುರಿತು ಆತಂಕಿತರಾಗಿದ್ದ ಕಲಾಮ್‌ರು, 'ನಮ್ಮನ್ನು ವಿಭಜಿಸಿ ನಾಶ ಮಾಡುವ ಶಕ್ತಿಗಳ ಎದುರು ಹೋರಾಡಬೇಕು; ವ್ಯಕ್ತಿಗಿಂತ ದೇಶ ದೊಡ್ಡದು ಎಂಬ ಅರಿವನ್ನು ಬೆಳೆಸಿಕೊಳ್ಳಬೇಕು. ದೇಶದ ಒಳಿತಿನಲ್ಲಿಯೇ ನಮ್ಮ ಸುಸ್ಥಿತ ಒಳಿತು ಅಡಗಿದೆ' ಎಂದು ಯುವಜನತೆಗೆ ಸಂಘಟಿತ ಕ್ರಿಯೆಗಾಗಿ ಪ್ರಚೋದಿಸುತ್ತಿದ್ದರು.

ಭಾರತೀಯ ಆಧ್ಯಾತ್ಮಿಕ ಪರಂಪರೆಯ ಕುರಿತು ಅಪಾರ ಅಭಿಮಾನವಿದ್ದ ಕಲಾಮ್, 'ದಾಸ್ಯ ಮನೋಭಾವ ತೊರೆದು, ಮುಕ್ತಚಿಂತಕರಾಗಿ ಇಂದಿನ ಭಾರತೀಯ ಸಮಾಜವು ತರ್ಕವನ್ನು ಬಳಸಿಯೇ ಸುಧಾರಣೆ ಕಾಣಬೇಕಾಗಿದೆ. ವೈಜ್ಞಾನಿಕ ವಿಧಾನದ ಮೂಲಕ ಜ್ಞಾನವನ್ನು ಶ್ರೀಮಂತಗೊಳಿಸಬೇಕು; ಮೂಢನಂಬಿಕೆಗಳನ್ನು, ಅಸಹಿಷ್ಣುತೆಗಳನ್ನು ವಿರೋಧಿಸಬೇಕು' ಎನ್ನುತ್ತಿದ್ದರು.

## ದೇಶದ ಮಗ

ಅಬ್ದುಲ್ ಕಲಾಮ್‌ರು ಸಂಶೋಧನಾ ಸಹಾಯಕನಿಂದ ದೊಡ್ಡ ದೊಡ್ಡ ಸಂಸ್ಥೆಗಳ ನಿರ್ದೇಶಕರವರೆಗೆ, ವಿಜ್ಞಾನಿಯಾಗಿ, ಸಂದರ್ಶಕ ಪ್ರಾಧ್ಯಾಪಕರಾಗಿ, ಲೇಖಕರಾಗಿ,

ಚಿಂತಕರಾಗಿ, ರಾಷ್ಟ್ರಪತಿಗಳಾಗಿ ತಮ್ಮ ಬದುಕಿನ ಪ್ರತಿಯೊಂದು ಕ್ಷಣವನ್ನೂ ಈ ದೇಶದ ಅಭ್ಯುದಯಕ್ಕಾಗಿ ಮುಡುಪಿಟ್ಟವರು. ಅವರ ಸಾಧನೆಗಳ ವಿಪುಲತೆಯನ್ನು ನೋಡುವಾಗ ಸ್ವಂತಕ್ಕಾಗಿ ಅವರು ಏನೂ ಮಾಡುತ್ತಿರಲಿಲ್ಲವೇನೋ ಎನ್ನಿಸುತ್ತದೆ.

ಅವರ ಪೂರ್ಣ ಹೆಸರು ಅವುಲ್ ಪಕೀರ್ ಜೈನುಲಾಬ್ದೀನ್ ಅಬ್ದುಲ್ ಕಲಾಂ. ಅಬ್ದುಲ್ ಕಲಾಮ್ ಅವರ ಹೆಸರು; ಜೈನುಲಾಬ್ದೀನ್ ಅವರ ತಂದೆಯ ಹೆಸರು; ಪಕೀರ್ ಅವರ ತಾತನ ಹೆಸರು, ಅವುಲ್ ಅವರ ಮುತ್ತಾತನ ಹೆಸರು. ಅಬ್ದುಲ್ ಕಲಾಮ್ ಮದುವೆಯಾಗಿರಲಿಲ್ಲ. ಹಿಂದಿನ ಮೂರು ತಲೆಮಾರುಗಳ ಹೆಸರುಗಳನ್ನು ತಮ್ಮ ಹೆಸರಿನೊಂದಿಗೆ ಹೇಳಿಕೊಳ್ಳುವ ಸಂಪ್ರದಾಯದ, ಇವರ ತಂದೆ ತಾಯಿಗಳಿಗೆ ಮಗ ಮದುವೆಯಾಗದೇ ಇರುವುದರ ಬಗ್ಗೆ ಬೇಸರವಿತ್ತು. ತಮ್ಮ ಮನೆತನದ ಹೆಸರನ್ನು ಮುಂದುವರಿಸಿಕೊಂಡುಹೋಗದಂತಾಯಿತಲ್ಲ ಎಂದು ಕೊರಗುತ್ತಿದ್ದರು.

ಮುಂದೆ, 'ಕ್ಷಿಪಣಿ ಪಿತಾಮಹ' ಎಂಬ ಬಿರುದನ್ನು ತಂದುಕೊಟ್ಟ, ಅಗ್ನಿ ಕ್ಷಿಪಣಿ 2500 ಮೈಲು ದೂರದ ಗುರಿಯನ್ನು ಯಶಸ್ವಿಯಾಗಿ ತಲುಪಿದ ಬಳಿಕ ಅದರ ರೂವಾರಿ ಕಲಾಮ್ ಹೇಳಿದ್ದರು: 'ಈಗ ನಮ್ಮ ಅಜ್ಜ ಇದ್ದಿದ್ದರೆ ಮೊಮ್ಮಗನ ಅಗ್ನಿ ಅಷ್ಟೊಂದು ಶಕ್ತಿಶಾಲಿ ಎಂಬುದನ್ನು ಕಣ್ಣಾರೆ ಕಂಡು ಆನಂದಿಸುತ್ತಿದ್ದರು' ಎಂದು. ದೇಶವೇ ತನ್ನ ಕುಟುಂಬ ತನ್ನ ಸಾಧನೆಗಳೇ ತನ್ನ ಮಕ್ಕಳು ಎಂದು ಭಾವಿಸಿದ್ದ ಮಹಾನುಭಾವ ಅಬ್ದುಲ್ ಕಲಾಂ.

ಸಂಶೋಧನೆ, ಅಧ್ಯಾಪನ, ಆಡಳಿತ ಇವೆಲ್ಲದರ ನಡುವೆ ಕಲಾಮ್‌ರಿಗೆ ಪುಸ್ತಕ ಬರೆಯುವುದಕ್ಕೂ ಸಮಯ ಮತ್ತು ಅದಕ್ಕೆ ಬೇಕಾದ ತಲ್ಲೀನತೆ ಇರುತ್ತಿತ್ತು ಎನ್ನುವುದು ಒಂದು ಅಚ್ಚರಿಯೇ ಸರಿ. ಅವರು 17ಕ್ಕೂ ಹೆಚ್ಚು ಶ್ರೇಷ್ಠ ಕೃತಿಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಒಂದೆರಡು ಮಾತ್ರ ತಂತ್ರಜ್ಞಾನಕ್ಕೆ ಸಂಬಂಧಿಸಿದವು. ಉಳಿದವೆಲ್ಲಾ, ಭಾರತ ಮತ್ತು ಅದರ ಜನ ಮುನ್ನಡೆಯಬೇಕಾದ ಹಾದಿಯ ಕುರಿತ ಪರಿಕಲ್ಪನೆ, ಕಾರ್ಯಯೋಜನೆಗಳೇ ಆಗಿದ್ದವು. ಅವರು ಒಬ್ಬ ಆಧ್ಯಾತ್ಮಿಯಂತೆ, ಚಿಂತಕನಂತೆ ಬರೆಯುತ್ತಿರಲಿಲ್ಲ. ತನ್ನ ಆಲೋಚನೆಗಳ ಬಗ್ಗೆ ಅದಮ್ಯ ಉತ್ಸಾಹವನ್ನು ಮೆರೆಯುವ ಲೌಕಿಕ ಕಾರ್ಯಕರ್ತನಂತೆ ಹುಮ್ಮಸ್ಸಿನಿಂದ ಬರೆಯುತ್ತಿದ್ದರು. ಇಂಡಿಯಾ 2020, ಇಗ್ನೈಟೆಡ್ ಮೈಂಡ್ಸ್, ಎನ್‌ವಿಷನಿಂಗ್ ಎಂಪವರ್ಡ್ ಇಂಡಿಯಾ, ಯು ಆರ್ ಬಾರ್ನ್ ಟು ಬ್ಲಾಸಮ್, ಸೈಂಟಿಫಿಕ್ ಪಾಥ್ ವೇಸ್ ಟು ಎ ಬ್ರೈಟರ್ ಫ್ಯೂಚರ್- ಕೃತಿಗಳ ಹೆಸರುಗಳೇ ಅವರ ಅದಮ್ಯ ಚೈತನ್ಯವನ್ನು ಬಿಂಬಿಸುತ್ತವೆ. ಅವರು ಯಾವುದೇ ರಾಜಕೀಯ ಪಕ್ಷವನ್ನು ಪ್ರತಿನಿಧಿಸಿ ಬಂದಿರಲಿಲ್ಲ. ಆದ್ದರಿಂದ ಯಾವುದೇ ಪಕ್ಷದ ಋಣವನ್ನು ಅವರು ತೀರಿಸಬೇಕಾಗಿರಲಿಲ್ಲ. ದೇಶದ ಋಣವನ್ನು ತೀರಿಸಲು ಇದು ಹೆಚ್ಚು ಪ್ರೇರಕ ಪರಿಸ್ಥಿತಿಯಾಗಿತ್ತು.



ಅವರು ನಿಜಕ್ಕೂ ಜನರ ರಾಷ್ಟ್ರಪತಿ. ಕೆಲವೊಮ್ಮೆ ಪ್ರಶಸ್ತಿಯನ್ನು ಪಡೆದಿರುವ ವ್ಯಕ್ತಿಯಿಂದಾಗಿ ಆ ಪ್ರಶಸ್ತಿಗೆ ಹೆಚ್ಚಿನ ಗೌರವ ಸಲ್ಲುತ್ತದೆ ಎನ್ನುತ್ತಾರೆ. ಅದು ಕಲಾಮ್‌ರ ಸಂದರ್ಭದಲ್ಲಿ ನಿಜ. ಅವರು ಪಡೆದಿರುವ ರಾಷ್ಟ್ರೀಯ, ಅಂತಾರಾಷ್ಟ್ರೀಯ ಪ್ರಶಸ್ತಿ, ಪುರಸ್ಕಾರಗಳನ್ನಷ್ಟೇ ಪಟ್ಟಿ ಮಾಡಿದರೂ ಅದು ಅತಿ ಉದ್ದವಾಗಿಬಿಡುತ್ತದೆ. ಪ್ರಮುಖವಾದುವೆಂದರೆ, ಪದ್ಮಭೂಷಣ, ಪದ್ಮವಿಭೂಷಣ, ಭಾರತರತ್ನ, ಜಗತ್ತಿನ 40 ವಿಶ್ವವಿದ್ಯಾಲಯಗಳಿಂದ ಗೌರವ ಡಾಕ್ಟರೇಟ್ ಇತ್ಯಾದಿ. 2005 ಮೇ 26ರಂದು ಅವರು ಸ್ವಿಟ್ಜರ್ಲೆಂಡ್‌ಗೆ ಭೇಟಿ ನೀಡಿದ ಸಂದರ್ಭದ ನೆನಪಿನಲ್ಲಿ ಆ ರಾಷ್ಟ್ರ ಮೇ 26ನ್ನು ರಾಷ್ಟ್ರೀಯ ವಿಜ್ಞಾನ ದಿನವನ್ನಾಗಿ ಘೋಷಿಸಿದೆ. ಅವರ 79 ಜನ್ಮದಿನವನ್ನು ಯುಎನ್ ಜಾಗತಿಕ ವಿದ್ಯಾರ್ಥಿ ದಿನವನ್ನಾಗಿ ಘೋಷಿಸಿತು.

## ವಿಭಿನ್ನ ಶ್ರದ್ಧಾಂಜಲಿ

ಡಾ. ಅಬ್ದುಲ್ ಕಲಾಮ್ ಜುಲೈ 27, 2015ರಂದು ನಿಧನರಾದರು. ಮಹಾನ್ ವ್ಯಕ್ತಿಗಳ ಬಗ್ಗೆ 'ಇವರು ಕೊನೆಯ ಉಸಿರು ಇರುವವರೆಗೂ ದೇಶಸೇವೆ ಮಾಡಿದರು' ಎಂದು ಸಾಮಾನ್ಯವಾಗಿ ಸಾಂಕೇತಿಕವಾಗಿ ಬರೆಯುತ್ತೇವೆ. ಆದರೆ ಇಡೀ ಜೀವನ ದೇಶದ ಜನತೆಯ ಅಭ್ಯುದಯಕ್ಕಾಗಿ ದುಡಿದ ಡಾ. ಅಬ್ದುಲ್ ಕಲಾಮ್ ಅಕ್ಷರಶಃ ಕೊನೆಯುಸಿರಿನವರೆಗೆ ದೇಶಕಟ್ಟುವ ಕೆಲಸದಲ್ಲಿ ತೊಡಗಿದ್ದರು. ಅವರು ಕುಸಿದುಬಿದ್ದಾಗ ಅವರು ಮಾಡುತ್ತಿದ್ದ ಭಾಷಣ 'ಬದುಕಲು ಯೋಗ್ಯವಾದ ಭೂಗ್ರಹದ ನಿರ್ಮಾಣ' ಎಂಬುದಾಗಿತ್ತು. ಇದು ನಿಜಕ್ಕೂ ಅತ್ಯಂತ ಸಾಂಕೇತಿಕ.

ಮಡಿದವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇವೆ ಎನ್ನುವ ನಾವು ಕಣ್ಣನ್ನು ಮುಚ್ಚಿಕೊಂಡು ಎರಡು ನಿಮಿಷ ಮೌನವನ್ನು ಆಚರಿಸಿ, ಆತ್ಮಕ್ಕೆ ಶಾಂತಿಯನ್ನು ಕೋರುತ್ತೇವೆ. ಕಲಾಮ್‌ರ ಸಂದರ್ಭದಲ್ಲಿ ನಾವು ಹೀಗೆ ಮಾಡಬಾರದು. ಕಣ್ಣನ್ನು ತೆರೆಯಬೇಕು; ಮೌನವನ್ನು ಮುರಿದು ಅವರ ವಿಚಾರಗಳು, ಅವರು ಬದುಕಿದ ಶೈಲಿ, ಕನಸುಗಳು, ನನಸುಗಳ ಕುರಿತು ನಿರಂತರವಾಗಿ ಮಾತಾಡಬೇಕು. ಅವರ ಆತ್ಮ ಎಂದರೆ ಭಾರತವೇ ಆಗಿತ್ತು ಎಂಬುದು ಎಲ್ಲರಿಗೂ ತಿಳಿದಿರುವ ವಿಚಾರ. ಭಾರತದಲ್ಲಿ ಶಾಂತಿ ನೆಲಸಲಿ ಎಂದು ನಾವು ದುಡಿಯುವುದಾದರೆ ಡಾ. ಅವುಲ್ ಪಕೀರ್ ಜೈನುಲಾಬ್ದೀನ್ ಅಬ್ದುಲ್ ಕಲಾಮ್‌ರಿಗೆ ಸಲ್ಲಿಸುವ ಸೂಕ್ತ ಶ್ರದ್ಧಾಂಜಲಿಯಾಗಿದೆ.

'ನಾನು ನಿಧನನಾದಾಗ ಆ ದಿನ ರಜಾ ಘೋಷಿಸಬೇಡಿ. ನೀವು ನಿಜವಾಗಿಯೂ ನನ್ನನ್ನು ಪ್ರೀತಿಸುತ್ತೀರಾದರೆ, ಇನ್ನೊಂದು ಹೆಚ್ಚಿನ ದಿನ ಕೆಲಸ ಮಾಡಿರಿ' ಎಂದಿದ್ದರು ಡಾ. ಅಬ್ದುಲ್ ಕಲಾಂ. ಕೊನೆಯ ಉಸಿರಿನವರೆಗೂ ಅವರು ದೇಶಕ್ಕಾಗಿಯೇ ಕೆಲಸ ಮಾಡಿದರು.

**(ಕೃಪೆ: ಸುಧಾ, ಆಗಸ್ಟ್ 13, 2015)**

# ಭಾರತವನ್ನು ಬೆಳಗಿದ ಕಲಾಂ ಎಂಬ ಚೇತನ

**ಮುಜಫರ್ ಹುಸೇನ್**

**ಜು**ಲೈ 27ರ ಸಂಜೆ ಭಾರತೀಯರ ಪಾಲಿಗೆ ಕಹಿನೆನಪು. ಇಡೀ ದೇಶಕ್ಕೆ ಆಘಾತವನ್ನುಂಟುಮಾಡುವಂಥ ಸುದ್ದಿ ಬರಸಿಡಿಲಿನಂತೆ ಬಂದೆರಗಿತ್ತು- 'ಮಿಸೈಲ್ ಮ್ಯಾನ್' ಖ್ಯಾತಿಯ ಮಾಜಿ ರಾಷ್ಟ್ರಪತಿ ಅಬ್ದುಲ್ ಕಲಾಂ ಇನ್ನಿಲ್ಲ. ಶಿಲ್ಲಾಂಗ್‌ನಲ್ಲಿ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸುತ್ತಲೇ ಕಲಾಂ ಇಹಲೋಕದ ಪಯಣ ಮುಗಿಸಿದ್ದಾರೆ ಎಂಬ ಸುದ್ದಿ ಕೇಳಿದ ಭಾರತೀಯರ ಕಣ್ಣಾಲಿಗಳು ತುಂಬಿ ಬಂದಿದ್ದವು. ಪ್ರತಿಯೊಬ್ಬರಲ್ಲೂ ಕುಟುಂಬ ಸದಸ್ಯನನ್ನು ಕಳೆದುಕೊಂಡ ಸಂಕಟ, ದುಃಖ ಮಡುಗಟ್ಟಿತ್ತು. ಹೌದು, ಕಲಾಂ ಸಾಮಾನ್ಯ ವ್ಯಕ್ತಿಯಲ್ಲ, ಭಾರತದ ಗೌರವ, ಪ್ರತಿಷ್ಠೆಯ ಪ್ರತೀಕವಾಗಿದ್ದವರು. ಭಾರತದ ಕೀರ್ತಿಪತಾಕೆಯನ್ನು ಆಕಾಶದೆತ್ತರಕ್ಕೆ ಕೊಂಡೊಯ್ದ ಮಹಾನ್ ಚೇತನಗಳಲ್ಲಿ ಒಬ್ಬರು. ಆಧುನಿಕ ಯುಗದ ಅತ್ಯಂತ ಪ್ರಬಲ ಅಸ್ತ್ರ ಎಂದೇ ಬಿಂಬಿತವಾಗಿರುವ ಅಣ್ವಸ್ತ್ರದ ಯಶಸ್ವಿ ಪರೀಕ್ಷೆಯ ಮೂಲಕ ವಿಶ್ವಕ್ಕೆ ಭಾರತದ ತಾಕತ್ತನ್ನು ಪ್ರದರ್ಶಿಸಿದ ಮಹಾನ್ ವಿಜ್ಞಾನಿ ಕಲಾಂ. 'ನಾವು ಯಾರ ತಂಟೆಗೂ ಹೋಗುವುದಿಲ್ಲ. ಆದರೆ, ನಮ್ಮ ತಂಟೆಗೆ ಬಂದವರನ್ನು ಮಾತ್ರ ಸುಮ್ಮನೆ ಬಿಡುವುದಿಲ್ಲ' ಎಂಬ ಕಠಿಣ ಸಂದೇಶವನ್ನು ಅಣ್ವಸ್ತ್ರ ಪರೀಕ್ಷೆಯ ಮೂಲಕ ಭಾರತ ಶತ್ರುರಾಷ್ಟ್ರಗಳಿಗೆ ಸಾರಿತ್ತು. ಭಾರತಕ್ಕೆ ಇಂಥದೊಂದು ಮನೋಸ್ಥೈರ್ಯ ತಂದುಕೊಡುವಲ್ಲಿ ಕಲಾಂ ಪ್ರಧಾನ ಭೂಮಿಕೆಯಲ್ಲಿದ್ದರು ಎಂದರೆ ಅತಿಶಯೋಕ್ತಿಯಲ್ಲ.

'ನಾವು ಸುಖಾಸುಮ್ಮನೆ ಇನ್ನೊಬ್ಬರ ಮೇಲೆ ದಾಳಿ ಮಾಡುವ ಉದ್ದೇಶದಿಂದ ಈ ಅಣ್ವಸ್ತ್ರ ಬಳಸುವುದಿಲ್ಲ. ಆದರೆ, ನಮ್ಮ ವಿರುದ್ಧ ಯಾರಾದರೂ ಷಡ್ಯಂತ್ರ ರಚಿಸಿದರೆ, ದಾಳಿಗೆ ಮುಂದಾದರೆ ನಾವು ಈ ಅಸ್ತ್ರದ ಮೂಲಕ ತಕ್ಕ ಪಾಠ ಕಲಿಸಲು ಹಿಂಜರಿಯುವುದಿಲ್ಲ' ಎಂದು ಪೋಖ್ರಾನ್ ಅಣ್ವಸ್ತ್ರ ಪರೀಕ್ಷೆ ಸಂದರ್ಭದಲ್ಲಿ ಪ್ರಧಾನಿಯಾಗಿದ್ದ ಅಟಲ್ ಬಿಹಾರಿ ವಾಜಪೇಯಿ ನೀಡಿದ್ದ ಸಂದೇಶ ಭಾರತದ ಉದ್ದೇಶವನ್ನು ಸ್ಪಷ್ಟಪಡಿಸಿತ್ತು. ಭಾರತದೊಂದಿಗೆ ಪದೇಪದೆ ಕಾಲು ಕೆರೆದು ಜಗಳಕ್ಕೆ ಬರುವ ಪಾಕಿಸ್ತಾನಕ್ಕೆ ಇದೊಂದು ಎಚ್ಚರಿಕೆಯ ಸಂದೇಶವೂ ಆಗಿತ್ತು. ಇಂಥ ಸಮಯದಲ್ಲಿ 'ನಮ್ಮಲ್ಲಿಯೂ ಅಬ್ದುಲ್ ಕಲಾಂ ಅವರಂಥ ವಿಜ್ಞಾನಿ ಇದ್ದಿದ್ದರೆ...'



ಎಂಬ ಭಾವನೆ ಪಾಕಿಸ್ತಾನಿಯರಲ್ಲಿ ಮೂಡಿದ್ದರೆ ಅಚ್ಚರಿಯೇನಲ್ಲ.

ಭಾರತದ ಹಿಂದಿನ ನಾಯಕರು ದೇಶವನ್ನು ಪರಕೀಯರ ಸಂಕೋಲೆಯಿಂದ ಬಿಡಿಸಿದರು. ಆದರೆ, ದೇಶದ ಸುರಕ್ಷತೆಯ ಕಲ್ಪನೆ ಆಗ ಜನ್ಮತಾಳಿರಲಿಲ್ಲ. ಆ ಕಲ್ಪನೆ ರೂಪುಗೊಂಡಿದ್ದು, ಸಾಕಾರಗೊಂಡಿದ್ದು ವಾಜಪೇಯಿ ಅವರ ಅಧಿಕಾರಾವಧಿಯಲ್ಲಿ. ಭಾರತದ ಆತ್ಮವಿಶ್ವಾಸವನ್ನು ಹೆಚ್ಚಿಸಿದ ಕೀರ್ತಿ 21ನೇ ಶತಮಾನದ ವಿಜ್ಞಾನಿಗಳು ಹಾಗೂ ನಾಯಕರಿಗೆ ಸಲ್ಲುತ್ತದೆ. ವೈಜ್ಞಾನಿಕ ರಂಗಕ್ಕೆ ಮಹತ್ವದ ಕೊಡುಗೆಗಳನ್ನು ನೀಡಿದ ಅಬ್ದುಲ್ ಕಲಾಂ ಅವರಿಗೆ ನೊಬೆಲ್ ಪುರಸ್ಕಾರ ಪ್ರಾಪ್ತವಾಗಿಲ್ಲ ಎಂಬ ಕೊರಗು ಭಾರತೀಯರನ್ನು ಸದಾ ಕಾಡುತ್ತದೆ.

ಅಣ್ವಸ್ತ್ರ ಪರೀಕ್ಷೆಯಲ್ಲಿ ಮುಂಚೂಣಿ ಪಾತ್ರ ವಹಿಸಿದ್ದು ಮಾತ್ರವಲ್ಲ ವೈಜ್ಞಾನಿಕ ರಂಗದ ಇತರ ಕ್ಷೇತ್ರಗಳಲ್ಲಿ ಕೂಡ ಭಾರತದ ಪ್ರಾಬಲ್ಯ ಹೆಚ್ಚಿಸುವ ಮೂಲಕ ಗೌರವಾದರಗಳಿಗೆ ಪಾತ್ರವಾಗುವಂತೆ ಮಾಡಿದವರು ಕಲಾಂ. ಇಂಥ ಅಪ್ರತಿಮ ಚೇತನ ರಾಮೇಶ್ವರದಲ್ಲಿ ಚಿರನಿದ್ರೆಗೆ ಜಾರಿದ್ದಾರೆ. ಹುಟ್ಟೂರು ರಾಮೇಶ್ವರಕ್ಕೆ ಆಗಾಗ ಭೇಟಿ ನೀಡುತ್ತಿದ್ದ ಕಲಾಂ, ಈ ಬಾರಿ ಮಾತ್ರ ಶಾಶ್ವತವಾಗಿ ಅಲ್ಲೇ ನೆಲೆ ನಿಂತುಬಿಟ್ಟಿದ್ದಾರೆ.

ಅಬ್ದುಲ್ ಕಲಾಂಗಿಂತ ಮುನ್ನ ಭಾರತದ ರಾಜಕೀಯ ಹಾಗೂ ಸಾಹಿತ್ಯ ಕ್ಷೇತ್ರದಲ್ಲಿ ಅಜರಾಮರರಾದ ಕಲಾಂ ಎಂಬ ಹೆಸರಿನಿಂದಲೇ ಜನಪ್ರಿಯರಾದ ಇನ್ನೊಬ್ಬ ಮಹಾನ್ ವ್ಯಕ್ತಿ ಇದ್ದಾರೆ. ಅವರೇ ಅಬುಲ್ ಕಲಾಂ. ಇವರ ಮೂಲನಾಮಧೇಯ ಮೊಯ್ದೀನ್. ಇವರ ಅಪಾರ ಪಾಂಡಿತ್ಯವನ್ನು ಗಮನಿಸಿ ಅಬುಲ್ ಕಲಾಂ ಎಂದು ಕರೆಯಲಾಯಿತು. ಅರಬ್ಬಿ ಭಾಷೆಯಲ್ಲಿ 'ಅಬು' ಎಂದರೆ ತಂದೆ. ಅಂದರೆ ಸಾಹಿತ್ಯಕ್ಷೇತ್ರದ ಪಿತಾಮಹ ಎಂಬ ಅರ್ಥದಲ್ಲಿ ಅವರಿಗೆ ಈ ಹೆಸರು ಬಂತು. ಪುಸ್ತಕದ ಜ್ಞಾನದಿಂದ ಮಾತ್ರ ಅಬುಲ್ ಕಲಾಂ ಮಹಾನ್ ವ್ಯಕ್ತಿಯಾಗಿಲ್ಲ. ಅವರ ನರನಾಡಿಗಳಲ್ಲಿ ಭಾರತಮಾತೆಯ ಬಗ್ಗೆ ಪ್ರೀತಿ, ಅಭಿಮಾನವಿತ್ತು. ಅವರು ರಾಷ್ಟ್ರೀಯತೆಯ ಪ್ರತಿರೂಪವಾಗಿದ್ದರು. ಅವರ ಈ ವಿದ್ವತ್ತಿಗೆ ಗೌರವ ಸೂಚಿಸುವ ಉದ್ದೇಶದಿಂದಲೇ ಅಬುಲ್ ಕಲಾಂ ಎಂಬ ಪದವಿ ಪ್ರದಾನ ಮಾಡಲಾಗಿತ್ತು. ಪ್ರಪಂಚದಲ್ಲಿ ಅಸಂಖ್ಯಾತ ವಿದ್ವಾಂಸರಿರಬಹುದು ಆದರೆ, ಎಲ್ಲರಿಗೂ 'ಸಾಹಿತ್ಯದ ಪಿತಾಮಹ' ಎಂಬ ಬಿರುದು ಒಲಿಯುವುದಿಲ್ಲ. ಆದರೆ, ಭಾರತದ ಜನತೆ ಆ ಗೌರವವನ್ನು ಅವರಿಗೆ ನೀಡಿದರು. ಅಂದು ಅಬುಲ್ ಕಲಾಂ, ಇಂದು ಅಬ್ದುಲ್ ಕಲಾಂ. ಈ ಇಬ್ಬರೂ ನಾಯಕರ ಬಗ್ಗೆ ಭಾರತೀಯರು ವಿಶೇಷ ಗೌರವಾದರ ಹೊಂದಿದ್ದಾರೆ. ಆ ಮೂಲಕ ಭಾರತದ ಜನತೆ ವಿಶ್ವಕ್ಕೆ ನೀಡಿರುವ ಸಂದೇಶ ಇಷ್ಟೆ- 'ಸರಸ್ವತಿಯ ಸೇವೆ ಮಾಡುವ ವ್ಯಕ್ತಿ ಅಬುಲ್ ಕಲಾಂನೂ ಆಗಬಲ್ಲ, ಅಬ್ದುಲ್ ಕಲಾಂನೂ ಆಗಬಲ್ಲ'. ಸದಾ ಜನರ ಗೌರವಾದರಗಳಿಗೆ ಪಾತ್ರರಾಗುವವರು ದೇಶವನ್ನು ಒಡೆಯುವ ವ್ಯಕ್ತಿಗಳಲ್ಲ, ಬದಲಿಗೆ ದೇಶವನ್ನು ಜೋಡಿಸುವ ಮಹಾನ್ ಚೇತನಗಳು.

ಇಂಥವರನ್ನು ಗೌರವಿಸುವ ಪರಂಪರೆ ಭಾರತದಲ್ಲಿ ಅನಾದಿಕಾಲದಿಂದಲೂ ನಡೆದುಬಂದಿದೆ. ಮುಂದೆಯೂ ನಡೆಯುತ್ತದೆ. 'ಕಲಾಂ' ಎಂಬ ಪದ ಸಾಹಿತ್ಯ ಹಾಗೂ ವಿಜ್ಞಾನ ಎರಡರ ಪ್ರತೀಕವಾಗಿ ಬೆಳೆದು ನಿಂತಿದೆ. ಈ ಇಬ್ಬರೂ ತಮ್ಮದೇ ವಿಧಾನದಲ್ಲಿ ದೇಶಸೇವೆ ಮಾಡಿದರು. ಕಲೆ ಹಾಗೂ ವಿಜ್ಞಾನ ಕ್ಷೇತ್ರದ ಧ್ರುವತಾರೆಗಳಾಗಿ ಮಿನುಗಿದರು.

ಭಾರತದ ಸುರಕ್ಷತೆಯ ವಿಚಾರ ಬಂದಾಗ ಇಲ್ಲಿನ ಅಣುಅಣುವಿನಲ್ಲಿ ವೈಜ್ಞಾನಿಕ ತಾಕತ್ತನ್ನು ತುಂಬಿದವರು ಅಬ್ದುಲ್ ಕಲಾಂ. ಭಾರತದ ಮಣ್ಣಿನಲ್ಲಿ ಯುರೇನಿಯಂ ಇದೆ. ಆದರೆ, ಅದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಅಣುಬಾಂಬ್ ಸಿದ್ಧಪಡಿಸಲು ಸಾಧ್ಯವಿಲ್ಲ. ಇದನ್ನು ಅರಿತ ಕಲಾಂ, ಥೋರಿಯಂನಿಂದ ಕೂಡ ಅಣುಬಾಂಬ್ ಮಾಡಲು ಸಾಧ್ಯವಿದೆ ಎಂಬುದನ್ನು ಪತ್ತೆಹಚ್ಚಿದರು. ಅವರ ಈ ಶೋಧವನ್ನು ಇಡೀ ವಿಶ್ವ ಬೆರಗುಗಣ್ಣಿನಿಂದ ನೋಡಿತ್ತು. ಆದರೆ, ಈಗ ಜಗತ್ತಿನ ವಿವಿಧ ವಿಜ್ಞಾನಿಗಳು ಇದು ತಮ್ಮ ಶೋಧ ಎಂದು ಪುಕಾರು ಎಬ್ಬಿಸುತ್ತಿದ್ದಾರೆ. ದಕ್ಷಿಣ ಭಾರತದಲ್ಲಿರುವ ರಾಮಸೇತು ಥೋರಿಯಂನಿಂದ ನಿರ್ಮಾಣಗೊಂಡಿದೆ ಎಂಬ ರಹಸ್ಯ ರಾಮೇಶ್ವರಂನ ಈ ಹುಡುಗನಿಗೆ ತಿಳಿಯದ್ದೇನಲ್ಲ. ಇದೇ ಕಾರಣಕ್ಕೆ ಈ ಹಿಂದಿನ ಸರ್ಕಾರ ರಾಮಸೇತುವನ್ನು ಒಡೆಯುವ ಕಾರ್ಯಕ್ಕೆ ಏಕಮುಖ ನಿರ್ಣಯ ಕೈಗೊಂಡಾಗ, ಹಾಗೆ ಮಾಡದೆ ಥೋರಿಯಂ ಉಳಿಸಿಕೊಳ್ಳುವಂತೆ ಕಲಾಂ ಎಚ್ಚರಿಸಿದ್ದರು. ಪರಿಣಾಮ ರಾಮಸೇತುವನ್ನು ಧ್ವಂಸ ಮಾಡುವ ನಿರ್ಣಯಕ್ಕೆ ಕೈಹಾಕುವ ಸಾಹಸಕ್ಕೆ ಇನ್ನುಮುಂದೆ ಯಾವುದೇ ಸರ್ಕಾರ ಮುಂದಾಗದು. ರಾಮಸೇತುವೆ ಹಿಂದಿನ ವೈಜ್ಞಾನಿಕ ಕಾರಣಗಳನ್ನು ಪತ್ತೆಹಚ್ಚಿದ್ದಷ್ಟೇ ಅಲ್ಲ, ಅಲ್ಲಿನ ಸಮುದ್ರದ ಮರಳಿನಲ್ಲಿ ಕೂಡ ಥೋರಿಯಂ ಇದೆ ಎಂದು ಕಲಾಂ ಸಾರಿದ್ದರು. ಈ ವಿಚಾರ ಅರಿತಿದ್ದ ಅಮೆರಿಕ, ಹಡಗುಗಳ ಮೂಲಕ ಇಲ್ಲಿನ ಮರಳನ್ನು ಕದ್ದು ಸಾಗಿಸುತ್ತಿತ್ತು. ಕಲಾಂ ಹೇಳಿಕೆ ಮೂಲಕ ಈ ವಿಚಾರ ಸರ್ಕಾರದ ಗಮನಕ್ಕೆ ಬಂದಾಗ ಕಠಿಣ ಕ್ರಮ ಕೈಗೊಂಡಿತು.

ಕಲಾಂ ಸಂಪೂರ್ಣ ಶಾಕಾಹಾರಿಯಾಗಿದ್ದರು ಎನ್ನುವುದು ಜಗತ್ತಿಗೇ ತಿಳಿದಿದೆ. ಎರಡು ವರ್ಷದ ಹಿಂದೆ ಕಾಶಿ ಹಿಂದು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಹಾಗೂ ಹಿಂದುತ್ವಕ್ಕಾಗಿ ಸಮರ್ಪಿಸಿಕೊಂಡ ಜನಪ್ರಿಯ ಉದ್ಯಮಿ ಆನಂದ್ ಶಂಕರ್ ಪಂಡಿತ ಮುಂಬೈ ಬಾಂದ್ರಾದ ನ್ಯಾಷನಲ್ ಕಾಲೇಜಿನಲ್ಲಿ ಆಯೋಜಿಸಿದ್ದ ಮಾಳವೀಯ ಶತಾಬ್ದಿ ಸಮಾರಂಭಕ್ಕೆ ಕಲಾಂ ಅವರನ್ನು ಆಹ್ವಾನಿಸಲಾಗಿತ್ತು. ನಾನು ಕೂಡ ಇದರಲ್ಲಿ ಭಾಗವಹಿಸಿದ್ದೆ. ಕಾರ್ಯಕ್ರಮದ ಬಳಿಕ ಕಲಾಂ ಸಾರ್ವಜನಿಕರೊಂದಿಗೆ ಮಾತನಾಡುತ್ತಿದ್ದ ಸಮಯದಲ್ಲಿ ನಾನು ಶಾಕಾಹಾರಕ್ಕೆ ಸಂಬಂಧಿಸಿ ರಚಿಸಿರುವ ಕೃತಿಯನ್ನು ಅವರಿಗೆ ಉಡುಗೊರೆಯಾಗಿ ನೀಡಿದೆ. ಆ ಕೃತಿಯನ್ನು ನೋಡಿ ಅಚ್ಚರಿ ವ್ಯಕ್ತಪಡಿಸಿದ ಕಲಾಂ, ಅದರ ಕೆಲವು ಪುಟಗಳನ್ನು ಅಲ್ಲೇ ತಿರುವಿಹಾಕಿದರು. ಅದರಲ್ಲಿ ಶಾಕಾಹಾರವನ್ನು



ಸಮರ್ಥಿಸುವ ಪವಿತ್ರ ಕುರಾನ್‌ನ ಕೆಲವು ಸಾಲುಗಳನ್ನು ಉಲ್ಲೇಖಿಸಲಾಗಿತ್ತು. ನನ್ನ ಕಡೆ ನೋಡಿ ನಗುತ್ತ ಆ ಸಾಲುಗಳನ್ನು ಕಲಾಂ ಓದಿ ಹೇಳಿದರು. ಬಳಿಕ ನನ್ನ ಬೆನ್ನು ತಟ್ಟುತ್ತ ಹಸ್ತಾಕ್ಷರದಲ್ಲಿ 'ವಂಡರ್‌ಫುಲ್' ಎಂದು ಬರೆದರು. ಬಳಿಕ ಒನ್ ಮೋರ್ ಎಂದರು ಕಲಾಂಜೀ. ನನ್ನ ಪತ್ನಿ ನಫೀಸಾ ಹಿಂದಿ ಆವೃತ್ತಿಯ ಕೃತಿಯನ್ನು ನೀಡಿದಳು. ಆ ಕ್ಷಣ ಸರಸ್ವತಿ ನನ್ನ ಮೇಲೆ ಸಂಪೂರ್ಣ ಕೃಪೆ ತೋರಿದ ಅನುಭವವಾಯಿತು. ವಾಜಪೇಯಿ ಸರ್ಕಾರದ ಅವಧಿಯಲ್ಲಿ ನಫೀಸಾ ದೆಹಲಿ ಮಹಿಳಾ ಆಯೋಗದ ಸದಸ್ಯೆಯಾಗಿದ್ದಳು. ಆಗ ರಾಷ್ಟ್ರಪತಿ ಭವನದಲ್ಲಿ ಮಹಿಳೆಯರ ವಾರ್ಷಿಕ ಸಮ್ಮೇಳನದಲ್ಲಿ ಭಾಗವಹಿಸಿದ್ದಳು. ಆ ಸಂದರ್ಭದಲ್ಲಿ ಕಲಾಂ ಅವರೊಂದಿಗೆ ತೆಗೆದಿರುವ ಫೋಟೋವನ್ನು ನಮ್ಮ ಮನೆಯ ಪ್ರವೇಶದ್ವಾರದಲ್ಲಿ ತೂಗುಹಾಕಲಾಗಿದೆ. ಪ್ರತಿದಿನ ಅವರ ಮುಖ ನೋಡುವ ಭಾಗ್ಯ ನನ್ನದಾಗಿದೆ.

ಕಲಾಂ ರಾಷ್ಟ್ರಪತಿಯಾದ ಬಳಿಕ ಕೂಡ ದೆಹಲಿಯಲ್ಲಿ ಹಿಂದೆ ಅವರು ಇಡ್ಲಿ ಸಾಂಬಾರ್ ತಿನ್ನಲು ಹೋಗುತ್ತಿದ್ದ ಪುಟ್ಟ ಹೋಟೆಲನ್ನು ಮರೆತಿರಲಿಲ್ಲ. ಅಷ್ಟೊಂದು ಸರಳ ವ್ಯಕ್ತಿತ್ವ ಅವರದ್ದಾಗಿತ್ತು. ಪಾಕಿಸ್ತಾನದ ಆಗಿನ ಅಧ್ಯಕ್ಷ ಪರ್ವೇಜ್ ಮುಷರಫ್ ಭಾರತಕ್ಕೆ ಭೇಟಿ ನೀಡಿದಾಗ ಕಲಾಂರನ್ನು ಭೇಟಿಯಾಗಲು ರಾಷ್ಟ್ರಪತಿ ಭವನಕ್ಕೆ ತೆರಳಿದ್ದರು. ಕಲಾಂ ಜತೆ ಅವರ ಸಂಭಾಷಣೆಗೆ 30 ನಿಮಿಷ ನಿಗದಿಪಡಿಸಲಾಗಿತ್ತು. ಮಾತುಕತೆ ಆರಂಭವಾಗುತ್ತಿದ್ದಂತೆ ಕಲಾಂ ಕೇಳಿದ ಮೊದಲ ಪ್ರಶ್ನೆ 'ಪಾಕಿಸ್ತಾನ ಹಾಗೂ ಭಾರತ ಹಳ್ಳಿಗಳ ಅಭಿವೃದ್ಧಿಗೆ ಯಾವ ರೀತಿಯ ಯೋಜನೆ ರೂಪಿಸಬಹುದು?' ಎಂಬುದಾಗಿತ್ತು. ಈ ಕುರಿತು ಕಲಾಂ ವೈಜ್ಞಾನಿಕವಾಗಿ ತಮ್ಮ ಚಿಂತನೆಗಳನ್ನು ಬಿಚ್ಚಿಡುತ್ತಿದ್ದಂತೆ ಮುಷರಫ್ ಆಶ್ಚರ್ಯಚಕಿತರಾದರು. ಕಲಾಂ ಮಾತು ಮುಗಿಸುವಾಗ 27 ನಿಮಿಷಗಳು ಕಳೆದುಹೋಗಿದ್ದವು. ಭಾರತ ಮತ್ತು ಪಾಕಿಸ್ತಾನದ ರಾಜತಾಂತ್ರಿಕ ವಿಚಾರಗಳ ಕುರಿತು ಮಾತನಾಡಲು ಬಂದಿದ್ದ ಮುಷರಫ್ ಒಂದೂ ಮಾತನಾಡದೆ ರಾಷ್ಟ್ರಪತಿ ಭವನದಿಂದ ನಿರ್ಗಮಿಸಿದ್ದರು. ಮುಷರಫ್ ಇಲ್ಲಸಲ್ಲದ ವಿಚಾರ ಎತ್ತಿ ರಾಷ್ಟ್ರಪತಿಗಳಿಗೆ ಇರಿಸುಮುರಿಸು ಉಂಟುಮಾಡಲಿದ್ದಾರೆ ಎಂದೇ ಭಾವಿಸಿದ್ದ ವಿದೇಶಾಂಗ ಇಲಾಖೆ ಅಧಿಕಾರಿಗಳಿಗೆ ಅಚ್ಚರಿ! ಕಲಾಂ ಜಾಣ್ಮೆಗೆ ಎಲ್ಲರೂ ಅಂದು ತಲೆದೂಗಿದ್ದರು. ಕಲಾಂ ಇಂದು ನಮ್ಮೊಂದಿಗೆ ಶಾರೀರಿಕವಾಗಿ ಇಲ್ಲದೆ ಇರಬಹುದು. ಆದರೆ, ಅವರು ಬಿತ್ತಿದ ಕನಸುಗಳು ಸದಾ ಹಸಿರು! ಭಾರತದ ಮುನ್ನಡೆಗೆ ಅವು ಸ್ಫೂರ್ತಿಯ ಸೆಲೆ.

**(ಕೃಪೆ: ವಿಜಯವಾಣಿ ದಿನಪತ್ರಿಕೆ, ಅಗಸ್ಟ್ 4, 2015**

(ಲೇಖಕರು: ರಾಷ್ಟ್ರೀಯ ಉರ್ದು ವಿಕಾಸ ಪರಿಷದ್‌ನ ಉಪಾಧ್ಯಕ್ಷರು ಮಧ್ಯಪ್ರಾಚ್ಯ, ಪಾಕಿಸ್ತಾನ ವಿದ್ಯಮಾನಗಳ ನುರಿತ ವಿಶ್ಲೇಷಕರು, ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಖ್ಯಾತ ಬರಹಗಾರರು)

# ಕಲಾಂ ಒಡನಾಟ, ಒಳನೋಟ ಬಿಚ್ಚಿಟ್ಟ ಪ್ರಣಬ್

**ಡಿ. ಉಮಾಪತಿ**

"**ಕ**ಲಾಂ ಕವಿತೆ ಬರೆದು ನನ್ನ ಕೈಗಿರಿಸುತ್ತಿದ್ದರು... ಆದರೆ ವಾಚಿಸುತ್ತಿರಲಿಲ್ಲ. ಯುದ್ಧದಲ್ಲಿ ಮಡಿದ ಯೋಧರ ಸ್ಮಾರಕ 'ಅಮರ್ ಜವಾನ್ ಜ್ಯೋತಿ'ಗೆ ನಾವು ಒಟ್ಟಿಗೆ ಹೋಗಿ ಗೌರವ ಸಲ್ಲಿಸುತ್ತಿದ್ದೆವು. ಅಂತಹ ಸಂದರ್ಭದಲ್ಲೆಲ್ಲ ಅವರು ಒಂದು ಕವಿತೆ ಬರೆದು ತರುತ್ತಿದ್ದರು. ವಾಚಿಸುತ್ತಿರಲಿಲ್ಲ. ಸದ್ದಿಲ್ಲದೆ ನನ್ನ ಕೈಗೆ ಇರಿಸುತ್ತಿದ್ದರು. ಹೀಗೆ ಅವರು ನನಗೆ ಮೂರು ಕವಿತೆಗಳನ್ನು ಕೊಟ್ಟಿರಬೇಕು...."

ಮಂಗಳವಾರ ಮುಂಜಾನೆ ಒಂಬತ್ತರ ಹೊತ್ತು. ರಾಷ್ಟ್ರಪತಿ ಪ್ರಣಬ್ ಮುಖರ್ಜಿ ಮತ್ತು ಅವರ ಪ್ರವಾಸ ಪರಿವಾರವನ್ನು ಹೊತ್ತ ಭಾರತೀಯ ವಾಯುಸೇನೆಯ ವಿಮಾನ ದಿಲ್ಲಿಯತ್ತ ಹಾರುತಲಿತ್ತು. ಹಿಂದಿನ ರಾತ್ರಿ ಬೆಂಗಳೂರಿನ ರಾಜಭವನದಲ್ಲಿ ತಂಗಿದ್ದರು ಮುಖರ್ಜಿ. ಕರ್ನಾಟಕದ ಎರಡನೆಯ ದಿನದ ಪ್ರವಾಸವನ್ನು ರದ್ದು ಮಾಡಿ ವಾಪಸು ಹೊರಟಿದ್ದರು. ಅವರ ವಿಮಾನ ಯಲಹಂಕದ ವಾಯುಸೇನಾ ನೆಲೆಯಿಂದ ಆಗಸಕ್ಕೆ ಚಿಮ್ಮಿ ಅರ್ಧ ಮುಕ್ಕಾಲು ಗಂಟೆ ಸರಿದಿರಬೇಕು. ರಾಷ್ಟ್ರಪತಿಯವರ ಪತ್ರಿಕಾ ಕಾರ್ಯದರ್ಶಿ ವೇಣು ರಾಜಾಮೋಣಿ ಪತ್ರಕರ್ತರು ಕುಳಿತಿದ್ದೆಡೆ ಬಂದು ರಾಷ್ಟ್ರಪತಿ ಮಾತಾಡ್ತಾರೆ ಬನ್ನಿ ಎಂದು ಕರೆದರು.

ಹತ್ತು ಹದಿನೈದು ಹೆಜ್ಜೆ ವಿಮಾನದ ಮುಂಭಾಗಕ್ಕೆ ನಡೆದರೆ ಎದುರು ಬದಿರು ಎರಡೆರಡು ಆರಾಮಾಸನಗಳು ಮಧ್ಯದಲ್ಲೊಂದು ದೊಡ್ಡ ಟೀಪಾಯ್ ಇರುವ ಕೊಠಡಿಯ ಖಾಸಗಿತನದಲ್ಲಿ ಒರಗಿದ್ದವರು ರಾಷ್ಟ್ರಪತಿ. ಹಿಂದಿನ ರಾತ್ರಿ ಬೆಂಗಳೂರಿನ ರಾಜಭವನದಲ್ಲಿ ವ್ಯಗ್ರರಾಗಿ ಕಾಣಿಸಿದ್ದ ಅವರ ಸೌಮ್ಯರೂಪ ಇದೀಗ ಎದುರಾಗಿತ್ತು. ಚಾನೆಲ್ಲೊಂದರ ಕ್ಯಾಮೆರಾ ಸಿಬ್ಬಂದಿಯ ಮೇಲೆ ಸಿಡಿಮಿಡಿ ಮಾಡಿದ್ದರು. ಸಂತಾಪ ಸಂದೇಶವನ್ನು ಕ್ಯಾಮೆರಾದಲ್ಲಿ ಹಿಡಿದಿಟ್ಟ ಆ ಸಿಬ್ಬಂದಿ ಮತ್ತೊಂದು ಟೇಕ್ ಬೇಕೆಂಬ ಅಹವಾಲು ಇಟ್ಟಿದ್ದರು. "ಇದೊಂದು ಪವಿತ್ರ ಸಂದರ್ಭ. ನನ್ನನ್ನು ಮಧ್ಯೆ ಡಿಸ್ಟರ್ಬ್ ಮಾಡಬೇಡಿ," ಎಂದು ಸಿಡುಕಿನಿಂದಲೇ ಸಂತಾಪ ಸೂಚನೆ ಸಂದೇಶ ಆರಂಭಿಸಿದ್ದ ಅವರು ರೀಟೇಕ್ ಅಹವಾಲಿಗೆ ಇನ್ನಷ್ಟು ಸಿಡಿದಿದ್ದರು. "ಎಕ್ಸ್ಟ್ರೀಮ್ಲೀ ಸಾರಿ.. ನಿಮ್ಮ ಕಸುಬು ನಿಮಗೆ ಗೊತ್ತಿಲ್ಲದಿದ್ದರೆ ಅದರ ಸಾಧಕ ಬಾಧಕ ನಿಮ್ಮದೇ" ಎಂದು ಕೆಕ್ಕರಿಸಿ ಎದ್ದು



ನಡೆದುಬಿಟ್ಟಿದ್ದರು.

ಹೆಚ್ಚೂ ಕಡಿಮೆ ಒಂದೇ ಓರಗೆಯಾದರೂ ಕಲಾಂಗಿಂತ ನಾಲ್ಕು ತಿಂಗಳು ಚಿಕ್ಕವರು ಪ್ರಣಬ್. ಇಬ್ಬರ ನಡುವಣ ಸ್ನೇಹ ಸಂಬಂಧ ಇತ್ತೀಚಿನ ವರ್ಷಗಳಲ್ಲಿ ಗಾಢಗೊಂಡಿತ್ತು. ಸದ್ದು ಮಾಡದೆ ಸುಳಿವು ನೀಡದೆ ಕಲಾಂ ಎದ್ದು ಹೊರಟ ಬಗೆ ಪ್ರಣಬ್ ಅವರನ್ನು ಎಲ್ಲಿಯೋ ಆಳದಲ್ಲಿ ಬೇರೊಂದು ಬಗೆಯಲ್ಲಿ ಭಯವುಂಟುಮಾಡಿರಲೂ ಸಾಕು.

ಆದರೆ ರಾತ್ರಿ ಕಳೆದು ಬೆಳಕು ಹರಿದ ನಂತರ ಪ್ರಣಬ್ ಕದಡಿದ ಮನ ಮತ್ತೆ ತಿಳಿಯಾಗಿತ್ತು. ವಿಮಾನದ ಅವರ ಪುಟ್ಟ ಕೊಠಡಿಯಲ್ಲಿ ಕ್ಯಾಮೆರಾ ನಿಲ್ಲಿಸತೊಡಗಿದ ಅದೇ ಸಿಬ್ಬಂದಿಗೆ ಈ ಬಾರಿ ಪ್ರೀತಿಯಿಂದ ಹೇಳಿದರು. "ಎಲ್ಲ ಸರಿಯಾಗಿ ಹೊಂದಿಸಿಕೊಂಡು ಮುಗಿದ ನಂತರ ಹೇಳಿರಿ" ಎಂದು ಕಾದು ಕುಳಿತರು. ಕಿಟಕಿಯಿಂದ ನುಗ್ಗುತ್ತಿದ್ದ ಸ್ವಚ್ಛ ಪ್ರಖರ ಸೂರ್ಯ ರಶ್ಮಿಗಳು ಮುಖದ ಮೇಲೆ ಕುಕ್ಕುತ್ತಿವೆ ಸಾರ್ ಎಂಬ ವಿನಂತಿಯನ್ನು ಆಲಿಸಿ ಪರದೆ ಸರಿಸಲು ತಾವೇ ಮುಂದಾದರು. ಕಡೆಗೂ ಸುತ್ತಮುತ್ತ ನಿಂತು ಕುಳಿತು ಮೈಯೆಲ್ಲ ಕಿವಿಯಾದ ಸುದ್ದಿಗಾರರು. ಭೋರಿಡುವ ವಿಮಾನದ ಸದ್ದಿನ ನಡುವೆ ಕಲಾಂ ಕುರಿತು ಅವರು ಆಡಿದ ನಾಲ್ಕು ಮಾತುಗಳು ಆತ್ಮೀಯ ನಿವೇದನೆಯಂತಿದ್ದವು.

He died as he lived.....while addressing an intellectual gathering.. (ಅವರು ಸಾವನ್ನು ಬರಮಾಡಿಕೊಂಡದ್ದೂ ಥೇಟು ಅವರು ಬದುಕಿದ ಬಗೆಯಲ್ಲಿಯೇ...) ನನಗೂ ಅವರಿಗೂ ವಯಸ್ಸಿನಲ್ಲಿ ನಾಲ್ಕು ತಿಂಗಳ ಅಂತರ. ಅವರೊಬ್ಬ ದಂತಕತೆಯಾಗಿದ್ದವರು. ಅವರ ನನ್ನ ಮೊದಲ ಭೇಟಿ-ಸಂವಾದ ವಾಜಪೇಯಿ ಅವರ ಹಯಾಮಿನಲ್ಲಿ ಪೋಖರಣ್ ಅಣುಶಕ್ತಿ ಪರೀಕ್ಷೆ ನಡೆದಾಗ. ಆಗ ಕಲಾಂ ಅಂದಿನ ರಕ್ಷಣಾ ಸಚಿವರ ವೈಜ್ಞಾನಿಕ ಸಲಹೆಗಾರರು. ಅಣುಸ್ಫೋಟದ ಹಿನ್ನೆಲೆಯಲ್ಲಿ ಪ್ರತಿಪಕ್ಷ ಕಾಂಗ್ರೆಸ್ ಪಕ್ಷದ ನಾಯಕರನ್ನು ಆಹ್ವಾನಿಸಿದ್ದರು ಪ್ರಧಾನಿ ವಾಜಪೇಯಿ. ನಾನು, ಸೋನಿಯಾಜಿ, ಡಾ. ಮನಮೋಹನ್ ಸಿಂಗ್ ಮುಂತಾದವರಿದ್ದೆವು. ಪ್ರಧಾನಿ ವಾಜಪೇಯಿ ಸ್ಫೋಟದ ಕುರಿತು ವಿವರಣೆ ನೀಡಿದವರು ಡಾ. ಕಲಾಂ. ಅತ್ಯಂತ ಪ್ರಭಾವೀ ಮಂಡನೆಯದು.

1977ರಲ್ಲಿ ನೀಲಂ ಸಂಜೀವರೆಡ್ಡಿ ಅವರ ನಂತರ ಇಂದಿನ ತನಕ ಅವಿರೋಧವಾಗಿ ಆಯ್ಕೆಯಾದ ಏಕೈಕ ರಾಷ್ಟ್ರಪತಿ ಡಾ. ಕಲಾಂ. ನಂತರ ನಾನು ಯುಪಿಎ-1ರಲ್ಲಿ ರಕ್ಷಣಾ ಸಚಿವನಾಗಿದ್ದೆ. ಆಗ ರಾಷ್ಟ್ರಪತಿ ಕಲಾಂ ಅವರು ದೇಶದ ಮೂರೂ ಸೇನಾಪಡೆಗಳ ಪರಮೋಚ್ಚ ದಂಡನಾಯಕರು. ಹೀಗಾಗಿ ನನ್ನ ಅವರ ಸಂಬಂಧ ಹೊಸ ಆಳಗಳಿಗೆ ಇಳಿಯುತ್ತ ನಡೆಯಿತು. ಬ್ರಹ್ಮೋ ಕ್ಷಿಪಣಿಯಲ್ಲಿ ಅವರಿಗೆ ಅಪರಿಮಿತ ಆಸಕ್ತಿ. ಅವರೇ ಈ ಕ್ಷಿಪಣಿಯ ಮೂಲಶಿಲ್ಪಿ ಕೂಡ. ಮೂರು ಆಯಾಮಗಳ ಈ ಏಕೈಕ ದೇಸಿ

ಕ್ಷಿಪಣಿಯನ್ನು ಹೊರದೇಶಗಳಿಗೂ ಮಾರಾಟ ಮಾಡಿದ್ದೇವೆ. ಆ ದೇಶಗಳ ಹೆಸರು ಹೇಳಲಾರೆ.

ಕಲಾಂ ಯಾವಾಗಲೂ ಪುಸ್ತಕ ಬರೀತಿದ್ರು. ನಾನು ರಾಷ್ಟ್ರಪತಿ ಆದ ನಂತರ ಹಲವು ಸಲ ನನ್ನನ್ನು ಭೇಟಿ ಮಾಡಿದ್ದಾರೆ. ಅವರು ಬರೆದ ಪುಸ್ತಕಗಳನ್ನು ನನಗೆ ಕೊಡುತ್ತಿದ್ದರು. ನೀವೂ ಬರೆಯಿರಿ ಎಂದು ಒತ್ತಾಸೆ ನೀಡುತ್ತಿದ್ದರು. ಅವರ ಸಾವಿನ ಸುದ್ದಿ ತಿಳಿದಾಗ ಒಂದು ಬಗೆಯ ಶೂನ್ಯ ಭಾವ ನನ್ನನ್ನು ಆವರಿಸಿತು. ವಯಸ್ಸು ಸಂದರೂ ಎಷ್ಟು ಚಟುವಟಿಕೆಯ, ಖುಷಿ ಖುಷಿಯ, ಚುರುಕು ಮಿದುಳಿನ ವ್ಯಕ್ತಿ ಅವರು. ಗಳಿಗೆ ಕಾಲವೂ ವಿರಮಿಸಲು ಒಲ್ಲದ ಮಹತ್ತರ ಮಿದುಳು ಅದು. ಜನತೆಯ ರಾಷ್ಟ್ರಪತಿಯಾಗಿ ಬದುಕಿದ ಅವರು ಸಾವಿನ ನಂತರವೂ ಜನತೆಯ ರಾಷ್ಟ್ರಪತಿಯೆಂದೇ ಬದುಕಿರುತ್ತಾರೆ. ಅವರಿಗೆ ಜನತೆಯಿಂದ ಸಿಕ್ಕಷ್ಟು ಪ್ರೀತಿ ಬೇರೆ ಯಾವ ರಾಷ್ಟ್ರಪತಿಗೂ ಸಿಕ್ಕಿಲ್ಲ. ಜನತೆಯ ರಾಷ್ಟ್ರಪತಿಯಾಗಿ ಬದುಕುವುದು ಕಡು ಕಠಿಣ ಕೆಲಸ. ಜನತೆಯ ಮತ್ತು ವಿಶೇಷವಾಗಿ ಮಕ್ಕಳು ನೆಹರೂ ಅವರನ್ನು ಬಹುವಾಗಿ ಪ್ರೀತಿಸುತ್ತಿದ್ದರು. ಮಕ್ಕಳೊಂದಿಗೆ ಡಾ. ಕಲಾಂ ಅವರನ್ನು ನೋಡಿದಾಗ ಲೆಲ್ಲ ನೆಹರೂ ಅವರೇ ಮತ್ತೊಂದು ರೂಪ ತಳೆದು ಬಂದಿದ್ದಾರೆ ಎನ್ನಿಸಿಬಿಡುತ್ತಿತ್ತು. ವಿದ್ಯಾರ್ಥಿಯಾಗಿದ್ದಾಗ ಕವಿತೆಯೊಂದನ್ನು ಓದಿದ್ದೆ. ಕವಿಯ ಹೆಸರು ನೆನಪಿಲ್ಲ (Robert Southey).

My days among the dead are passed
My never-failing friends are they,
With whom I converse day by day

ಎಂಬ ಸಾಲುಗಳ ಈ ಪದ್ಯ ಪುಸ್ತಕಗಳ ಮತ್ತು ಅವುಗಳ ಕರ್ತೃಗಳ ಜೊತೆಗಿನ ಸಾರ್ಥಕ ಸಂಬಂಧ ಕುರಿತದ್ದು. ನಾನು ಮತ್ತು ಡಾ. ಕಲಾಂ ಅವರನ್ನು ಅತೀವವಾಗಿ ಬೆಸೆದದ್ದು ಗಾಢ ಪುಸ್ತಕ ಪ್ರೀತಿ. ಪುಸ್ತಕಗಳನ್ನು ಪ್ರೀತಿಸಿದ ಅವರು ಪುಸ್ತಕವಾಗಿ ಈಗಲೂ ಜೀವಿಸುತ್ತಿರುವವರು. ತಮ್ಮ ಮಾತು ಮುಗಿಯಿತೆಂದು ವಿನಮ್ರತೆಯಿಂದ ಕೈ ಮುಗಿದು ಸನ್ನೆ ಮಾಡಿದ ಪ್ರಣಬ್, ರೈತರ ಆತ್ಮಹತ್ಯೆ ಸರಣಿಯ ಕುರಿತು ತಮ್ಮ ಭಾವನೆಯನ್ನು ಹೇಳಿಯಾರು ಅನ್ನಿಸಲಿಲ್ಲ. ಆ ಪ್ರಶ್ನೆ ಈ ವರದಿಗಾರನ ಗಂಟಲಲ್ಲೇ ಉಳಿದುಹೋಯಿತು.

ದಿಲ್ಲಿಯ ವಾಯುಸೇನಾ ವಿಮಾನ ನಿಲ್ದಾಣದಲ್ಲಿ ಇಳಿದಾಗ ಡಾ. ಕಲಾಂ ಅವರ ಕಳೇಬರವನ್ನು ಶಿಲ್ಲಾಂಗ್‌ನಿಂದ ಬರಮಾಡಿಕೊಳ್ಳುವ ಸಿದ್ಧತೆಗಳು ಭರದಿಂದ ಜರುಗುತ್ತಿದ್ದವು. ಸಾವಿನ ಸೂತಕದಲ್ಲೂ ಹಬ್ಬವೊಂದು ಇಣುಕಿ ನಕ್ಕಂತಿತ್ತು.

**(ಕೃಪೆ: ವಿಜಯವಾಣಿ, 29 ಜುಲೈ 2015)**

# ಕಲಾಂ ಕನಸಿನ ಸುಜಲಾಂ, ಸುಫಲಾಂ

**ನಾಗೇಶ್ ಹೆಗಡೆ**

**ಆ**ರು ದಿನಗಳ ಹಿಂದಷ್ಟೇ ಸುದ್ದಿ ಬಂದಿತ್ತು: ಭೂಮಿಗೆ ಅತ್ಯಂತ ನಿಕಟ ಹೋಲಿಕೆ ಇರಬಹುದಾದ ಹೊಸ ಗ್ರಹವೊಂದು ಸೌರಲೋಕದ ಆಚೆ ಸಿಗ್ನಸ್ ನಕ್ಷತ್ರಪುಂಜದಲ್ಲಿ ಪತ್ತೆಯಾಗಿದೆ. ಗಾತ್ರದಲ್ಲಿ ತುಸು ದೊಡ್ಡದಾದ ಅದು ಭೂಮಿಯ ಅಣ್ಣನಂತಿದೆ. ಪ್ರತಿ 385 ದಿನಗಳಿಗೊಮ್ಮೆ ಸೂರ್ಯನ ಸುತ್ತ ಒಂದು ಪ್ರದಕ್ಷಿಣೆ ಹಾಕುತ್ತಿದೆ. ನಮ್ಮ ಪೃಥ್ವಿಯ ಹಾಗೆಯೇ ವಾಯುಮಂಡಲ, ಹದವಾದ ಬಿಸಿಲು ಮತ್ತು ನೀರು ಕೂಡ ಇರುವ ಸಾಧ್ಯತೆಯಿದೆ. ಏಕೆಂದರೆ ಅದು ತನ್ನ ಸೂರ್ಯನಿಗೆ ತೀರ ಹತ್ತಿರವೂ ಅಲ್ಲದ, ತೀರ ದೂರವೂ ಅಲ್ಲದ 'ವಾಸಯೋಗ್ಯ' ಅಂತರದಲ್ಲಿದೆ. ಅಂದರೆ ಅದರಲ್ಲಿ ಜೀವಪೋಷಕ ಗುಣಗಳಿರುವ ಸಾಧ್ಯತೆ ಇದೆ.

'ಕೆಪ್ಲರ್' ಹೆಸರಿನ ದೂರದರ್ಶಕದ ಮೂಲಕ ಪತ್ತೆಯಾದ ಆ ಗ್ರಹದ ಸದ್ಯದ ಹೆಸರು 'ಕೆಪ್ಲರ್ 452ಬಿ'.

ಅಲ್ಲಿ ಬುದ್ಧಿವಂತ ಜೀವಿಗಳಿರಬಹುದೆ? ಅಲ್ಲಿನ ಗಿಡಮರಗಳಿಗೆ ರೆಕ್ಕೆಪುಕ್ಕ ಇವೆಯೆ? ಬೇಕೆಂದಾಗ, ಬೇಕೆಂದಲ್ಲಿ ಮೈಬಿಚ್ಚಿ ಮಲಗುವ ಹುಲ್ಲುಹಾಸು ಇದ್ದೀತೆ? ಮಾತಾಡುವ ಮೃಗಪಕ್ಷಿಗಳು, ಹಾಲುಕ್ಕಿಸುವ ಕೊಳವೆ ಬಾವಿಗಳು? ಏನೊ ಗೊತ್ತಿಲ್ಲ. ಈಗ ನಮ್ಮ 'ಕೆಪ್ಲರ್' ದೂರದರ್ಶಕಕ್ಕೆ ಬಂದು ತಲುಪಿದ ಅದರ ಕ್ಷೀಣ ಬೆಳಕು ಕೂಡ 1400 ವರ್ಷಗಳಷ್ಟು ಹಳತು. ಆ ಸೌರಾತೀತ ಗ್ರಹಕ್ಕೆ ಭೇಟಿ ನೀಡಬೇಕೆಂದರೆ ನಾವು ಬೆಳಕಿನ ವೇಗದಲ್ಲಿ ಸಾಗುತ್ತಿದ್ದರೂ ಅಲ್ಲಿಗೆ ಹೋಗಿ ತಲುಪಲು 1400 ವರ್ಷಗಳು ಬೇಕು. ಇಲ್ಲಿಂದ ಯಾರಾದರೂ ಅಲ್ಲಿಗೆ ಹೋಗಿ 'ನಾನು ಸುರಕ್ಷಿತ ತಲುಪಿದ್ದೇನೆ' ಎಂದು ಭೂಗ್ರಹಕ್ಕೆ ಫೋನ್ ಮಾಡಿದರೂ ಆ ಸಂದೇಶ ಇಲ್ಲಿಗೆ ತಲುಪಲು ಮತ್ತೆ 1400 ವರ್ಷಗಳು ಬೇಕಾಗುತ್ತದೆ.

ಅಂದಮೇಲೆ, ಭೂಮಿಯ ಮೇಲಿನ ನಮಗೆ ಅದು ಸದ್ಯಕ್ಕೆ ಕೈಗೆಟಕುವ ಗ್ರಹವಂತೂ ಅಲ್ಲ. ಇಂದಿನ ಮಕ್ಕಳ ಮೊಮ್ಮಕ್ಕಳು ಅಲ್ಲಿಗೆ ಹೊರಡಬಹುದೇನೊ. ಆ ಸುಂದರ ಕನಸು ನನಸಾಗುವವರೆಗಾದರೂ ನಾವು ಈ ನಮ್ಮ ಸುಂದರ ಗ್ರಹವನ್ನು ಸುರಕ್ಷಿತ ಇಟ್ಟುಕೊಳ್ಳೋಣವೆ? ನಮ್ಮ ಮುಂದಿನ ಪೀಳಿಗೆಯವರ ಬದುಕಿನ ಹಕ್ಕನ್ನು

ನಾವು ಈಗಲೇ ಹೊಸಕಿಹಾಕುತ್ತಿಲ್ಲ ತಾನೆ?

ಶಿಲ್ಲಾಂಗ್‌ಗೆ ಹೊರಡುವ ಮುಂಚೆ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಇದೇ ಪ್ರಶ್ನೆಯನ್ನು ಎತ್ತಿಕೊಂಡರೆಂದು ಕಾಣುತ್ತದೆ. ಭೂಮಿಯನ್ನು ಹೋಲುವ ಹೊಸ ಗ್ರಹ ಪತ್ತೆಯಾಗಿದ್ದು ಅವರ ಗಮನಕ್ಕೆ ಬಂದಿತ್ತು. ಅದಕ್ಕೇ ಅವರು 'ಭೂಗ್ರಹವನ್ನು ವಾಸಯೋಗ್ಯವಾಗಿ ಇಟ್ಟುಕೊಳ್ಳುವುದು ಹೇಗೆ?' ಎಂಬ ವಿಷಯವನ್ನು ಶಿಲ್ಲಾಂಗ್‌ನ ವಿದ್ಯಾರ್ಥಿಗಳ ಎದುರು ಚರ್ಚಿಸಲು ವೇದಿಕೆ ಏರಿ, ಅದೇ ತಾನೆ ಪೀಠಿಕೆ ಹಾಕುತ್ತಿದ್ದರು. ಭೂಮಿಯಾಚೆಗಿನ ಜಗತ್ತುಗಳನ್ನು ಪ್ರಸ್ತಾಪಿಸಲು ಬಯಸಿದರೊ ಏನೊ, ದೇಹವನ್ನು ಕಳಚಿಟ್ಟು ಆಚೆಗಿನ ಜಗತ್ತಿಗೇ ಹೊರಟು ಹೋದರು.

ಕಲಾಂ ಸರ್ ಎಂದೂ ನಿಂತಲ್ಲಿ ದೀರ್ಘಕಾಲ ನಿಂತವರಲ್ಲ. ರಾಷ್ಟ್ರಪತಿ ಹುದ್ದೆಗೆ ಏರಿದ ಅತ್ಯಂತ ಚಲನಶೀಲ ವ್ಯಕ್ತಿ ಎನಿಸಿದ ಅವರು ತಮ್ಮ ಬದುಕಿನುದ್ದಕ್ಕೂ ಚಲನೆಯನ್ನೇ ಪ್ರತಿನಿಧಿಸಿದಂತಿದ್ದರು. ಓದು ಮುಗಿಸಿ, ರಕ್ಷಣಾ ಇಲಾಖೆಗೆ ಸೇರಿದ ಹೊಸದರಲ್ಲಿ ಅವರ ತಂಡ ತಯಾರಿಸಿದ ಮೊದಲ ಯಂತ್ರವೇ 'ಹೊವರ್‌ಕ್ರಾಫ್ಟ್' ಆಗಿತ್ತು. ಅಂದರೆ, ನೆಲದ ಮೇಲಾಗಿರಲಿ ಅಥವಾ ನೀರಿನ ಮೇಲಾಗಿರಲಿ ಅರ್ಧ ಮೀಟರ್ ಎತ್ತರದಲ್ಲಿ ಹಾರಿಕೊಂಡು ಜಾರಿಕೊಂಡು ಹೋಗುವ ದೋಣಿಯಂಥ ಸಾಧನ ಅದಾಗಿತ್ತು. ಸ್ವತಃ ಅಬ್ದುಲ್ ಕಲಾಂ ಅದರ ಚಾಲಕನಾಗಿ, ಪಕ್ಕದಲ್ಲಿ ಅಂದಿನ ರಕ್ಷಣಾ ಸಚಿವ ವಿ.ಕೆ. ಕೃಷ್ಣ ಮೆನನ್ ಅವರನ್ನು ಕೂರಿಸಿಕೊಂಡು ಪ್ರಾತ್ಯಕ್ಷಿಕೆಯನ್ನು ನೀಡಿದ್ದರು.

ರಸ್ತೆ ಅದೆಷ್ಟೇ ಕೆಟ್ಟದಿದ್ದರೂ ಕುಲುಕಾಡದೆ ಸಲೀಸಾಗಿ ಚಲಿಸಬಲ್ಲ ಆ ವಾಹನ ಅದೇಕೋ ಉತ್ಪಾದನೆಯ ಹಂತಕ್ಕೆ ಬರಲೇ ಇಲ್ಲ. ಆದರೆ ಕಲಾಂ ಅದರಿಂದಾಗಿ ಮೇಲಕ್ಕೇರುತ್ತಲೇ ಹೋದರು. ರಕ್ಷಣಾ ಇಲಾಖೆಯಿಂದ ಇಸ್ರೋಕ್ಕೆ ಬಂದು 'ಎಸ್‌ಎಲ್‌ವಿ' ರಾಕೆಟ್‌ಗಳ ನಿರ್ಮಾಣಕ್ಕೆ ತೊಡಗಿ 'ರೋಹಿಣಿ' ಉಪಗ್ರಹವನ್ನು ಮೇಲಕ್ಕೇರಿಸಿದರು. ನಂತರ ಮತ್ತೆ ರಕ್ಷಣಾ ಸಂಶೋಧನಾ ಸಂಸ್ಥೆಗೇ ಮರಳಿ ದಿಶಾ ನಿರ್ದೇಶಕ ಯುದ್ಧ ಕ್ಷಿಪಣಿಗಳ (ಗೈಡೆಡ್ ಮಿಸೈಲ್ಸ್) ತಯಾರಿಕೆಯ ಮೇಲ್ವಿಚಾರಣೆ ವಹಿಸಿದರು. ಸ್ಫೋಟಕಗಳನ್ನು ಹೊತ್ತೊಯ್ಯಬಲ್ಲ ವಿವಿಧ ಬಗೆಯ ಯುದ್ಧಾಸ್ತ್ರಗಳಿಗೆ ಪೃಥ್ವಿ, ನಾಗ್, ತ್ರಿಶೂಲ್, ಅಗ್ನಿ ಮುಂತಾದ ಹೆಸರುಗಳನ್ನು ಅವರೇ ಆಯ್ಕೆ ಮಾಡಿದರು. ರಕ್ಷಣಾ ಸಲಹೆಗಾರರಾಗಿ ಪದೋನ್ನತಿ ಪಡೆದು 'ತ್ರಿಶೂಲ್' ಎಂಬ ಕ್ಷಿಪಣಿಯನ್ನು ನೆಲಸೇನೆ, ನೌಕಾಸೇನೆ ಮತ್ತು ವಾಯುಸೇನೆ ಹೀಗೆ ಈ ಮೂರೂ ಬಲಗಳ ಬತ್ತಳಿಕೆಗಳಲ್ಲೂ ಸೇರಿಸಿದರು. ಪರಮಾಣು ತಂತ್ರಜ್ಞಾನದಲ್ಲಿ ಪರಿಣತಿ ಇಲ್ಲದಿದ್ದರೂ ಅದರ ಪರೀಕ್ಷಾರ್ಥ ಸ್ಫೋಟದ ಮೇಲ್ವಿಚಾರಣೆ ನಡೆಸಿ ಯುದ್ಧ ಕ್ಷಿಪಣಿಗಳಲ್ಲಿ ಪರಮಾಣು ಬಾಂಬ್ ಕೂಡ ಸೇರ್ಪಡೆಯಾಗಲು ಕಾರಣರಾದರು. ನಂತರ ಅದೇ ಖ್ಯಾತಿಯಿಂದಾಗಿ



ರಾಷ್ಟ್ರಪತಿ ಹುದ್ದೆಯನ್ನೂ ಪಡೆದು, ಆ ಮೂರೂ ಬಲಗಳ ಮಹಾದಂಡನಾಯಕರಾದರು. ರಾಷ್ಟ್ರಪತಿ ಆಗಿದ್ದಾಗ ತಮ್ಮ 74ನೇ ವಯಸ್ಸಿನಲ್ಲಿ ಧ್ವನಿಯ ವೇಗವನ್ನೂ ಮೀರಿ (ಗಂಟೆಗೆ 2120 ಕಿ.ಮೀ) ಚಲಿಸಬಲ್ಲ 'ಸುಖೋಯ್-30' ವಿಮಾನವನ್ನೇರಿ ಪೈಲಟ್ ಜೊತೆ ಕೂತು, ಅಗಾಧ ಒತ್ತಡವನ್ನು ಸಹಿಸಿಕೊಂಡೇ ವಿಮಾನದಲ್ಲಿರುವ ವಿವಿಧ ಯಂತ್ರಭಾಗಗಳ ಕಾರ್ಯಕ್ಷಮತೆಯ ಪರೀಕ್ಷೆ ನಡೆಸಿದರು. ರಡಾರ್ ಮೇಲೆ ಕಣ್ಣಿಟ್ಟು ನೆಲದ ಚಲನೆಯನ್ನೂ ವೀಕ್ಷಿಸುತ್ತಿದ್ದರು. ('ಈ ವಯಸ್ಸಿನಲ್ಲಿ, ಅಷ್ಟು ವೇಗದಲ್ಲಿ ಸಾಗಲು ಹೆದರಿಕೆ ಆಗಿಲ್ಲವೆ?' ಎಂದು ಆಮೇಲೆ ವಿದ್ಯಾರ್ಥಿಯೊಬ್ಬ ಕೇಳಿದಾಗ, 'ಹೆದರಲಿಕ್ಕೆ ಪುರುಸೊತ್ತೇ ಇರಲಿಲ್ಲ' ಎಂದಿದ್ದರು.)

ದಿಶಾನಿರ್ದೇಶಕ ಕ್ಷಿಪಣಿಯನ್ನು ರೂಪಿಸಿದ್ದ ಅವರು ತಾವೇ ಸ್ವತಃ ಒಂಥರಾ ಗೈಡೆಡ್ ಮಿಸೈಲ್ ಆಗಿದ್ದರು. ದೇಶದ ಬಡತನ, ಅನಕ್ಷರತೆ, ಮೌಢ್ಯಗಳೇ ಮುಂತಾದ ಅಸಲೀ ವೈರಿಗಳನ್ನು ದಮನ ಮಾಡುವ ನಾನಾ ಬಗೆಯ ಕಾರ್ಯಯೋಜನೆಗಳು ಅವರ ಬತ್ತಳಿಕೆಯಲ್ಲಿರುತ್ತಿದ್ದವು. ಚಂದ್ರನಲ್ಲಿಗೆ ಭಾರತೀಯರು ಹೋಗಬೇಕು, ಅಲ್ಲಿರುವ ಅಪಾರ ಹೀಲಿಯಂ ಇಂಧನವನ್ನು ಎತ್ತಿ ತಂದು ದೇಶದ ಶಕ್ತಿ ಸಮಸ್ಯೆಯನ್ನು ಬಗೆಹರಿಸಬೇಕು; ಕಡಲಂಚಿನ ಥೋರಿಯಂ ಮರಳನ್ನು ಎತ್ತಬೇಕು, ಅದರಿಂದ ಪರಮಾಣು ಶಕ್ತಿಯನ್ನು ಉತ್ಪಾದಿಸಬೇಕು; ದೇಶದ ನದಿಗಳನ್ನೆಲ್ಲ ಜೋಡಿಸಿ ರೈತರ ಬದುಕನ್ನು ಮೇಲೆತ್ತಬೇಕು ಎಂಬೆಲ್ಲ ಕನಸಿನ ಸೂತ್ರಗಳನ್ನು ಮುಂದಿಡುತ್ತಿದ್ದರು. ಅಂಥ ಬೃಹತ್ ಯೋಜನೆಗಳಿಗೆ ಟೀಕೆಗಳು ಎದುರಾದವು. ಕಲಾಂ ಬಲಿಷ್ಠ ಶಕ್ತಿಗಳ ಕೈಗೊಂಬೆಯಂತೆ ಆಡುತ್ತಿದ್ದಾರೆಂಬ ಆರೋಪ ಬಂದಾಗಲೆಲ್ಲ ಎದೆಗುಂದದೆ ಅವರು ಮೆಲ್ಲನೆ ತಮ್ಮ ಚಲನೆಯ ದಿಕ್ಕನ್ನು ಬದಲಿಸುತ್ತಿದ್ದರು. ಹೊಸ ಹೊಸ ಕನಸುಗಳನ್ನು ಎಳೆಯರೆದುರು ಬಿಚ್ಚುತ್ತ ಬಿತ್ತುತ್ತ ತಾವೇ ಬೆಳೆಯುತ್ತ, ಬದಲಾಗುತ್ತ, ನೆಲದ ವಾಸ್ತವಗಳನ್ನು ಅರ್ಥಮಾಡಿಕೊಳ್ಳುತ್ತ ಹೊದರು. ಇಂಥ ಹೈಟೆಕ್ ತಂತ್ರಜ್ಞಾನಗಳ ಲಾಭವೆಲ್ಲ ಅನುಕೂಲಸ್ಥರಿಗೇ ಹೋಗುತ್ತ, ಅದರ ಅಡ್ಡ ಪರಿಣಾಮಗಳೆಲ್ಲ ದುರ್ಬಲರತ್ತ ಸಾಗುವುದು ಅವರಿಗೆ ಬಹುದೊಡ್ಡ ಸಮಸ್ಯೆಯಾಗಿ ಕಂಡಿತು. ಸಮತೋಲ ಅಭಿವೃದ್ಧಿಯ ಪರಿಕಲ್ಪನೆ ಹೇಗಿರಬೇಕೆಂಬ ಬಗ್ಗೆ ತಜ್ಞರೊಂದಿಗೆ ಚರ್ಚಿಸುತ್ತ, ಭಾರತದ 60 ಲಕ್ಷ ಹಳ್ಳಿಗಳಿಗೆ ಸೂಕ್ತ ತಂತ್ರಜ್ಞಾನವನ್ನು ತಲುಪಿಸುವ ಸೂತ್ರಗಳನ್ನು ರೂಪಿಸುತ್ತ, ಆ ನಿಟ್ಟಿನಲ್ಲಿ ಎಲ್ಲರೂ ಕೈಜೋಡಿಸುವಂತೆ ಕರೆ ನೀಡುತ್ತ ಹೋದರು. ಎಷ್ಟೆಂದರೆ ಬೆಂಗಳೂರಿನ ಪ್ರೆಸ್‌ಕ್ಲಬ್ ಉಪನ್ಯಾಸದಲ್ಲೂ ಅವರು ಕೆರೆಗಳ ಹೂಳೆತ್ತುವ ಬಗ್ಗೆ, ಬಡತನವನ್ನು ಮೀರಿ ನಿಲ್ಲುವ ರೈತರ ಯಶೋಗಾಥೆಗಳ ಪ್ರಚಾರಕ್ಕೆ ಆದ್ಯತೆ ಕೊಡುವಂತೆ ಪತ್ರಕರ್ತರಿಗೆ ಬೋಧಿಸಿದ್ದರು. ದೇಶದ ಎಲ್ಲ ಸಮಸ್ಯೆಗಳಿಗೂ ಉತ್ತರ ಹುಡುಕುತ್ತ,

ಅದಕ್ಕೆಂದು ಯುವ ಪೀಳಿಗೆಯನ್ನು ಪ್ರೇರೇಪಿಸಬಲ್ಲ ಗ್ರಂಥಗಳನ್ನು, ಕವನಗಳನ್ನು ಬರೆಯುತ್ತ, ವೀಣೆ ನುಡಿಸುತ್ತ, ಅಪ್ಪಟ ಮೇಷ್ಟ್ರಂತೆ ಮಕ್ಕಳಿಗೆ ಪಾಠ ಹೇಳುತ್ತ, ಅಧ್ಯಾತ್ಮದ ಬಗ್ಗೆ ತಾವೇ ಪಾಠ ಹೇಳಿಸಿಕೊಳ್ಳುತ್ತ, ಪರಿಶ್ರಮ ಮತ್ತು ಪ್ರಾಮಾಣಿಕತೆಗೆ ತಾವೇ ಮಾದರಿಯಾಗುತ್ತ ಯುವ ಹೃದಯಗಳನ್ನು ಗೆಲ್ಲುತ್ತ ಮೇಲೇರಿದರು.

ಮೇಲಕ್ಕೇರುತ್ತ ಹೋದವರಿಗೆ ಇಡೀ ಭೂಮಂಡಲವೇ ಕಾಣತೊಡಗುತ್ತದೆ. ಒಂದೆಡೆ ಉತ್ತರದ ಶಕ್ತಿಶಾಲಿ ರಾಷ್ಟ್ರಗಳಲ್ಲಿ ಮಾನವ ಸಂಪನ್ಮೂಲಗಳ ಅಭಾವ; ಇನ್ನೊಂದೆಡೆ ದಕ್ಷಿಣದ ಗಿಜಿಗುಡುವ ಬಡರಾಷ್ಟ್ರಗಳಲ್ಲಿ ಅಭಿವೃದ್ಧಿಯ ಅಭಾವ. ಈ ಎರಡನ್ನೂ ಭಾರತವೇ ಸರಿತೂಗಿಸುವ ಕನಸನ್ನು ಹೆಣೆದರು. ನಾಲ್ಕು ವರ್ಷಗಳ ಹಿಂದೆ ಆಫ್ರಿಕದ 53 ದೇಶಗಳ ಮಹಾಮೇಳದಲ್ಲಿ ಮಾತಾಡುತ್ತ, 'ಕೇವಲ 15 ಕೋಟಿ ಡಾಲರ್ ಕೊಡಿ; ಹಿಂದುಳಿದ ಸಮುದಾಯಗಳ ಅಭಿವೃದ್ಧಿಗೆ ಸಂಪರ್ಕ ತಂತ್ರಜ್ಞಾನ ಏನೆಲ್ಲ ಕೊಟ್ಟೀತೆಂದು ನಾನು ತೋರಿಸುತ್ತೇನೆ' ಎಂದಿದ್ದರು. ಅದೊಂದು ಸವಾಲಿನಿಂದಾಗಿ ಆ ಅಷ್ಟೂ ದೇಶಗಳಲ್ಲಿ ಅಂಥ ಅಲ್ಪ ಮೊತ್ತದಲ್ಲಿ ಟೆಲಿ ಮೆಡಿಸಿನ್ ಮತ್ತು ಇ-ಶಿಕ್ಷಣ ವ್ಯವಸ್ಥೆಯನ್ನು ನಮ್ಮವರೇ ಕಲ್ಪಿಸುವಂತಾಯಿತು. ನಮ್ಮ ಬಹುಕೋಟಿ ಯುವಜನತೆ ಸುಶಿಕ್ಷಿತರಾದರೆ ಇಡೀ ಜಗತ್ತಿಗೆ ಆಸರೆ ಒದಗಿಸಲು ಸಾಧ್ಯ ಎಂಬುದಕ್ಕೆ ಪ್ರಾತ್ಯಕ್ಷಿಕೆ ಸಿಕ್ಕಂತಾಯಿತು.

ಆ ಹೊತ್ತಿಗೆ ಪೃಥ್ವೀಮಟ್ಟದ ಪರಿಸರ ಸಮಸ್ಯೆಗಳ ಕಾವು ಅವರನ್ನು ತಟ್ಟತೊಡಗಿತ್ತು. 2012ರಲ್ಲಿ ಪೆಂಗ್ವಿನ್ ವಾರ್ಷಿಕ ಸಭೆಯಲ್ಲಿ ಮಾತಾಡುತ್ತ, 'ಸಾವಿರಾರು ವರ್ಷಗಳಿಂದ ನಾವು ಸಂಪನ್ಮೂಲಗಳನ್ನು ಭೂಮಿಯ ಒಡಲಿನಿಂದ ಮೇಲಕ್ಕೆತ್ತುತ್ತ ಬಂದಿದ್ದೇವೆ ವಿನಾ ಏನನ್ನೂ ಹಿಂದಿರುಗಿಸಿಲ್ಲ. ಹೀಗೆ ಮೇಲೆತ್ತುವ ಪ್ರಮಾಣವನ್ನು ಕಮ್ಮಿ ಕಮ್ಮಿ ಮಾಡುತ್ತ ಸುಸ್ಥಿರ ಅಭಿವೃದ್ಧಿಯ ಹಾದಿ ತುಳಿಯಬೇಕು' ಎಂದು ಕರೆಕೊಟ್ಟರು. ಆ ನಿಟ್ಟಿನಲ್ಲಿ ಬೋಧನಾ ಸರಣಿ ಆರಂಭಿಸಿ, ಈಚೆಗೆ ಬಾಂಬೆ ಐಐಟಿಯು ಟೆಕ್‌ಫೆಸ್ಟ್‌ನಲ್ಲಿ ನೆರೆದಿದ್ದ ವಿದ್ಯಾರ್ಥಿಗಳಿಗೆ ಸೌರದೀಕ್ಷೆ ಕೊಡಿಸಿದರು: 'ಸಿಂಗಪುರ ನಮಗಿಂತ 12 ಪಟ್ಟು ಹೆಚ್ಚು ಶಕ್ತಿಯನ್ನು ಬಳಸುತ್ತಿದೆ. ಅಮೆರಿಕ 14 ಪಟ್ಟು, ಅರಬ್ ಎಮಿರೇಟ್ ನಮಗಿಂತ 16 ಪಟ್ಟು ಹೆಚ್ಚು ಶಕ್ತಿಯನ್ನು ಬಳಸುತ್ತಿದೆ. ನಾವು ಅವರಷ್ಟೇ ಶಕ್ತಿವಂತರಾಗಬೇಕೆಂದರೆ ಪೆಟ್ರೋಲು ಕಲ್ಲಿದ್ದಲಿಂದ ಸಾಧ್ಯವಿಲ್ಲ. ಡಾಲರ್‌ಗಳನ್ನು ಸುರಿದು ಆಮದು ಮಾಡಿಕೊಂಡರೂ ನಾವು ಉರಿಸುವ ಪ್ರತಿ ಲೀಟರ್ ತೈಲವೂ 2.2 ಕಿಲೊಗ್ರಾಂ ಕಾರ್ಬನ್ ಡೈಆಕ್ಸೈಡ್ ಹೊಮ್ಮಿಸುತ್ತ ವರ್ಷಕ್ಕೆ 35 ಕೋಟಿ ಟನ್ ವಿಷವಸ್ತು ವಾಯುಮಂಡಲಕ್ಕೆ ಸೇರುತ್ತದೆ. ಇಡೀ ಭೂಗ್ರಹದ ಉಷ್ಣತೆಯನ್ನು ನಾವೇ ಹೆಚ್ಚಿಸುತ್ತ ಹೋಗುತ್ತೇವೆ. ಅದರ ಬದಲಿಗೆ ದೇಶದ 22 ಕೋಟಿ ಮನೆಗಳಿಗೂ



ಸೌರ ವಿದ್ಯುತ್ ಶಕ್ತಿ ಸಿಗುವಂತಾಗಬೇಕು. ಸೂರ್ಯನ ಶಕ್ತಿಯಿಂದಲೇ ಓಡಬಲ್ಲ ಕಾರುಗಳು ತಯಾರಾಗಬೇಕು. ನಾವೇ ಜಗತ್ತಿಗೆಲ್ಲ ಮಾದರಿಯಾಗಬೇಕು' ಎಂದರು. 'ಇಲ್ಲಿ ನೆರೆದ ಪ್ರತಿಯೊಬ್ಬ ವಿದ್ಯಾರ್ಥಿಯೂ ಸೂರ್ಯನ ರಾಯಭಾರಿಯಾಗಬೇಕು' ಎನ್ನುತ್ತ ಅವರೆಲ್ಲರಿಗೆ ಪ್ರತಿಜ್ಞಾವಿಧಿಯನ್ನೇ ಬೋಧಿಸಿದರು.

ಹೋದಲ್ಲೆಲ್ಲ ಹೀಗೆ ದೀಕ್ಷೆ ಕೊಡಿಸುತ್ತ, ಸೂತ್ರಪಾಠ ಮಾಡಿಸುತ್ತ, ಪ್ರತಿಜ್ಞಾವಿಧಿ ಬೋಧಿಸುತ್ತ ಕೊನೆಗೆ ಅವರದ್ದೇ ಯೋಜನೆಗಳ ಯಶೋಗಾಥೆಗಳ ಚಿತ್ರಣ ಹೇಗಿದೆ? ಅಲ್ಲಿ ನಮಗೆ ಕೆಲಮಟ್ಟಿಗೆ ನಿರಾಸೆ ಕಾದಿದೆ. ಅವರು ಹೆಣೆದ ಕನಸುಗಳಲ್ಲಿ ಕೆಲವು ಕೈಗೂಡುತ್ತಿಲ್ಲ, ಇನ್ನು ಕೆಲವು ಕಮರಿ ಹೋಗುತ್ತಿವೆ. ವಿಜ್ಞಾನ ತಂತ್ರಜ್ಞಾನಕ್ಕೆ ರಾಷ್ಟ್ರೀಯ ಮುಂಗಡಪತ್ರದಲ್ಲಿ ಶೇ 1ಕ್ಕಿಂತ ಹೆಚ್ಚಿನ ಅನುದಾನ ಈಗಲೂ ಸಿಗುತ್ತಿಲ್ಲ. ಪ್ರತಿಭಾವಂತ ಯುವಜನರೆಲ್ಲ ಎಂಜಿನಿಯರ್‌ಗಳಾಗಿ, ಡಾಕ್ಟರ್‌ಗಳಾಗಿ, ಸಾಫ್ಟ್‌ವೇರ್ ಪರಿಣತರಾಗಿ ಹಣ ಸಂಪಾದನೆಯ ಮಾರ್ಗವನ್ನೇ ಆಯ್ಕೆ ಮಾಡಿಕೊಳ್ಳುತ್ತಿರುವಾಗ, ವಿಜ್ಞಾನ ಮತ್ತು ಸಂಶೋಧನೆಯನ್ನೇ ಮುಖ್ಯವೃತ್ತಿಯಾಗಿಸಬಲ್ಲ 'ಸೈನ್ಸ್ ಕೇಡರ್' ಆರಂಭಿಸಬೇಕು ಎಂದು ಅವರು ಹೇಳುತ್ತಿದ್ದರು. ಅದು ಕಾರ್ಯಗತ ಆಗಲಿಲ್ಲ. ಹಳ್ಳಿಯ ಜನರು ನಗರಗಳತ್ತ ವಲಸೆ ಬರುವುದನ್ನು ತಡೆಯಲು ಅವರು 'ಪುರ' ಎಂಬ ಯೋಜನೆಯನ್ನು ರೂಪಿಸಿದರು. ಅಂದರೆ ಹಳ್ಳಿಗಿಂತ ದೊಡ್ಡದಾದ, ಆದರೆ ನಗರಕ್ಕಿಂತ ತುಸು ಚಿಕ್ಕದಾದ ಪಟ್ಟಣಗಳಲ್ಲಿ ಆದರ್ಶ ಮಟ್ಟದ ಮೂಲ ಸೌಕರ್ಯ, ಉದ್ಯೋಗ ಸಂಪರ್ಕ, ಸಮುಚಿತ ಶಿಕ್ಷಣ, ಆರೋಗ್ಯ ವ್ಯವಸ್ಥೆ ಎಲ್ಲವನ್ನು ಒದಗಿಸುವ ಕನಸನ್ನು ಹೆಣೆದರು. ಈ ಯೋಜನೆ ಅನೇಕ ರಾಜ್ಯಗಳಲ್ಲಿ ಆರಂಭವಾಗಿದ್ದೇನೊ ಹೌದು. ಆದರೆ ಮಾದರಿಯಾಗುವ ಮಟ್ಟಕ್ಕೆ ಯಾವ ಪುರವೂ ಬೆಳೆದು ನಿಂತಿಲ್ಲ. ಯೋಜನೆಗಳು ಅದೆಷ್ಟೇ ಸೂತ್ರಬದ್ಧವಾಗಿದ್ದರೂ ಅವು ನೆಲ ಮುಟ್ಟುತ್ತಿಲ್ಲ. ನಿರೀಕ್ಷಿತ ಫಲ ಕೊಡುತ್ತಿಲ್ಲ.

ಹಾಗೆಂದು ಅವರು ಖಿನ್ನರಾಗಿ ಕೂತಿದ್ದೇ ಇಲ್ಲ. ಇಂದಿನ ಪೀಳಿಗೆಯ ವೈಫಲ್ಯಗಳೇ ನಾಳಿನವರಿಗೆ ಮೆಟ್ಟಿಲಾಗುತ್ತವೆ ಎಂದು ನಂಬಿ ಈ ಮೇಷ್ಟ್ರು ತಮ್ಮ ದಾರಿಯುದ್ದಕ್ಕೂ ಹಿಡಿತುಂಬ ಕನಸುಗಳನ್ನು ಬಿತ್ತುತ್ತಲೇ ಹೋದರು.

ಪುಣ್ಯಾತ್ಮ, ಬಿತ್ತುತ್ತಿರುವಾಗಲೇ ಹೋದರು.

**(ಕೃಪೆ: ಪ್ರಜಾವಾಣಿ, ಗುರುವಾರ ಜುಲೈ 30, 2015)**

# ಡಾ. ಕಲಾಂ ಪದತಲಕ್ಕೆ ಕಂಬನಿ ಮಾಲೆ

**ಡಾ. ಸಿ. ನಾಗಣ್ಣ**

(ಕಲಾಂ ನಿಸ್ಸಂದೇಹವಾಗಿ 21ನೆಯ ಶತಮಾನಕ್ಕೆ ಸೇರಿದ್ದ ವ್ಯಕ್ತಿ. ಜಾತಿ, ಧರ್ಮ ಹಾಗೂ ಕುಟುಂಬದ ಬಿಗಿಮುಷ್ಟಿಯಿಂದ ಬಿಡಿಸಿಕೊಂಡು ಹರಿದಾಡುವ ಸಂತನಂಥ ಮನುಷ್ಯ. ಸಂತನೆಂಬ ಮಾತು ದೊಡ್ಡದಾಯಿತು ಎನ್ನುವವರು ನೆನಪಿಡಬೇಕು: ರಾಷ್ಟ್ರಪತಿ ಭವನವನ್ನು ಅವರು ಪ್ರವೇಶಿಸಿದಾಗ ಜೊತೆಯಲ್ಲಿ ತೆಗೆದುಕೊಂಡು ಹೋಗಿದ್ದು ಒಂದು ಸೂಟ್‌ಕೇಸ್ ಪದಾರ್ಥ; ಸೇವಾವಧಿ ಮುಗಿದು ರಾಷ್ಟ್ರಪತಿ ಭವನದಿಂದ ಹೊರಹೋಗುವಾಗ ಜೊತೆಯಲ್ಲಿದ್ದದ್ದು ಅಷ್ಟೇ ಸಾಮಗ್ರಿ).

**ಡಾ.** ಎ.ಪಿ.ಜೆ. ಅಬ್ದುಲ್ ಕಲಾಂ ಅವರದು ಕರ್ಪೂರದಂಥ ಚೈತನ್ಯ. ತಾನು ಉರಿದು ಲೋಕಕ್ಕೆ ಬೆಳಕನ್ನೂ, ಪರಿಮಳವನ್ನೂ ಪಸರಿಸುವ ವ್ಯಕ್ತಿತ್ವ. ಲೋಕದಲ್ಲಿ ಮನುಷ್ಯರ ಹುಟ್ಟು ಮತ್ತು ಸಾವು ಅವ್ಯಾಹತವಾಗಿ ನಡೆದೇ ಇದೆ. ಪ್ರಕೃತಿ ಹಡೆಯುವ ಅಸಂಖ್ಯಾತ ಮಕ್ಕಳಲ್ಲಿ ಲೋಕಪೂಜ್ಯರಾಗುವವರು ಕೆಲವರು ಮಾತ್ರ ಅಂಥ ವಿರಳರ ಪಂಕ್ತಿಯಲ್ಲಿ ಡಾ. ಕಲಾಂ ಇಂದು ವಿರಾಜಮಾನರಾಗಿದ್ದಾರೆ.

ಮೀನುಗಾರರ ಮನೆಯಲ್ಲಿ ಹುಟ್ಟಿ ಅಕ್ಷರಶಃ ಮುಗಿಲು ಮಟ್ಟಕ್ಕೆ ಬೆಳೆದ ಕಲಾಂ ಅವರ ಜೀವನಗಾಥೆ ಎಲ್ಲ ಭಾರತೀಯರಿಗೆ ಸ್ಫೂರ್ತಿ. ಬದುಕಿನ ಸಾಧ್ಯತೆಗೆ ಅವರೊಂದು ಉದಾಹರಣೆ. 83 ವಸಂತಗಳ ಕಲಾಂ 2002 ರಿಂದ 2007 ರವರೆಗೆ ಭಾರತದ ರಾಷ್ಟ್ರಪತಿಗಳಾಗಿದರು. "ಬದುಕಲು ಇನ್ನಷ್ಟು ಅನುಕೂಲವಾಗುವಂತೆ ಜಗತ್ತನ್ನು ರೂಪಿಸುವ ಕ್ರಮ" ಎಂಬ ವಿಷಯದ ಬಗ್ಗೆ ವ್ಯವಹಾರಶಾಸ್ತ್ರದ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಉಪನ್ಯಾಸ ನೀಡಲು 27ರ ಸೋಮವಾರ ಕಲಾಂ ಮೇಘಾಲಯದ ಶಿಲ್ಲಾಂಗ್‌ಗೆ ತೆರಳಿದ್ದರು. ಉಪನ್ಯಾಸ ಮಾಡುತ್ತಲೇ ಹೃದಯಾಘಾತದಿಂದ ಕುಸಿದು ಬಿದ್ದರು. ಶಿಲ್ಲಾಂಗ್‌ನ ಬೆಥನಿ ಆಸ್ಪತ್ರೆಗೆ ಅವರನ್ನು ಸಾಗಿಸುವಾಗಲೇ ಅವರು ಕೊನೆಯುಸಿರೆಳೆದರು.

ಕಲಾಂ ಒಂದರ್ಥದಲ್ಲಿ ಇಚ್ಛಾಮರಣಿ ಎನ್ನಬಹುದು. ತನಗಿಷ್ಟವಾದ ಕಾಯಕದಲ್ಲಿ ತೊಡಗಿರುವಾಗಲೇ ಸಾವನ್ನಪ್ಪಬೇಕೆಂದು ಅವರು ಸಂಕಲ್ಪ ಮಾಡಿದ್ದಿರಬಹುದು. "ನಾನು ಮರಣ ಹೊಂದಿದಾಗ ಸರ್ಕಾರಿ ಸಂಸ್ಥೆಗಳಿಗೆ ರಜೆ ಘೋಷಿಸಬೇಡಿ; ಇನ್ನಷ್ಟು ಹೆಚ್ಚು ಕೆಲಸ ಮಾಡಿ" ಎಂದು ಅವರು ತಿಳಿಸಿದ್ದರು. ಹಾಗಾಗಿ ತಮ್ಮ ತಮ್ಮ ಸ್ಥಳಗಳಲ್ಲಿಯೇ ಶ್ರದ್ಧಾಂಜಲಿ ಆಚರಿಸಿ ಮಂದಿ ನಿನ್ನೆ ಎಂದಿನಂತೆ ಕೆಲಸ ಮಾಡಿದ್ದಾರೆ. ಇದೊಂದು ವಿಶೇಷ. ಕಲಾಂ ಮಾಮೂಲಿ ಮನುಷ್ಯರಾಗಿರಲಿಲ್ಲ. ಅವರು ರಾಜಕೀಯ ವರ್ಗದಿಂದ ಬಂದವರಲ್ಲ. ರಾಷ್ಟ್ರಪತಿ ಭವನವನ್ನು ಅಧಿಕೃತ ಆಚರಣೆಗಳಿಗೆ ಮೀಸಲಾಗಿಡದೆ



ಸಾರ್ವಜನಿಕರ ಸಾಮೀಪ್ಯಕ್ಕೆ ಒದಗಿಸಿಕೊಟ್ಟರು. ರಾಷ್ಟ್ರಪತಿ ಸ್ಥಾನ ಕೇವಲ ಅಲಂಕಾರದ ಸ್ಥಾನವಲ್ಲ ಎಂಬ ಸಂದೇಶವನ್ನು ಸ್ಪಷ್ಟವಾಗಿ ರವಾನಿಸುವುದರ ಜೊತೆಗೆ ಆ ಸ್ಥಾನದಿಂದ ಶಾಲಾ ಕಾಲೇಜುಗಳ ಮಕ್ಕಳಿಗೆ ಪಾಠ ಹೇಳುವ ಬೋಧಕವೃತ್ತಿಯನ್ನು ಅತ್ಯಂತ ನಿಷ್ಠೆಯಿಂದ ನೆರವೇರಿಸಿದರು.

ಅಧಿಕಾರದ ಅವಧಿ ಮುಗಿದ ನಂತರವೂ ಎಳೆಯ ಮಕ್ಕಳಿಗೆ ಉಪನ್ಯಾಸ ನೀಡುವ ಕಾಯಕವನ್ನು ಮುಂದುವರಿಸಿದರು. ಸುತ್ತೂರಿನಲ್ಲಿ ಸುಮಾರು ಎರಡು ವರ್ಷಗಳ ಹಿಂದೆ ಜರುಗಿದ ಅಂಥ ಒಂದು ಕಾರ್ಯಕ್ರಮದಲ್ಲಿ ನೆರೆದಿದ್ದ ಸಹಸ್ರಾರು ಶ್ರೋತೃಗಳ ನಡುವೆ ಒಬ್ಬ ಶ್ರೋತೃವಾಗಿ ನಾನು ಭಾಗವಹಿಸಿ ಕಣ್ತುಂಬ ವೀಕ್ಷಿಸಿದೆ. ತಮ್ಮ ಉಪನ್ಯಾಸದ ನಂತರ ಕಲಾಂ ಅವರಿಗೆ ಪ್ರಶ್ನೋತ್ತರ ಬೇಕೇಬೇಕು, ಆ ಸಮಯದಲ್ಲಿ ಕಲಾಂ ಅವರು ಗರುಡನ ಹಾಗೆ ಗರಿಗೆದರುತ್ತಿದ್ದರು. ಬಾಲಕ-ಬಾಲಕಿಯರ ಪ್ರಶ್ನೆಗಳನ್ನು ಮೈಯೆಲ್ಲ ಕಿವಿಯಾಗಿ ಕೇಳಿಸಿಕೊಳ್ಳುತ್ತಿದ್ದರು. ಪ್ರಶ್ನೆಗಳನ್ನು ಬಹುವಾಗಿ ಮೆಚ್ಚುತ್ತಿದ್ದರು. ದೊಡ್ಡವರ ಸಮಸ್ಯೆಯೆಂದರೆ ಚಿಕ್ಕವರ ಪ್ರಶ್ನೆಗಳನ್ನು ಲಘುವಾಗಿ ತೆಗೆದುಕೊಳ್ಳುವುದು; ಇಲ್ಲವೇ ಅನ್ಯಮನಸ್ಕತೆಯಿಂದ ಆಲಿಸುವುದು; ಕಡೆಗೆ ದೇಶಾವರಿಯಾಗಿ ಉತ್ತರ ಕೊಡುವುದು. ಕಲಾಂ ಇದಕ್ಕೆ ವ್ಯತಿರಿಕ್ತ. ಪ್ರಶ್ನೆಯನ್ನು ಚೆನ್ನಾಗಿ ಕೇಳಿಸಿಕೊಂಡು ಅತ್ಯಂತ ಆಸ್ಥೆಯಿಂದ ಉತ್ತರ ಕೊಡುತ್ತಿದ್ದರು. ಸಮಯ ಹೋಗುವುದೇ ಗೊತ್ತಾಗುತ್ತಿರಲಿಲ್ಲ. ಆ ಉಪನ್ಯಾಸಗೋಷ್ಠಿ ಮುಗಿದ ನಂತರವೂ ಸಹಸ್ರಾರು ಮಂದಿ ಚಿಕ್ಕ ಮಕ್ಕಳು, ಅಷ್ಟೇ ಸಂಖ್ಯೆಯ ಶ್ರೋತೃಗಳ ಮನಸ್ಸಿಲ್ಲದ ಮನಸ್ಸಿನಲ್ಲಿ, ಆ ಸ್ಥಳದಿಂದ ಕದಲುತ್ತಿದ್ದರು. ಒಬ್ಬ ಮಹಿಮಾವಂತನ ಮಾರ್ಗದರ್ಶಕ ಮಾತುಗಳು ಕಿವಿಯಲ್ಲಿ ಮಾರ್ದನಿಗುಡುತ್ತಿದ್ದಂತೆಯೇ ಮೌನವಾಗಿ ಹೆಜ್ಜೆ ಹಾಕುತ್ತಿದ್ದರು.

ಆದಿಚುಂಚನಗಿರಿಯಲ್ಲಿ ನಡೆದ ಇಂಥದೇ ಉಪನ್ಯಾಸದ ಸಂದರ್ಭದಲ್ಲಿ ಭವಾನಿ ಎಂಬ ಬಾಲಕಿ ಕೇಳಿದ ಪ್ರಶ್ನೆ ಕಲಾಂ ಅವರ ಎದೆಯಲ್ಲಿ ಅಚ್ಚೊತ್ತಿಬಿಟ್ಟಿತ್ತು. ಆ ಪ್ರಸಂಗವನ್ನು ಅವರು ರಾಷ್ಟ್ರೀಯ ಟಿವಿ ವಾಹಿನಿಗಳಲ್ಲಿ ತಮ್ಮನ್ನು ಸಂದರ್ಶಿಸುವವರ ಜೊತೆ ಹಂಚಿಕೊಳ್ಳುತ್ತಿದ್ದರು. ಆ ಭವಾನಿ ಪ್ರಸಂಗ ಇದು; ಪ್ರಶ್ನೋತ್ತರದ ವೇಳೆಯಲ್ಲಿ ಭವಾನಿ ಕಲಾಂ ಅವರಿಗೆ ಕೇಳಿದ್ದು: "ದೊಡ್ಡವರಲ್ಲಿ ತಾಂಡವವಾಡುವ ಭಷ್ಟಾಚಾರವನ್ನು ಚಿಕ್ಕವರಾದ ನಾವು ತಡೆಗಟ್ಟುವ ಬಗೆ ಹೇಗೆ?" ಕಲಾಂ ಅವರನ್ನು ಈ ಪ್ರಶ್ನೆ ಚಕಿತಗೊಳಿಸಿದ್ದರಿಂದ ಒಂದು ಕ್ಷಣ ಆಲೋಚಿಸಿ ಸಾವಧಾನವಾಗಿ ಹೇಳಿದರಂತೆ: "ನಿಮ್ಮ ಪೋಷಕರು ಭ್ರಷ್ಟಾಚಾರದಿಂದ ಹಣವನ್ನು ಮನೆಗೆ ತಂದಾಗ ನೀವು ಅವರಿಗೆ ಬುದ್ಧಿ ಹೇಳಿ ಅವರನ್ನು ಸರಿದಾರಿಗೆ ತರಬಹುದು. ಇಂಥ ಹಣವನ್ನು ಮನೆಗೆ ತರಬೇಡಿ ಎಂದು ತಾಕೀತು ಮಾಡಿ. ಪ್ರತಿಯೊಂದು ಮನೆಯಲ್ಲಿಯೂ ಈ ರೀತಿ ಮಕ್ಕಳು ತಂದೆತಾಯಿಯರನ್ನು ಪ್ರಶ್ನಿಸುವ ಮೂಲಕ ಭ್ರಷ್ಟಾಚಾರವನ್ನು ತಡೆಗಟ್ಟಬಹುದು".

ಕಲಾಂ ಅವರ ಕಣ್ಣೆದುರಿಗೆ ಇದ್ದ ಕನಸೆಂದರೆ 2020ನೇ ಇಸವಿ ಹೊತ್ತಿಗೆ ಭಾರತವನ್ನು ಮುಂದುವರಿದ ರಾಷ್ಟ್ರವಾಗಿ ಪರಿವರ್ತಿಸುವುದು. ಅವರ ನಾಲಗೆಯ ಮೇಲೆ ಈ ಇಸವಿ ಸದಾ ಹರಿದಾಡುತ್ತಿತ್ತು. ಮುಂದುವರಿದ ರಾಷ್ಟ್ರಗಳ ಗುಂಪಾದ ಜಿ-8ಗೆ ಭಾರತ ಸೇರ್ಪಡೆಯಾಗಬೇಕೆಂಬುದು ಅವರ ಸಂಕಲ್ಪ. ಇಬ್ಬರು ಕೆಲಸ ಮಾಡುತ್ತಿದ್ದರೆ ಮೂರನೆಯವನು ಅವರಿಬ್ಬರ ಉಸ್ತುವಾರಿಗೆ ನಿಲ್ಲುತ್ತಾನೆ; ಇದು ನಮ್ಮ ದೇಶದ ಪರಿಸ್ಥಿತಿ. ಕಲಾಂ ಅವರ ಕನಸು ನನಸಾಗಬೇಕಾದರೆ ಅವರ ಮಾತನ್ನು ನಿಜ ಮಾಡುವತ್ತ ಎಲ್ಲರೂ ಟೊಂಕಕಟ್ಟಿ ನಿಲ್ಲಬೇಕು.

ಏನೇ ಇರಲಿ - ಡಾ. ಕಲಾಂ ಅವರು ಉನ್ನತ ಸ್ಥಾನವಿರುವುದು ಅಲ್ಲೇ ಸ್ಥಿರವಾಗಿ ಕೂರುವುದಕ್ಕಲ್ಲ; ಆ ಗದ್ದುಗೆಯಿಂದ ಇಳಿದು ಜನಸಾಮಾನ್ಯರ ನಡುವೆ ಹರಿದಾಡುವುದಕ್ಕೆ ಎಂದು ಸಾಬೀತುಪಡಿಸಿದರು. ಜನತೆಯ ಅನುಕ್ತ ಅಪೇಕ್ಷೆಯಂತೆ ಕಲಾಂ ಕಾಲದಿಂದ ಕಾಲಕ್ಕೆ ಸರಿಯಾದ ನಿರ್ಧಾರಗಳನ್ನೇ ತೆಗೆದುಕೊಂಡರು. ಒಂದು ಸನ್ನಿವೇಶದಲ್ಲಿ ಪ್ರಣಬ್ ಮುಖರ್ಜಿಯವರ ವಿರುದ್ಧ ರಾಷ್ಟ್ರಪತಿ ಸ್ಥಾನಕ್ಕೆ ಸ್ಪರ್ಧಿಸಿ ಎಂದು ಕೆಲವರು ಅವರನ್ನು ಹುರಿದುಂಬಿಸಲು ಯತ್ನಿಸಿದಾಗ "ಈ ಸ್ಪರ್ಧೆಗಿಳಿಯಲು ನನ್ನ ಆತ್ಮಸಾಕ್ಷಿ ಒಪ್ಪುತ್ತಿಲ್ಲ" ಎಂದುಬಿಟ್ಟರು.

ರಾಷ್ಟ್ರಪತಿ ಪದವಿ ಮುಗಿದ ನಂತರ ವಿಮಾನ ನಿಲ್ದಾಣಗಳಲ್ಲಿ ಸರತಿ ಸಾಲಿನಲ್ಲಿ ನಿಂತು ಅವರು ಭದ್ರತಾ ಪರೀಕ್ಷೆಗೊಳಗಾಗುತ್ತಿದ್ದ ದೃಶ್ಯ ಸಹಪ್ರಯಾಣಿಕರಲ್ಲಿ ಅಚ್ಚರಿ ಮೂಡಿಸುತ್ತಿತ್ತು. ಕಲಾಂ ಯಾವ ವಿಶೇಷ ಅನುಕೂಲಗಳನ್ನೂ ಬಳಸಿಕೊಳ್ಳುತ್ತಿರಲಿಲ್ಲ. ಅವರ ಸಂದೇಶಗಳೂ ಅಷ್ಟೇ ಸರಳ. ಅವರ ಬರಹ ನೇರವಾಗಿ ಮನಸ್ಸಿಗೆ, ಹೃದಯಕ್ಕೆ ಮುಟ್ಟುವಂಥವು. ಹಾಗಾಗಿ ಅವರ ಪುಸ್ತಕಗಳ ಸಹಸ್ರಾರು ಪ್ರತಿಗಳು ಖರ್ಚಾಗಿವೆ. ಇನ್ನು ಮೇಲೆ ಜನರು ಹೆಚ್ಚು ಪ್ರೀತಿಯಿಂದ ಅವರ ಬರಹಗಳನ್ನು ಇಷ್ಟಪಡುತ್ತಾರೆ. ಅವರ ಆತ್ಮಕಥೆ 'ವಿಂಗ್ಸ್ ಆಫ್ ಫೈಯರ್' ಅತಿ ಹೆಚ್ಚು ಮಾರಾಟವಾಗುತ್ತಿರುವ ಪುಸ್ತಕ ಎನ್ನಬಹುದು. ಅದಾದ ನಂತರ ಹಲವು ಗ್ರಂಥಗಳನ್ನು ಅವರು ರಚಿಸಿದರು; ಅವೆಲ್ಲವನ್ನೂ ಓದುಗರು ಅನುವಾದಗಳ ಮೂಲಕವೂ ತಮ್ಮದಾಗಿಸಿಕೊಂಡಿದ್ದಾರೆ. "ಭಾರತ 2020" ಎಂಬ ಪುಸ್ತಕದಲ್ಲಿ ಕಲಾಂ ಅವರು ಹೇಳುತ್ತಾರೆ: "ಭಾರತ ಪ್ರಗತಿ ಸಾಧಿಸಬೇಕಾದರೆ ಈ ಐದು ಅಂಶಗಳ ಕಡೆ ಗಮನಹರಿಸಬೇಕು- (1) ಕೃಷಿ ಹಾಗೂ ಆಹಾರ ಸಂಸ್ಕರಣೆ (2) ಶಿಕ್ಷಣ ಹಾಗೂ ಆರೋಗ್ಯ ರಕ್ಷಣೆ (3) ಮಾಹಿತಿ ಹಾಗೂ ಸಂಪರ್ಕ ತಂತ್ರಜ್ಞಾನ (4) ಮೂಲ ರಚನೆ-ವಿಶ್ವಾಸಾರ್ಹವಾದ, ಗುಣ ಮಟ್ಟದ ವಿದ್ಯುಚ್ಛಕ್ತಿ (5) ಮುಖ್ಯ ತಂತ್ರಜ್ಞಾನದಲ್ಲಿ ಸ್ವಾವಲಂಬನೆ ಸಾಧಿಸುವುದು".

ರಾಷ್ಟ್ರಪತಿ ಸ್ಥಾನದಿಂದ ನಿವೃತ್ತರಾದ ನಂತರವೂ ಕಲಾಂ ಜನಪ್ರಿಯತೆಯ ಉತ್ತುಂಗದಲ್ಲೇ ಇದ್ದರು. ಇದಕ್ಕೆ ಮುಖ್ಯ ಕಾರಣ ಅವರ ಮನಸ್ಸು ಹೊಸ ಹೊಸ



ಆಲೋಚನೆಗಳಿಂದ ತುಂಬಿರುತ್ತಿತ್ತು; ಕೊನೆಯವರೆಗೂ ಉತ್ಸಾಹದ ಚಿಲುಮೆಯಾಗಿದ್ದರು. ತಮ್ಮ 74ನೆಯ ವಯಸ್ಸಿನಲ್ಲಿ ಸುಖೋಯ್ ವಿಮಾನವನ್ನು ಹಾರಾಡಿಸಿದರೆಂದರೆ ಅವರ ಕುತೂಹಲ ಮತ್ತು ಸಾಹಸದ ಹರಹನ್ನು ತಿಳಿಯಬಹುದಾಗಿದೆ.

ಒಬ್ಬ ತ್ಯಾಗಿ ಹೇಗಿದ್ದರೂ ಸುಂದರ ಎಂಬುದು ಲೋಕಾನುಭವದ ಮಾತು. ಶಾರೀರಿಕವಾಗಿ ಕಲಾಂ ಅವರದು ಸಾಮಾನ್ಯ ಆಕೃತಿ; ಗುಂಪಿನಲ್ಲಿ ಕರಗಿ ಹೋಗುವಂಥದ್ದು. ಆದರೆ ತನ್ನ ಉಜ್ವಲ ರಾಷ್ಟ್ರಪ್ರೇಮದಿಂದ, ಸಹಮಾನವರನ್ನು ಬರಸೆಳೆದಪ್ಪಿಕೊಳ್ಳುವ ಆತ್ಮೀಯತೆಯಿಂದ ಅವರು ಬೆಳೆಯುತ್ತಲೇ ಹೋದರು. ರಾಷ್ಟ್ರಾಧ್ಯಕ್ಷರಾಗುವ ಮೊದಲೇ 'ಭಾರತ ರತ್ನ' ಪುರಸ್ಕಾರದಿಂದ ಅವರು ಅಲಂಕೃತರಾಗಿದ್ದರು. ಈ ವಿಷಯವಾಗಿ ಅವರು ಡಾ. ಸರ್ವೇಪಲ್ಲಿ ರಾಧಾಕೃಷ್ಣನ್ ಹಾಗೂ ಡಾ. ಜಾಕಿರ್ ಹುಸೇನ್ ಅವರ ಸಾಲಿನಲ್ಲಿದ್ದಾರೆ.

ಕಲಾಂ ಅವರ ಸರಳತೆ, ಸಾಮಾನ್ಯರಲ್ಲಿ ಸಾಮಾನ್ಯನಾಗಿ ಬೆರೆಯುವ ಗುಣ-ಇದೆಲ್ಲ ಅವರನ್ನು ಜನರ ಹತ್ತಿರಕ್ಕೆ ಕೊಂಡೊಯ್ಯಿತು. ಎಲ್ಲಿ ಹೋದರೂ ಅವರು ಊಟಕ್ಕೆ 'ಸ್ವಲ್ಪ ಅನ್ನ, ಸ್ವಲ್ಪ ರಸಂ' ಎಂದು ಕೇಳುತ್ತಿದ್ದರು. ಇದಿಷ್ಟೇ ಅವರ ಊಟದ ಪಟ್ಟಿ (ಮೆನು). ವಿದ್ಯಾಕ್ಷೇತ್ರ, ಆರ್ಥಿಕ ವಲಯ ಹಾಗೂ ಶಸ್ತ್ರಾಸ್ತ್ರಗಳ ವಿಷದಲ್ಲಿ ನಾವು ಸ್ವಾವಲಂಬನೆ ಸಾಧಿಸಬೇಕೆಂದು ಎಲ್ಲರಿಗೂ ಸ್ಫೂರ್ತಿ ನೀಡಿದ ಡಾ. ಕಲಾಂ, ವಿಜ್ಞಾನಿಗಳು ಹಾಗೂ ತಂತ್ರಜ್ಞಾನಿಗಳ ನಡುವೆ ಅಷ್ಟೇ ಅಲ್ಲದೆ, ಶೈಕ್ಷಣಿಕ ರಂಗದ ವ್ಯಕ್ತಿಗಳ ಗೌರವಕ್ಕೂ ಭಾಜನಾರಾಗಿದ್ದರು.

ಇಂದು ಅವರ ಜನ್ಮಸ್ಥಳವಾದ ತಮಿಳುನಾಡಿನ ರಾಮೇಶ್ವರಂನಲ್ಲಿ ಅವರ ಅಂತ್ಯಸಂಸ್ಕಾರ ಜರುಗುತ್ತಿದೆ. ಮುಗಿಲು ಮುಟ್ಟುವಂಥ ಕೀರ್ತಿಯನ್ನು ಗಳಿಸಿದ್ದರೂ ಕಲಾಂ ನೆಲದ ನಂಟನ್ನು ಕಳೆದುಕೊಳ್ಳಲಿಲ್ಲ. ದಿಲ್ಲಿಯಲ್ಲಿ ಸ್ಥಳವನ್ನು ಕಾಯ್ದಿರಿಸುತ್ತಾರೆ ಎಂದು ಗೊತ್ತಿದ್ದರೂ ಅಂತ್ಯಕಾಲದಲ್ಲಿ ತನ್ನ ತಾಯ್ನೆಲದ ಮಡಿಲಿಗೆ ನನ್ನನ್ನು ಸೇರಿಸಿ ಎಂದು ಅವರು ಸಂಕಲ್ಪಿಸಿರಬಹುದು.

ಏನೇ ಇರಲಿ, ಆಲಸ್ಯವನ್ನು ಹತ್ತಿರಕ್ಕೆ ಬರಗೊಡದೆ ನಿರಂತರವಾಗಿ ದುಡಿದು ಸಹಮಾನವರ ಅಮಿತವಾದ ಅಕ್ಕರೆಯನ್ನು ಸಂಪಾದಿಸಿ, ಅಪ್ರತಿಮ ರಾಷ್ಟ್ರಪ್ರೇಮಿ ಎಂಬ ಬಿರುದನ್ನು ಪಡೆದ ಡಾ. ಅಬ್ದುಲ್ ಕಲಾಂ. ಅವರ ಉಪಕಾರವನ್ನು ನೆನೆಯುತ್ತ ಕಂಬನಿ ಮಾಲೆಯನ್ನು ಅವರ ಪದತಲಕ್ಕರ್ಪಿಸುವೆ.

**(ಕೃಪೆ: ಆಂದೋಲನ ಜುಲೈ 29, 2015)**

# ನಿಮ್ಮೆಲ್ಲರಿಗೂ ಶುಭವಾಗಲಿ...

**ಮೈಸೂರಿಗರಿಗಿದು ಕಲಾಂ ಅವರ ಕೊನೆಯ ಮಾತು**

ಮೈಸೂರು: 'ನಿಮ್ಮೆಲ್ಲರಿಗೂ ಶುಭವಾಗಲಿ' ಎಂದು ಕನ್ನಡದಲ್ಲಿ ಹೇಳಿ ಹೊರಟ ಮಾಜಿ ರಾಷ್ಟ್ರಪತಿ ಡಾ. ಎಪಿಜೆ ಅಬ್ದುಲ್ ಕಲಾಂ ಅವರ ನುಡಿ ಮೈಸೂರಿಗರಿಗೆ ಕೊನೆ ಮಾತಾಗಿದೆ.

ಸುತ್ತೂರು ಮಠದೊಂದಿಗಿನ ನಂಟಿನಿಂದ ಮೈಸೂರಿನೊಂದಿಗೆ ನಿಕಟ ಸಂಪರ್ಕ ಇಟ್ಟುಕೊಂಡಿದ್ದ ಕಲಾಂ, 2015ರ ಮಾರ್ಚ್ 31ರಂದು ತಮ್ಮ ಎಂದಿನ ಲವಲವಿಕೆಯಿಂದಲೇ ನಗರದ ಶ್ರೀ ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜಿನ ಸುವರ್ಣ ಮಹೋತ್ಸವ ಹಾಗೂ ಜೆ.ಕೆ. ಮೈದಾನದಲ್ಲಿ ಜರುಗಿದ ಮೈಸೂರು ವೈದ್ಯಕೀಯ ಕಾಲೇಜಿನ ಘಟಿಕೋತ್ಸವದಲ್ಲಿ ಮಾಡಿದ ಭಾಷಣವೇ ಕೊನೆಯಾಯಿತು.

ಎಸ್‌ಜೆಸಿಇ ಸುವರ್ಣ ಮಹೋತ್ಸವದಲ್ಲಿ 'ನಿಮ್ಮೆಲ್ಲರಿಗೂ ಶುಭವಾಗಲಿ' ಎಂದು ಕನ್ನಡದಲ್ಲಿ ಹೇಳುವುದರ ಮುಖಾಂತರ ನೆರೆದಿದ್ದ ಎಲ್ಲರನ್ನು ಒಂದು ಕ್ಷಣ ಚಕಿತರಾಗುವಂತೆ ಮಾಡಿದ್ದರು.

ಜೀವನದಲ್ಲಿ ಆರೋಗ್ಯ, ಸುರಕ್ಷತೆ, ರಕ್ಷಣೆಗೆ ಇಂದಿನ ಪೀಳಿಗೆಯವರು ಹೆಚ್ಚಿನ ಆದ್ಯತೆ ನೀಡಬೇಕು. ಅಲ್ಲದೇ ಬುದ್ಧಿವಂತಿಕೆಯೇ ನಿಮ್ಮ ಶಕ್ತಿ ಎನ್ನುವ ಪ್ರತಿಜ್ಞಾವಿಧಿ ಬೋಧಿಸಿದ್ದ ಅವರು, ಈ ಮೂರು ಅಂಶಗಳನ್ನು ನೆನಪಿನಲ್ಲಿಟ್ಟುಕೊಳ್ಳುವಂತೆ ವಿದ್ಯಾರ್ಥಿಗಳಿಗೆ ಸಲಹೆ ನೀಡಿದ್ದರು.

ರಾಷ್ಟ್ರಪತಿ ಆಗುವುದಕ್ಕೂ ಮುನ್ನವೇ ನಗರಕ್ಕೆ ಭೇಟಿ ನೀಡಿದ್ದ ಕಲಾಂ ಅವರು, ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಆವರಣದಲ್ಲಿ ಮಾಧ್ಯಮದವರನ್ನು ದೂರವಿಟ್ಟು, ವಿಶೇಷ ಮಕ್ಕಳೊಂದಿಗೆ ಸಂವಾದ ನಡೆಸಿದ್ದು ಅವರ ಪ್ರಥಮ ಭೇಟಿಯಾಗಿತ್ತು.

ಜೆಎಸ್‌ಎಸ್ ಮಹಾವಿದ್ಯಾಲಯದ ಕುಲಪತಿ ಡಾ. ಸುರೇಶ್ ಅವರೊಂದಿಗೆ ಸ್ನೇಹವಿದ್ದ ಕಲಾಂ ಅವರು ಮಹಾವಿದ್ಯಾಲಯದ ಗೌರವಾನ್ವಿತ ಅತಿಥಿ ಉಪನ್ಯಾಸಕರಾಗಿದ್ದರು. ಹೀಗಾಗಿ ವರ್ಷಕ್ಕೊಮ್ಮೆ ಮಹಾವಿದ್ಯಾಲಯಕ್ಕೆ ಭೇಟಿ ನೀಡಿ ಉಪನ್ಯಾಸ ನೀಡುವ ಮೂಲಕ ವಿದ್ಯಾರ್ಥಿಗಳಲ್ಲಿ ಸ್ಫೂರ್ತಿ ತುಂಬುತ್ತಿದ್ದರು.



**ಪರಮಪೂಜ್ಯ ಜಗದ್ಗುರುಗಳ ಶ್ರೀ ಸಂತಾಪ**

ಮಾಜಿ ರಾಷ್ಟ್ರಪತಿ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ನಿಧನಕ್ಕೆ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ಅವರ ನಿಧನ ಅತ್ಯಂತ ದುರ್ದೈವದ ಸಂಗತಿ. ಅದ್ಭುತ ಸಾಧನೆಯಿಂದ ಭಾರತರತ್ನ ಪ್ರಶಸ್ತಿ ಸ್ವೀಕರಿಸಿದ ನಂತರ ಅವರು ರಾಷ್ಟ್ರಪತಿಯಾದರು. ಈ ಮೂಲಕ ಈ ಹುದ್ದೆಗೆ ಗೌರವ ಮತ್ತು ಘನತೆಯನ್ನು ಹೆಚ್ಚಿಸಿದರು. ಅವರದ್ದು ವಿಜ್ಞಾನ ಮತ್ತು ಆಧ್ಯಾತ್ಮಿಕ ಮೇಳೈಸಿದ ವ್ಯಕ್ತಿತ್ವ. ಮಾನವೀಯ ಅನುಕಂಪ. ಪ್ರೀತಿ-ಸ್ನೇಹ ಅವರಲ್ಲಿ ಹಾಸುಹೊಕ್ಕಾಗಿತ್ತು. ಅಪಾರ ದೇಶಪ್ರೇಮವನ್ನು ಮೈಗೂಡಿಸಿಕೊಂಡಿದ್ದರು. ಅಲ್ಲದೆ, ಧರ್ಮಗಳು ಒಂದಾಗಿ ದೇಶಾಭಿವೃದ್ಧಿ ಆಗಬೇಕು ಎನ್ನುವುದು ಅವರ ಉದ್ದೇಶವಾಗಿತ್ತು. ಹೀಗಾಗಿ, ಅವರ ಸಾವು ತುಂಬಲಾರದ ನಷ್ಟವಾಗಿದೆ ಎಂದು ಸಂತಾಪ ಸೂಚಿಸಿದ್ದಾರೆ. ಸುತ್ತೂರು ಮಠದೊಂದಿಗೆ 2-3 ದಶಕದಿಂದ ನಿಕಟ ಸಂಪರ್ಕವನ್ನು ಅವರು ಹೊಂದಿದ್ದರು. ಅವರು ರಾಷ್ಟ್ರಪತಿಯಾಗುವುದಕ್ಕೂ ಮುನ್ನ, ಹಾಗೂ ರಾಷ್ಟ್ರಪತಿಯಾದಾಗ ಮತ್ತು ಬಳಿಕವೂ ಅವರು ಮಠದೊಂದಿಗೆ ಸಂಪರ್ಕದಲ್ಲಿ ಇಲ್ಲಿಗೆ ಬಹಳ ಸಲ ಬಂದು ಹೋಗಿದ್ದಾರೆ ಎಂದು ಸ್ಮರಿಸಿದರು.

* 2008ರಲ್ಲಿ ತಮ್ಮ ಆಪ್ತ ಕಾರ್ಯದರ್ಶಿ ಪಿ.ಎಂ. ನಾಯಕ್ ಅವರು ಇಂಗ್ಲಿಷ್‌ನಲ್ಲಿ ಬರೆದಿದ್ದ 'ಕಲಾಂ ಎಫೆಕ್ಟ್' ಪುಸ್ತಕದ ಕನ್ನಡ ಅನುವಾದ ಮಾಡಿದ್ದ ಪತ್ರಕರ್ತ ವಿಶ್ವೇಶ್ವರಭಟ್ ಅವರ 'ಕಲಾಂ ಕಮಾಲ್' ಪುಸ್ತಕವನ್ನು ಸ್ವತಃ ಕಲಾಂ ಅವರೇ ಸುತ್ತೂರು ಮಠದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಬಿಡುಗಡೆ ಮಾಡಿದ್ದರು.

* 2010ರಲ್ಲಿ ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಪ್ರಥಮ ಘಟಿಕೋತ್ಸವದಲ್ಲಿ ಭಾಗವಹಿಸಿ ವಿದ್ಯಾರ್ಥಿಗಳಿಗೆ ಉಪನ್ಯಾಸ ನೀಡಿ ಪದವಿ ಪ್ರದಾನ ಮಾಡಿದ್ದರು. ಅಲ್ಲದೇ ದಿ ಪಾಲ್ ಇಂಟರ್‌ನ್ಯಾಷನಲ್ ರೆಸಿಡೆನ್ಸಿಯಲ್ ಸ್ಕೂಲ್‌ನಲ್ಲಿ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದ್ದರು. ಮೈಸೂರು ವಿಶ್ವವಿದ್ಯಾಲಯದ ಸೆನೆಟ್ ಭವನದಲ್ಲಿ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದ್ದ ಅವರು, ಬಳಿಕ ಕ್ರಾಫರ್ಡ್‌ಹಾಲ್‌ನಲ್ಲಿ ಜಿಲ್ಲಾ ವಕೀಲರ ಸಂಘದಿಂದ ನಡೆದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

* 2012ರ ಮೇ 18ರಂದು 'ಹೃದಯದಿಂದ ಹೃದಯಕ್ಕೆ' ಕುರಿತು ಜೆಎಸ್‌ಎಸ್‌ನಲ್ಲಿ ಉಪನ್ಯಾಸ ನೀಡಿದ್ದರು. ಅಂದೇ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ ಮಕ್ಕಳ ಮತ್ತು ಹಿರಿಯರ ಭಾಷಾವೈಕಲ್ಯ ಚಿಕಿತ್ಸಾ ಕೇಂದ್ರ, ಮಾನವಿಕ ಪ್ರಯೋಗಾಲಯ ಹಾಗೂ ನರಸಂಬಂಧಿ ಪ್ರಯೋಗಾಲಯವನ್ನು ಕಲಾಂ ಲೋಕಾರ್ಪಣೆಗೊಳಿಸಿದ್ದರು.

ಜತೆ ಡಿಎಫ್‌ಆರ್‌ಎಲ್‌ನ ಸುವರ್ಣ ಮಹೋತ್ಸವ ಸಮಾರಂಭದಲ್ಲಿ ಭಾಗವಹಿಸಿದ್ದರು.

* 2013ರ ಮಾರ್ಚ್ 23ರಂದು ಶಾರದಾವಿಲಾಸ ವಿದ್ಯಾಸಂಸ್ಥೆಯಲ್ಲಿ ನಡೆದ 150ನೇ ವರ್ಷಾಚರಣೆಯಲ್ಲಿ ಭಾಗವಹಿಸಿ ಡಿ ಫಾರ್ಮಗೆ ಚಾಲನೆ ನೀಡಿದ್ದರು. ಮಹಾಜನ ವಿದ್ಯಾಸಂಸ್ಥೆ ಅಮೃತ ಮಹೋತ್ಸವದ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿದ್ದರು. ಸಂತ ಫಿಲೋಮಿನಾ ಕಾಲೇಜಿನಲ್ಲಿ ಏರ್ಪಡಿಸಿದ್ದ ವಿದ್ಯಾರ್ಥಿಗಳ ಕಾರ್ಯಕ್ರಮ, ಕಲಾಮಂದಿರದಲ್ಲಿ ನಡೆದ ಸರ್ಕಾರಿ ಕಾರ್ಯಕ್ರಮವೊಂದರಲ್ಲಿಯೂ ಉತ್ಸಾಹದಿಂದ ಭಾಗವಹಿಸಿದ್ದರು.

**(ಕೃಪೆ: ವಿಜಯವಾಣಿ, 28 ಜುಲೈ 2015)**

### ಹೃದಯವಂತಿಕೆಗೆ ಸಾಕ್ಷಿ ಈ ಘಟನೆ....

ಆಟೋಗ್ರಾಫ್, ಫೋಟೋಗ್ರಾಫ್ ಏನಿದ್ದರೂ ವೆಬ್‌ಸೈಟ್‌ನಲ್ಲಿ. ನೀವು ನನ್ನ ವೆಬ್‌ಸೈಟ್‌ಗೆ ಮೆಸೇಜ್ ಕಳುಹಿಸಿದರೆ ನಿಮಗೆ ಆಟೋಗ್ರಾಫ್, ಫೋಟೋಗ್ರಾಫ್ ನಿಶ್ಚಿತವಾಗಿಯೂ ಕಳುಹಿಸುತ್ತೇನೆ....

'ಆಟೋಗ್ರಾಫ್ ಪ್ಲೀಸ್' ಎಂದು ಬೇಡಿಕೆ ಮುಂದಿಡುತ್ತಿದ್ದ ನಗರದ ಎಸ್‌ಜೆಸಿಇ ವಿದ್ಯಾರ್ಥಿಗಳಿಗೆ ಮಾಜಿ ರಾಷ್ಟ್ರಪತಿ ಡಾ. ಎಪಿಜೆ ಅಬ್ದುಲ್ ಕಲಾಂ ನೀಡಿದ ಉತ್ತರವಿದು. ನಗರದ ಶ್ರೀ ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜಿನ ಸುವರ್ಣ ಮಹೋತ್ಸವ ಸಮಾರಂಭದಲ್ಲಿ ಮಾರ್ಚ್ 31 ರಂದು ಭಾಗವಹಿಸಿದ್ದ ಕಲಾಂ ಅವರ ಬಳಿ ಆಟೋಗ್ರಾಫ್ ಪಡೆಯಲು ವಿದ್ಯಾರ್ಥಿಗಳು ದುಂಬಾಲು ಬಿದ್ದರು. ಆದರೆ ಬಿಡುವಿಲ್ಲದ ಕಾರ್ಯಕ್ರಮದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ ಕಲಾಂ 'ಆಟೋಗ್ರಾಫ್, ಫೋಟೋಗ್ರಾಫ್ ಏನಿದ್ದರೂ ವೆಬ್‌ಸೈಟ್‌ನಲ್ಲಿ' ಎಂದು ಉತ್ತರಿಸಿ ವೇದಿಕೆಯಿಂದ ನಿರ್ಗಮಿಸಲು ಅಣಿಯಾದರು.

ವೇದಿಕೆಯ ಮೆಟ್ಟಿಲು ಇಳಿದು ಬರುತ್ತಿದ್ದಂತೆಯೇ 'ಆಟೋಗ್ರಾಫ್ ಪ್ಲೀಸ್....' ಎಂಬ ಮತ್ತದೇ ಕೂಗು ಕಲಾಂ ಅವರ ಕಿವಿಗೆ ಬಿದ್ದಿತು. ಯಾರು ಮತ್ತೆ ಆಟೋಗ್ರಾಫ್‌ಗೆ ಬೇಡಿಕೆ ಮುಂದಿಡುತ್ತಿದ್ದಾರೆಂದು ಕಲಾಂ ತಿರುಗಿ ನೋಡುವಾಗ ಅವರ ಕಣ್ಣಿಗೆ ಕಂಡದ್ದು ಅಂಗವಿಕಲ ಮಕ್ಕಳು. ತಕ್ಷಣ ಅಂಗವಿಕಲ ಮಕ್ಕಳ ಬಳಿಗೆ ತೆರಳಿದ ಕಲಾಂ ಮಕ್ಕಳನ್ನು ಮಾತನಾಡಿಸಿ ಅವರ ಬದುಕಿನಲ್ಲಿ ಸ್ಫೂರ್ತಿ ತುಂಬಿದ್ದು ಮಾತ್ರವಲ್ಲದೆ ಪ್ರತಿಯೊಂದು ಅಂಗವಿಕಲ ಮಕ್ಕಳಿಗೆ ಆಟೋಗ್ರಾಫ್ ನೀಡಿ ಸ್ಥಳದಿಂದ ನಿರ್ಗಮಿಸಿದರು. ಇದು ಕಲಾಂ ಅವರ ಹೃದಯವಂತಿಕೆಗೆ ಸಾಕ್ಷಿ. ಕಲಾಂ ಅವರ ಸರಳ ವ್ಯಕ್ತಿತ್ವಕ್ಕೆ ಸಾಕ್ಷಿಯಾದ ಘಟನೆಯೊಂದು 2012ರಲ್ಲಿ ನಗರದಲ್ಲಿ ನಡೆಯಿತು. ಮೇ 18ರಂದು ಅಬ್ದುಲ್ ಕಲಾಂ ಮೈಸೂರು ನಗರದ ಡಿಎಫ್‌ಆರ್‌ಎಲ್‌ನ ಸುವರ್ಣ ಮಹೋತ್ಸವ ಸಮಾರಂಭದಲ್ಲಿ ಭಾಗವಹಿಸಲು ಆಗಮಿಸಿದ್ದರು. ರಾಷ್ಟ್ರಪತಿಗೆ ವಿಶೇಷ ಸಿಂಹಾಸನದ ರೀತಿಯ ಕುರ್ಚಿ ಸಿದ್ಧಪಡಿಸಲಾಗಿತ್ತು. ಆದರೆ, ಅವರದರಲ್ಲಿ ಕುಳಿತುಕೊಳ್ಳಲು ಆಸಕ್ತಿ ತೋರದೆ ಸಾಮಾನ್ಯ ಕುರ್ಚಿಯಲ್ಲಿ ಕುಳಿತು ಸರಳತೆ ಮೆರೆದರು.

**(ಕೃಪೆ: ವಿಜಯವಾಣಿ, 28 ಜುಲೈ 2015)**

# ಕಲಾಂ ಸರ್ ಜೊತೆಗೆ ಕೊನೆಯ ದಿನ....

**ಸೃಜನ್ ಪಾಲ್ ಸಿಂಗ್**

(ಅಬ್ದುಲ್ ಕಲಾಂ ಅವರಿಗೆ ಆರು ವರ್ಷಗಳಿಂದ ಸಲಹೆಗಾರರಾಗಿದ್ದ ಸೃಜನ್ ಪಾಲ್ ಸಿಂಗ್, ಆ ಹಿರಿಯ ಜೀವದ ಜತೆಗಿನ ತಮ್ಮ ನೆನಪಿನ ಬುತ್ತಿಯನ್ನು ತೆರೆದಿಟ್ಟಿದ್ದಾರೆ....)

**ನಾ**ವು ಕಡೆಯ ಬಾರಿ ಮಾತನಾಡಿ ಆಗಲೇ 8 ಗಂಟೆಗಳಾದವು. ನಿದ್ದೆ ಸನಿಹ ಸುಳಿಯುತ್ತಿಲ್ಲ, ನೆನಪುಗಳೆಲ್ಲ ಅಂತರ್ಯವನ್ನು ಕಲಕಿ, ಕೆಲವೊಮ್ಮೆ ಕಣ್ಣೀರಾಗಿ ಜಾರುತ್ತಿವೆ. ಜುಲೈ 27ರ ನಮ್ಮ ದಿನ ಶುರುವಾಗಿದ್ದು ಮಧ್ಯಾಹ್ನ 12 ಗಂಟೆಗೆ ಗೌಹಾಟಿಗೆ ಹೊರಟಿದ್ದ ವಿಮಾನದಲ್ಲಿ, ಡಾ. ಕಲಾಂ 1ಎ ಸೀಟಿನಲ್ಲಿದ್ದರು. ನಾನು ಅವರ ಪಕ್ಕದ 1ಸಿಯಲ್ಲಿ ಕುಳಿತಿದ್ದೆ. ಅವರ ಕಪ್ಪು ಬಣ್ಣದ ಸೂಟ್‌ಅನ್ನು ಮೆಚ್ಚುತ್ತಾ "ಕಲರ್ ಚೆನ್ನಾಗಿದೆ!" ಎಂದು ಹೊಗಳಿದ್ದೆ. ಆದರೆ ಅದು ಅವರ ಮೈ ಮೇಲಿನ ಕಡೆಯ ಬಣ್ಣವಾಗಲಿದೆ ಎನ್ನುವ ಕಿಂಚಿತ್ ಕಲ್ಪನೆಯೂ ಆಗ ನನಗಿರಲಿಲ್ಲ.

ಮಳೆಗಾಲದ ಎರಡೂವರೆ ಗಂಟೆಗಳ ವಿಮಾನಯಾನವದು. ನನಗೆ ಟರ್ಬಲೆನ್ಸ್ ಅಂದರೆ ಆಗದು, ಅವರಿಗೆ ಅದೆಲ್ಲಾ ಅಭ್ಯಾಸವಾಗಿತ್ತು. ಪ್ರತಿ ಬಾರಿಯೂ ವಿಮಾನ ಅಲುಗಾಡುವಾಗೆಲ್ಲ ನಾನು ತತ್ತರಿಸುತ್ತಿದ್ದೆ. ಇದನ್ನು ನೋಡಿ ಕಲಾಂ ಕಿಟಕಿ ಮುಚ್ಚಿ "ನಿನ್ನ ಭಯ ಕಾಣೆಯಾಯಿತು ನೋಡು," ಅನ್ನುತ್ತಿದ್ದರು.

ಗೌಹಾಟಿಯಿಂದ ನಾವಿಬ್ಬರೂ ಐಐಎಂ ಶಿಲ್ಲಾಂಗ್‌ಗೆ ಕಾರಿನಲ್ಲಿ ಹೊರಟೆವು. ಎರಡೂವರೆ ತಾಸಿನ ಹಾದಿ. 5 ಗಂಟೆಗಳ ಈ ಎರಡೂ ಪಯಣಗಳಲ್ಲಿ ನಮ್ಮ ನಡುವೆ ಅನೇಕ ವಿಷಯಗಳ ಬಗ್ಗೆ ಚರ್ಚೆಗಳಾದವು. ಕಳೆದ ಆರು ವರ್ಷಗಳಲ್ಲಿ ಇಂಥ ನೂರಾರು ದೀರ್ಘಯಾನಗಳಲ್ಲಿ ನಾವು ಜೊತೆಯಾಗಿದ್ದೆವು.

ಪ್ರತಿ ಪಯಣದಂತೆ ಇದೂ ಕೂಡ ವಿಶೇಷವಾಗಿತ್ತು. ಅದರಲ್ಲೂ ಮೂರು ಮುಖ್ಯ ಸಂಗತಿಗಳು ನಮ್ಮ ಪಯಣದ ಚಿರ ನೆನಪುಗಳಾಗಿ ಉಳಿಯಲಿವೆ.

ಮೊದಲನೆಯದಾಗಿ, ಪಂಜಾಬ್‌ನಲ್ಲಾದ ಉಗ್ರರ ದಾಳಿಯ ಬಗ್ಗೆ ಕಲಾಂ ಬಹಳ ಕಳವಳಗೊಂಡಿದ್ದರು. ಅಮಾಯಕ ಜೀವಗಳ ಸಾವು ಅವರನ್ನು ದುಃಖಕ್ಕೆ ದೂಡಿತ್ತು. ಐಐಎಂ ಶಿಲ್ಲಾಂಗ್‌ನಲ್ಲಿ ಅವರು 'ವಾಸಯೋಗ್ಯ ಗ್ರಹ' ಎಂಬ ವಿಷಯದ ಮೇಲೆ ಉಪನ್ಯಾಸ ನೀಡುವವರಿದ್ದರು. ಪಂಜಾಬ್ ಘಟನೆಯನ್ನು ಇದಕ್ಕೆ ಬೆಸೆಯುತ್ತಾ,

"ಪರಿಸರ ಮಾಲಿನ್ಯದಷ್ಟೇ ಮಾನವ ನಿರ್ಮಿತ ಶಕ್ತಿಗಳು ಭೂಮಿಯ ಜೀವಂತಿಕೆಗೆ ಅಪಾಯಕಾರಿಯೆನಿಸುತ್ತಿವೆ" ಎಂದರು.

ನಮ್ಮ ಎರಡನೆಯ ಚರ್ಚೆ ರಾಷ್ಟ್ರಕ್ಕೆ ಸಂಬಂಧಿಸಿದ್ದಾಗಿತ್ತು. ಪ್ರಜಾಪ್ರಭುತ್ವದ ಅತ್ಯುನ್ನತ ಸಂಸ್ಥೆಯಾದ ಸಂಸತ್ತು ಪದೇಪದೆ ನಿಷ್ಕ್ರಿಯವಾಗುತ್ತಿರುವುದರ ಬಗ್ಗೆ ಕಳೆದ ಎರಡು ಮೂರು ದಿನಗಳಿಂದ ಚಿಂತೆಗೀಡಾಗಿದ್ದರು ಕಲಾಂ. "ನಾನು ನನ್ನ ಅವಧಿಯಲ್ಲಿ ಎರಡು ವಿಭಿನ್ನ ಸರ್ಕಾರಗಳನ್ನು ನೋಡಿದ್ದೇನೆ. ಕಲಾಪಗಳಿಗೆ ಅಡ್ಡಿಪಡಿಸುವ ಸಂಪ್ರದಾಯ ಮುಂದುವರಿದೇ ಇದೆ. ಸಂಸತ್ತು ಅಭಿವೃದ್ಧಿಪಥದಲ್ಲಿ ಸಾಗುವಂಥ ಮಾರ್ಗವನ್ನು ಹುಡುಕಬೇಕಿದೆ" ಎಂದರು. ಅದಾದ ನಂತರ ಅವರು ಐಐಎಂ ವಿದ್ಯಾರ್ಥಿಗಳಿಗೆ ಸರ್ಪ್ರೈಸ್ ಪ್ರಶ್ನೆಗಳನ್ನು ಸಿದ್ಧಪಡಿಸು ಎಂದು ನನಗೆ ಹೇಳಿದರು. "ನಮ್ಮ ಸಂಸತ್ತು ಹೆಚ್ಚು ಫಲಪ್ರದವಾಗಿ ಮತ್ತು ಹುರುಪಿನಿಂದ ಕಾರ್ಯ ನಿರ್ವಹಿಸುವಂತೆ ಮಾಡುವ ಮೂರು ವಿನೂತನ ಐಡಿಯಾಗಳನ್ನು ಸೂಚಿಸಿ" ಎಂದು ತಮ್ಮ ಉಪನ್ಯಾಸದ ಕೊನೆಯಲ್ಲಿ ವಿದ್ಯಾರ್ಥಿಗಳನ್ನು ಕೇಳಲು ಕಲಾಂ ಬಯಸಿದ್ದರು. ಆದರೆ ತುಸುಹೊತ್ತು ಯೋಚಿಸಿ, ನನ್ನೆಡೆಗೆ ತಿರುಗಿ ಅಂದರು, "ಇದಕ್ಕೆ ನನ್ನ ಬಳಿಯೇ ಪರಿಹಾರವಿಲ್ಲ. ಹೀಗಿದ್ದಾಗ ಅವರನ್ನು ಹೇಗೆತಾನೆ ಕೇಳಲಿ"?

ಇನ್ನು ಮೂರನೆಯ ಸಂಗತಿ ಅವರ ವಿನಮ್ರ ಗುಣಕ್ಕೆ ಸಂಬಂಧಪಟ್ಟದ್ದು. 6-7 ಕಾರುಗಳ ಬೆಂಗಾವಲಿನಲ್ಲಿ ನಾವಿದ್ದೆವು. ನಾನು ಮತ್ತು ಡಾ. ಕಲಾಂ ಇದ್ದದ್ದು 2ನೆಯ ಕಾರಿನಲ್ಲಿ. ಮುಂದಿದ್ದ ತೆರೆದ ಜಿಪ್ಸಿ ಮೂವರು ಸೈನಿಕರನ್ನು ಹೊತ್ತು ಸಾಗಿತ್ತು. ಇಬ್ಬರು ಕುಳಿತಿದ್ದರೆ, ನೀಳಕಾಯದ ಒಬ್ಬ ಸೈನಿಕ ಮಾತ್ರ ಗನ್ ಹಿಡಿದುಕೊಂಡು ನಿಂತಿದ್ದ. ಅದಾಗಲೇ ನಮ್ಮ ಕಾರು ರಸ್ತೆಗಿಳಿದು ಒಂದು ತಾಸಾಗಿತ್ತು. ಕಲಾಂ ಪೇಚಾಡಲು ಶುರುಮಾಡಿದರು. "ಅವನೇಕೆ ನಿಂತಿದ್ದಾನೆ? ನಿಂತೂ ನಿಂತೂ ದಣಿವಾಗುತ್ತದೆ. ಇದು ನಿಜಕ್ಕೂ ಶಿಕ್ಷೆಯಿದ್ದಂತೆ. ಆತನಿಗೆ ಕುಳಿತುಕೊಳ್ಳಬೇಕೆಂದು ವೈರ್‌ಲೆಸ್ ಸಂದೇಶ ಕಳುಹಿಸಲು ಹೇಳು."

ಭದ್ರತೆಯ ದೃಷ್ಟಿಯಿಂದ ಹಾಗೆ ನಿಲ್ಲಲು ಆತನಿಗೆ ಆದೇಶವಿರಬಹುದು ಎಂದು ಅವರಿಗೆ ವಿವರಿಸಲು ಪ್ರಯತ್ನಿಸಿದೆ. ಆದರೆ ಅವರು ಪಟ್ಟು ಸಡಿಲಿಸಲಿಲ್ಲ. ನಂತರ ರೇಡಿಯೋ ಮೆಸೇಜ್ ಕಳುಹಿಸಲು ಪ್ರಯತ್ನಿಸಿದೆವು. ಪ್ರಯೋಜನವಾಗಲಿಲ್ಲ. ಮುಂದಿನ ಒಂದೂವರೆ ಗಂಟೆಗಳಲ್ಲಿ ಅವರು ಮೂರು ಬಾರಿ ನನಗೆ ಹೇಳಿದರು; ಕೈಸನ್ನೆಮಾಡಿ ಅವನಿಗೆ ಕುಳಿತುಕೊಳ್ಳೋದಕ್ಕೆ ಹೇಳು!

ಕೊನೆಗೆ ಭದ್ರತಾ ಪಡೆ ನಮ್ಮ ಮಾತು ಕೇಳುವುದಿಲ್ಲ ಎಂದು ಅರಿವಾದಾಗ, 'ನಾನು ಆತನನ್ನು ಭೇಟಿಯಾಗಿ ಧನ್ಯವಾದ ಹೇಳಬೇಕು' ಎಂದರು ಕಲಾಂ.

ಐಐಎಂ ಶಿಲ್ಲಾಂಗ್‌ಗೆ ಬಂದಿಳಿದ ನಂತರ, ಸೆಕ್ಯುರಿಟಿಯವರ ಬಳಿ ತೆರಳಿ ಆ



ವ್ಯಕ್ತಿಯನ್ನು ಹುಡುಕಿ, ಕಲಾಂ ಇದ್ದ ಕೋಣೆಗೆ ಕರೆದೊಯ್ದೆ. ಆ ಸೈನಿಕನ ಕೈ ಕುಲುಕಿ ಥ್ಯಾಂಕ್ಯೂ ಹೇಳಿದ ಕಲಾಂ, "ದಣಿದಿದ್ದೀಯಾ? ಏನಾದರೂ ತಿನ್ನಲು ತರಿಸಲೇ? ನನ್ನಿಂದಾಗಿ ನೀನು ಅಷ್ಟು ಹೊತ್ತು ನಿಲ್ಲಬೇಕಾಯಿತು. ಕ್ಷಮಿಸಪ್ಪ" ಅಂದರು. ಕಪ್ಪು ಕೋಟು ಧರಿಸಿದ್ದ ಆ ಯುವಕ ಕಲಾಂರ ವರ್ತನೆಯಿಂದ ಚಕಿತನಾದ. ಅವನಿಗೆ ಏನು ಮಾತನಾಡಬೇಕೋ ತೋಚಲಿಲ್ಲ. "ಸರ್, ಆಪ್‌ಕೇ ಲಿಯೇ 6 ಘಂಟೇ ಭೀ ಖಡೇ ರಹೇಂಗೇ," (ಸರ್ ನಿಮಗಾಗಿ 6 ತಾಸಾದರೂ ನಿಲ್ಲುತ್ತೇವೆ) ಅಂದ.

ಇದಾದ ನಂತರ ನಾವು ಉಪನ್ಯಾಸ ನಡೆಯಲಿದ್ದ ಸಭಾಂಗಣಕ್ಕೆ ಸಮಯಕ್ಕೆ ಸರಿಯಾಗಿ ಹೊರಟೆವು. ವಿದ್ಯಾರ್ಥಿಗಳನ್ನು ಯಾವತ್ತೂ ಕಾಯಿಸಬಾರದು ಎಂದು ಯಾವಾಗಲೂ ಹೇಳುತ್ತಿದ್ದರು ಕಲಾಂ. ತ್ವರಿತವಾಗಿ ಅವರ ಮೈಕ್ ಸರಿಪಡಿಸಿ, ಉಪನ್ಯಾಸದ ಸಾರಾಂಶವನ್ನು ಮತ್ತೊಮ್ಮೆ ನೆನಪಿಸಿ, ಕಂಪ್ಯೂಟರ್‌ನ ಮುಂದೆ ಹೋಗಿ ಕುಳಿತೆ. ಮೈಕ್ ಅಳವಡಿಸುತ್ತಿದ್ದಂತೆ ಅವರು ನಕ್ಕು - "ಫನ್ನಿ ಗೈ! ಎಲ್ಲಾ ಹೇಗೆ ನಡೀತಿದೆ?" ಅಂದರು. ಕಲಾಂ 'ಫನ್ನಿ ಗೈ' ಅಂದರೆಂದರೆ, ಪ್ರತಿಬಾರಿಯೂ ಆ ಮಾತಿಗೆ ಒಂದೊಂದು ಅರ್ಥವಿರುತ್ತಿತ್ತು. ಅವರ ಈ 'ಫನ್ನಿ ಗೈ' ಎಂಬ ಮಾತಿನ ಅರ್ಥವನ್ನು ಥಟ್ಟನೆ ಗ್ರಹಿಸುತ್ತಿದ್ದೆ

ಫನ್ನಿ ಗೈ! ಎಲ್ಲಾ ಹೇಗೆ ನಡೀತಿದೆ? ಎಂದು ಅವರು ಕೇಳಿದಾಗ, ನಸುನಕ್ಕು ಹೂಂ ಅಂದೆ. ಅವರು ನನ್ನೊಂದಿಗೆ ಆಡಿದ ಕೊನೆಯ ಮಾತದು. ಉಪನ್ಯಾಸ ಆರಂಭವಾಗಿ ಎರಡೇ ನಿಮಿಷವಾಗಿತ್ತು. ವಾಕ್ಯವೊಂದನ್ನು ಮುಗಿಸಿದ ನಂತರ ಕಲಾಂ ಅದೇಕೋ ಸುಮ್ಮನಾದರು. ಏನಾಯಿತೆಂದು ತಲೆಯೆತ್ತಿ ನೋಡಿದೆ. ಅವರು ಕುಸಿದುಬಿದ್ದರು. ಕೂಡಲೇ ಓಡಿ ಅವರನ್ನು ಹಿಡಿದುಕೊಂಡೆವು. ಅರ್ಧ ಮುಚ್ಚಿದ್ದ ಅವರ ಕಣ್ಣುಗಳನ್ನೂ ನಾನೆಂದಿಗೂ ಮರೆಯಲಾರೆ. ಅವರ ತಲೆಯನ್ನು ಒಂದು ಕೈಯಲ್ಲಿ ಹಿಡಿದುಕೊಂಡು ತೋಚಿದಷ್ಟು ಸಹಾಯ ಮಾಡಲು ಪ್ರಯತ್ನಿಸಿದೆ. ಅವರ ಕೈಗಳು ನನ್ನ ಬೆರಳುಗಳನ್ನು ಬಿಗಿಯಾಗಿ ಹಿಡಿದಿದ್ದವು. ಕಲಾಂ ಮಾತನಾಡಲೇ ಇಲ್ಲ. ಅವರಲ್ಲಿ ನೋವಿನ ಛಾಯೆ ಇಣುಕಲಿಲ್ಲ. ಅದ್ಯಾವುದೋ ಸಂಕಲ್ಪವೊಂದು ಮಾತ್ರ ಸ್ಪಷ್ಟವಾಗಿ ಸುಳಿಯುತ್ತಿತ್ತು.

5 ನಿಮಿಷದಲ್ಲಿಯೇ ನಾವು ಸನಿಹದ ಆಸ್ಪತ್ರೆಯಲ್ಲಿದ್ದೆವು. ಇದಾದ ಕೆಲವೇ ಹೊತ್ತಿನಲ್ಲಿ ಕ್ಷಿಪಣಿ ಮಾನವ ನಮ್ಮನ್ನು ಶಾಶ್ವತವಾಗಿ ತೊರೆದು ಹೋಗಿದ್ದಾನೆ ಎಂಬ ಸಂದೇಶ ಬಂತು. ಕೊನೆಯ ಬಾರಿ ಅವರ ಪಾದಗಳನ್ನು ಸ್ಪರ್ಶಿಸಿದೆ. ವಿದಾಯ ಹಿರಿಯ ಗೆಳೆಯ! ವಿದಾಯ ಮಹೋನ್ನತ ಮಾರ್ಗದರ್ಶಿ!

ಕಲಾಂ ಆಗಾಗ ನನ್ನನ್ನು ಕೇಳುತ್ತಿದ್ದರು-ನೀನಿನ್ನೂ ಯುವಕ. ಮುಂದೆ ಯಾವ ರೀತಿಯಲ್ಲಿ ನಿನ್ನನ್ನು ಜನ ನೆನಪಿನಲ್ಲಿಟ್ಟುಕೊಳ್ಳಬೇಕು ಎಂದು ನಿರ್ಧರಿಸಿದ್ದೀಯಾ?

ಈ ಪ್ರಶ್ನೆಗೆ ಹೊಸ ಹೊಸ ಉತ್ತರಗಳನ್ನು ಹುಡುಕುತ್ತಲೇ ಇದ್ದೆ. ಕಡೆಗೊಂದು ದಿನ ಉತ್ತರ ಹುಡುಕುವ ಪ್ರಯತ್ನ ಬಿಟ್ಟು, ಅದೇ ಪ್ರಶ್ನೆಯನ್ನು ಅವರತ್ತ ಹರಿಬಿಟ್ಟೆ.

"ಮೊದಲು ನೀವು ಹೇಳಿ. ನಿಮ್ಮನ್ನು ಯಾವ ರೀತಿಯಲ್ಲಿ ನೆನಪಿಸಿಕೊಳ್ಳಬೇಕು ಅಂತ ಬಯಸುತ್ತೀರಿ? ರಾಷ್ಟ್ರಪತಿಯೆಂದೋ, ವಿಜ್ಞಾನಿಯೆಂದೋ, ಲೇಖಕನೆಂದೋ, ಕ್ಷಿಪಣಿ ಮಾನವನೆಂದೋ, ಇಂಡಿಯಾ 2020-ಟಾರ್ಗೆಟ್ 3 ಬಿಲಿಯನ್ ಎಂಬ ಪರಿಕಲ್ಪನೆಯ ಜನಕನೆಂದೋ?"

ಹಲವು ಆಯ್ಕೆಗಳನ್ನು ಎದುರಿಟ್ಟು ಈ ಪ್ರಶ್ನೆಯನ್ನು ಸರಳಗೊಳಿಸಿದ್ದೇನೆ ಎಂದು ಭಾವಿಸಿದ್ದೆ. ಆದರೆ ಕಲಾಂ ಅನಿರೀಕ್ಷಿತ ಉತ್ತರವನ್ನು ನನ್ನೆದುರಿಗೆಸೆದರು.

**'ಶಿಕ್ಷಕನೆಂದು'!**

ಎರಡು ವಾರಗಳ ಹಿಂದೆ ಅವರು ವಿಜ್ಞಾನಿಯಾಗಿದ್ದಾಗಿನ ದಿನಗಳ ಬಗ್ಗೆ ಮಾತನಾಡುತ್ತಾ ಕುಳಿತಿದ್ದೆವು. ಆಗ ಅವರಂದರು- "ಹಿರಿಯರು ರೋಗಪೀಡಿತರಾಗಿ ದೀರ್ಘಕಾಲದವರೆಗೆ ನರಳುತ್ತಾ ಸಾಯಬಾರದು. ಕೆಲಸ ಮಾಡುತ್ತಾ, ನಿಂತಲ್ಲೇ ಕಣ್ಣು ಮುಚ್ಚುವ ಅದೃಷ್ಟ ಮಾಡಿರಬೇಕು. ಕೊನೆಯ ವಿದಾಯವೆಂಬುದು ಬಹಳ ಬೇಗನೇ ಮುಗಿದುಹೋಗಬೇಕು."

ಈಗ ಹಿಂತಿರುಗಿ ನೋಡಿದಾಗ ಅರಿವಾಗುತ್ತಿದೆ; ಅವರು ತಮ್ಮ ಕೊನೆಯ ಪಯಣವನ್ನು ಶಿಕ್ಷಕನಾಗಿಯೇ ಮುಗಿಸಿದರು. ಕೊನೆಯ ಉಸಿರಿನವರೆಗೂ ಕೆಲಸ ಮಾಡುತ್ತಲೇ ಇದ್ದರು. ಒಬ್ಬ ಶ್ರೇಷ್ಠ ಶಿಕ್ಷಕನಾಗಿ ಅವರು ನಮ್ಮನ್ನು ಅಗಲಿದ್ದಾರೆ. ತಮ್ಮ ಖಾತೆಯಲ್ಲಿ ಕೇವಲ ಜನರ ಪ್ರೀತಿ ಮತ್ತು ಹಾರೈಕೆಯನ್ನಷ್ಟೇ ತುಂಬಿಸಿಕೊಂಡು ಪ್ರಪಂಚವನ್ನು ತೊರೆದಿದ್ದಾರೆ.

ಕಲಾಂ ಸರ್ ನಿಮ್ಮ ಜೊತೆಯಲ್ಲಿ ಕಳೆದ ಪ್ರತಿ ಗಳಿಗೆಯನ್ನು ಮಿಸ್ ಮಾಡಿಕೊಳ್ಳಲಿದ್ದೇನೆ. ನನ್ನನ್ನು ಅನೇಕ ಬಾರಿ ಅಚ್ಚರಿಗೆ ದೂಡಿದ ನಿಮ್ಮ ವಿನಮ್ರತೆಯನ್ನು ನಡೆ ನುಡಿಗಳ ಮೂಲಕ ನೀವು ಕಲಿಸಿದ ಪಾಠವನ್ನು ನಮ್ಮ ಪಯಣಗಳನ್ನು ನಮ್ಮ ದೀರ್ಘ ಚರ್ಚೆಗಳನ್ನು ಮಿಸ್ ಮಾಡಿಕೊಳ್ಳಲಿದ್ದೇನೆ. ನೀವು ನನ್ನಲ್ಲಿ ಕನಸು ಕಟ್ಟಿಕೊಟ್ಟಿರಿ. 'ಕನಸು ಅಸಾಧ್ಯವೆನಿಸುವಂತಿರಬೇಕು, ಇಲ್ಲದಿದ್ದರೆ ನಮ್ಮ ಸಾಮರ್ಥ್ಯದೊಂದಿಗೆ ಸಮಜಾಯಿಷಿ ಮಾಡಿಕೊಂಡಂತೆ' ಎಂದು ತೋರಿಸಿಕೊಟ್ಟಿರಿ.

ಆ ಜೀವ ನಮ್ಮನ್ನು ಬಿಟ್ಟು ಹೋಗಿದೆ, ಆದರೆ ಧ್ಯೇಯ ಮುಂದುವರಿಯಲಿದೆ....

**(ಕೃಪೆ: ವಿಜಯವಾಣಿ, 29 ಜುಲೈ 2015)**

## ಅನಾಥ ಬಾಲಕಿಯ ಎಚ್‌ಐವಿ ಪೀಡಿತ ಸಹೋದರರಿಗೆ ಸಹಾಯ ಹಸ್ತ ನೊಂದವರಿಗೆ ಸ್ಪಂದಿಸಿದ ಸಹೃದಯಿ ಡಾ. ಕಲಾಂ

ಜನಸಾಮಾನ್ಯರ ರಾಷ್ಟ್ರಪತಿ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ನಿಧನಕ್ಕೆ ದೇಶವೇ ದುಃಖತಪ್ತವಾಗಿದೆ. ಕಲಾಂ ಹೃದಯವೈಶಾಲ್ಯತೆ, ನೊಂದವರಿಗೆ ನೆರವಾದ ಬಗೆಯನ್ನು ಸ್ಮರಿಸಿ ಹಲವರು ಕಂಬನಿ ಮಿಡಿದಿದ್ದಾರೆ. 10 ವರ್ಷಗಳ ಹಿಂದೆ ಅನಾಥ ಬಾಲಕಿಯ ಎಚ್‌ಐವಿ ಪೀಡಿತ ಸಹೋದರರಿಗೆ ನೆರವು ನೀಡುವ ಮೂಲಕ ಡಾ. ಕಲಾಂ ಕುಟುಂಬಕ್ಕೆ ಪುನರ್ಜನ್ಮ ನೀಡಿದ ಬಗೆಯನ್ನು ಯುವತಿಯೊಬ್ಬಳು ಸ್ಮರಿಸಿಕೊಂಡಿದ್ದಾಳೆ.

ನನ್ನ ಪಾಲಿಗೆ ಡಾ. ಅಬ್ದುಲ್ ಕಲಾಂ ಅವರು ರಕ್ಷಕರಾಗಿ ಬಂದರು. ನನ್ನ ತಮ್ಮ ಹಾಗೂ ತಂಗಿ ಎಚ್‌ಐವಿ ಸೋಂಕು ಪೀಡಿತರು. ಸೋಂಕು ಪೀಡಿತ ತಮ್ಮ ಹಾಗೂ ತಂಗಿ ಈವರೆಗೆ ಬದುಕಿದ್ದಾರೆ ಎಂದರೆ ಸೂಕ್ತ ಸಮಯದಲ್ಲಿ ನೆರವಾದ ಕಲಾಂ ಅಂಕಲ್ ಅವರಿಗೆ ಕೃತಜ್ಞತೆ ಸಲ್ಲಿಸಲೇಬೇಕು ಎಂದು ಸುದ್ದಿಸಂಸ್ಥೆಗೆ ಮಾಹಿತಿ ನೀಡಿದ್ದಾಳೆ ಹೆಸರು ಹೇಳಲಿಚ್ಛಿಸದ ಯುವತಿ.

**ಅನಾಥೆಯ ಪತ್ರಕ್ಕೆ ರಾಷ್ಟ್ರಪತಿ ಸ್ಪಂದನೆ**

ಅನಾಥೆಯಾಗಿದ್ದ ನನ್ನ ಹಾಗೂ ಸೋಂಕು ಪೀಡಿತ ಸೋದರರ ದುಸ್ಥಿತಿ ಕುರಿತು ಕಲಾಂ ಅಂಕಲ್‌ಗೆ ಪತ್ರ ಬರೆದಿದ್ದೆ. ಇದಾದ ನಂತರ 2005ರ ಜೂನ್ ತಿಂಗಳಲ್ಲಿ ರಾಷ್ಟ್ರಪತಿ ಅವರ ಸಹಿಯುಳ್ಳ ಪತ್ರ ಹಾಗೂ 20,000 ರೂ. ಡ್ರಾಫ್ಟ್ ಅನ್ನು ಪೋಸ್ಟ್ ಮ್ಯಾನ್ ಮೂಲಕ ಪಡೆಯುವಾಗ ಅತ್ಯಂತ ಸಂತಸವಾಗಿತ್ತು ಎಂದು ಯುವತಿ ಸ್ಮರಿಸುತ್ತಾಳೆ.

10 ವರ್ಷಗಳ ಹಿಂದಿನ ಘಟನೆ. ನನ್ನ ಪೋಷಕರು ಮೃತಪಟ್ಟಿದ್ದರು. ಅನಾಥೆಯಾಗಿದ್ದ ನನಗೆ ಆಗ 11 ವರ್ಷ. ಎಚ್‌ಐವಿ ಸೋಂಕು ಪೀಡಿತರಾಗಿದ್ದ ತಮ್ಮನಿಗೆ 6 ವರ್ಷ, ತಂಗಿಗೆ 4 ವರ್ಷ. ಈ ಸಂದರ್ಭದಲ್ಲೇ ನಾನು ಕಲಾಂ ಅವರು ಜನಸಾಮಾನ್ಯರ ರಾಷ್ಟ್ರಪತಿ ಎಂಬುದನ್ನು ಮಾಧ್ಯಮಗಳ ಮೂಲಕ ತಿಳಿದಿದ್ದೆ. ಅವರು ಮಕ್ಕಳನ್ನು ಇಷ್ಟಪಡುತ್ತಾರೆ. ಈ ಹಿನ್ನೆಲೆಯಲ್ಲಿ ನಾನು ಅವರಿಗೆ ಪತ್ರ ಬರೆದೆ ಎಂದು ಕೇಂದ್ರಪಾರ ಜಿಲ್ಲೆಯ ಒಲಾವೆರ್ ಗ್ರಾಮದ ಯುವತಿ ನೆನಪಿನ ಬುತ್ತಿ ಬಿಚ್ಚಿಡುತ್ತಾಳೆ.

**ಗಡಿಪಾರು ಆದೇಶ ವಜಾ.....**

ನಾವು ಈ ದೇಶದ ನಂಬಿಕಸ್ಥ ನಾಗರೀಕರು. ಆದರೆ, ಸರ್ಕಾರ ನಮ್ಮನ್ನು ಬಾಂಗ್ಲಾದೇಶಿಗಳು ಎಂಬಂತೆ ಬಿಂಬಿಸಿ, 2005ರ ಜನವರಿ 15 ರಂದು ಭಾರತ ತೊರೆಯುವಂತೆ ನೋಟಿಸ್ ಜಾರಿಗೊಳಿಸಿತ್ತು. ಆ ನಂತರ ನಾವು ರಾಷ್ಟ್ರಪತಿ ಅಬ್ದುಲ್ ಕಲಾಂ ಅವರಿಗೆ ಪೋಸ್ಟ್‌ಕಾರ್ಡ್ ರವಾನಿಸಿದೆವು ಎಂದು ಸ್ಮರಿಸಿಕೊಂಡವರು ರಾಮ್ ನಗರ್ ಜಿಲ್ಲೆ ನಿವಾಸಿ ಪ್ರಫುಲ್ಲಾಮಿಸ್ತ್ರಿ.

ತಕ್ಷಣವೇ ಇದಕ್ಕೆ ಸ್ಪಂದಿಸಿದ ರಾಷ್ಟ್ರಪತಿಗಳು ವರದಿ ನೀಡುವಂತೆ ಸೂಚಿಸಿದರು. ತಿಂಗಳ ಬಳಿಕ ಗಡಿಪಾರು ಕ್ರಮ ಸ್ಥಗಿತಗೊಂಡಿತು. ಕಲಾಂ ಅವರ ಮಧ್ಯಪ್ರವೇಶ ದಿಂದಾಗಿಯೇ ಕೇಂದ್ರ ಸರ್ಕಾರ ಗಡಿಪಾರು ಆದೇಶವನ್ನು ವಜಾಗೊಳಿಸಿತು ಎಂಬುದು ನಮ್ಮ ನಂಬಿಕೆ. ಅವರ ನಿಧನದಿಂದ ವೈಯಕ್ತಿಕವಾಗಿ ನಮಗೆ ತುಂಬಾ ನಷ್ಟವಾಗಿದೆ ಎಂದು ಪ್ರಫುಲ್ಲಾ ಮಿಸ್ತ್ರಿ ಹೇಳುತ್ತಾರೆ.

**ಹೊಸ ಬದುಕು ಸಿಕ್ಕಿತು....**

ಕಲಾಂ ಅವರು ನಮ್ಮ ನೆರವಿಗೆ ಧಾವಿಸಿದ ಬೆನ್ನಲ್ಲೇ ಸ್ಥಳೀಯ ಆಡಳಿತ ನಮ್ಮ ಕುಟುಂಬದ ರಕ್ಷಣೆಗೆ ಮುಂದಾಯಿತು. ವಿವಿಧ ಮೂಲಗಳಿಂದ ನೆರವಿನ ಮಹಾಪೂರ ಹರಿದು ಬಂತು. ಮುಖ್ಯಮಂತ್ರಿಗಳ ಕಚೇರಿಯಿಂದ 20 ಸಾವಿರ ರೂ. ಆರ್ಥಿಕ ಅನುದಾನ ದೊರೆಯಿತು.

ರಾಷ್ಟ್ರಪತಿಯಾಗಿದ್ದ ಕಲಾಂ ಅವರ ಸೂಚನೆಯಿಂದಾಗಿ ಆರೋಗ್ಯ ಇಲಾಖೆಯ ಅಧಿಕಾರಿಗಳ ಮನಸ್ಸೂ ಬದಲಾಯಿತು. ನನ್ನ ತಮ್ಮ ಹಾಗೂ ತಂಗಿಯ ವೈದ್ಯಕೀಯ ವೆಚ್ಚಗಳನ್ನು ಇಲಾಖೆಯೇ ಪಾವತಿಸಲಾರಂಭಿಸಿತು. ನನ್ನ ತಮ್ಮ ಹಾಗೂ ತಂಗಿ ಕಳೆದೊಂದು ದಶಕದಿಂದ ಏಡ್ಸ್ ವಿರುದ್ಧ ಯಶಸ್ವಿ ಹೋರಾಟ ನಡೆಸಿದ್ದಾರೆ.

ಕಲಾಂ ಅಂಕಲ್ ಪ್ರವೇಶದಿಂದ ಅವರಿಗೆ ಹೊಸ ಬದುಕು ಸಿಕ್ಕಿದೆ. ಇದೀಗ ಕಲಾಂ ಅವರ ನಿಧನದಿಂದ ತುಂಬಾ ದುಃಖವಾಗಿದೆ. ಕುಟುಂಬದ ಸದಸ್ಯರನ್ನು ಕಳೆದುಕೊಂಡಂತಾಗಿದೆ ಎಂದು ನೋವಿನಿಂದ ನುಡಿಯುತ್ತಾಳೆ.

**(ಕೃಪೆ: ಹೊಸ ದಿಗಂತ, ಗುರುವಾರ, 30 ಜುಲೈ 2015)**

# ವಿಜ್ಞಾನಿಯಾಗಿ ಮೆರೆದ ಸಾಧನೆಗಳು

1960ರಲ್ಲಿ ಚೆನ್ನೈನ ಎಂಐಟಿಯಲ್ಲಿ ಗ್ರಾಜುಯೇಟ್ ಆದ ನಂತರ ಕಲಾಂ ಡಿಆರ್‌ಡಿಒದ ಏರೋನಾಟಿಕ್ ಡೆವೆಲಪ್‌ಮೆಂಟ್ ಎಸ್ಟಾಬ್ಲಿಷ್‌ಮೆಂಟ್‌ನ ಪ್ರಧಾನ ವಿಜ್ಞಾನಿಯಾಗಿ ಸೇರ್ಪಡೆಯಾದರು. ಅಲ್ಲಿ ಭಾರತೀಯ ಸೇನಾಪಡೆಯ ಸಣ್ಣ ಹೆಲಿಕಾಪ್ಟರ್ ಡಿಸೈನ್ ಮಾಡುವ ಮೂಲಕ ತಮ್ಮ ವೃತ್ತಿ ಆರಂಭಿಸಿದ್ದರು. ನಂತರ ಖ್ಯಾತ ಬಾಹ್ಯಾಕಾಶ ವಿಜ್ಞಾನಿ ವಿಕ್ರಂ ಸಾರಾಭಾಯಿ ಅವರೊಂದಿಗೆ ಸಹಾಯಕರಾಗಿ ಕೆಲಸ. 1969 ರಲ್ಲಿ ಕಲಾಂ ಇಸ್ರೋಗೆ ವರ್ಗಾವಣೆಗೊಂಡರು. ಅಲ್ಲಿ ಅವರು ಭಾರತದ ಮೊಟ್ಟಮೊದಲ ಸ್ವದೇಶಿ ನಿರ್ಮಿತ ಉಪಗ್ರಹ ಎಸ್‌ಎಲ್‌ವಿ-3 ಲಾಂಚ್ ವೆಹಿಕಲ್ ಪ್ರಾಜೆಕ್ಟ್ ಡೈರೆಕ್ಟರ್ ಆದರು. ಇದರಿಂದ 1980ರಲ್ಲಿ ರೋಹಿಣಿ ಉಪಗ್ರಹವನ್ನು ಯಶಸ್ವಿಯಾಗಿ ಉಡಾಯಿಸಲಾಯಿತು.

ಇಸ್ರೋಗೆ ಸೇರ್ಪಡೆಯಿಂದಾಗಿ ಕಲಾಂ ಜೀವನಕ್ಕೆ ಹೊಸದೊಂದು ತಿರುವು ದೊರೆಯಿತು. ಮೊದಲು ಅವರು 1965ರಲ್ಲಿ ಡಿಆರ್‌ಡಿಒನಲ್ಲಿ ಸ್ವತಂತ್ರವಾಗಿ ಎಕ್ಸ್‌ಪ್ಯಾಂಡಬಲ್ ರಾಕೆಟ್ ಪ್ರಾಜೆಕ್ಟ್‌ನಲ್ಲಿ ಪಾಲ್ಗೊಂಡಿದ್ದರು. 1969ರಲ್ಲಿ ಅವರು ಮತ್ತಷ್ಟು ಇಂಜಿನಿಯರ್‌ಗಳನ್ನು ಸೇರಿಸಿಕೊಂಡು ಈ ಯೋಜನೆಯನ್ನು ವಿಸ್ತರಿಸಲು ಸರ್ಕಾರದ ಮಂಜೂರಾತಿ ಪಡೆದರು.

1963-64ರಲ್ಲಿ ಅವರು ಹ್ಯಾಂಪ್ಟನ್ ವರ್ಜೀನಿಯಾದಲ್ಲಿನ ನಾಸಾದ ಲ್ಯಾಂಗ್ಲಿ ರೀಸರ್ಚ್ ಸೆಂಟರ್‌ಗೆ ಭೇಟಿ ನೀಡಿದ್ದರು. 1970-90ರ ಅವಧಿಯಲ್ಲಿ ಕಲಾಂ ಪೋಲಾರ್ ಎಸ್‌ಎಲ್‌ವಿ ಮತ್ತು ಎಸ್‌ಎಲ್‌ವಿ-3 ಪ್ರಾಜೆಕ್ಟ್‌ಗಳ ಯಶಸ್ಸಿಗೆ ಬಹುವಾಗಿ ಶ್ರಮಿಸಿದರು. ಅವರ ಶ್ರಮಕ್ಕೆ ತಕ್ಕಂತೆ ಈ ಯೋಜನೆಗಳು ಸಂಪೂರ್ಣ ಯಶಸ್ಸು ಸಾಧಿಸಿದವು. 1974ರಲ್ಲಿ ಪ್ರಸಿದ್ಧ ಅಣುವಿಜ್ಞಾನಿ ಡಾ. ರಾಜಾರಾಮಣ್ಣ ಅವರು ಕಲಾಂ ರನ್ನು ಪೋಖ್ರಾನ್-1 'ಅಣ್ವಸ್ತ್ರ ಪರೀಕ್ಷೆ'ಗೆ ಆಹ್ವಾನಿಸಿದ್ದರು. 1970ನೇ ಇಸವಿಯಲ್ಲಿ 'ಪ್ರಾಜೆಕ್ಟ್ ದೇವಿ' ಮತ್ತು 'ಪ್ರಾಜೆಕ್ಟ್ ವ್ಯಾಲಿಯಂಟ್' ಎಂಬ ಎರಡು ಯೋಜನೆಗಳನ್ನು ನಿರ್ದೇಶಿಸಿದರು. ಕೇಂದ್ರ ಸಂಪುಟದಲ್ಲಿ ಒಪ್ಪಿಗೆ ಸಿಗದಿದ್ದರೂ ಆಗಿನ ಪ್ರಧಾನಿ ಇಂದಿರಾ ಗಾಂಧಿ ಈ ಯೋಜನೆಗಳಿಗೆ ತಮ್ಮ ವಿಶೇಷ ಅಧಿಕಾರ ಬಳಸಿ ಧನಸಹಾಯ ಒದಗಿಸಿದ್ದರು.

**ಪ್ರಶಸ್ತಿ ಸಮ್ಮಾನ**

1981 - ಪದ್ಮಭೂಷಣ

1990 - ಪದ್ಮವಿಭೂಷಣ

1997 - *ಭಾರತರತ್ನ, * ಇಂದಿರಾ ಗಾಂಧಿ ರಾಷ್ಟ್ರೀಯ ಭಾವೈಕ್ಯ ಪ್ರಶಸ್ತಿ

1998 - ವೀರ ಸಾವರ್ಕರ್ ಪ್ರಶಸ್ತಿ

**ಜೀವನಪಥ**

* 1931 ಅಕ್ಟೋಬರ್ 15 ತಮಿಳುನಾಡಿನ ರಾಮೇಶ್ವರಂನಲ್ಲಿ ಜನನ.
* 1954: ತಿರುಚಿನಾಪಳ್ಳಿ ಸೇಂಟ್ ಜೋಸೆಫ್ ಕಾಲೇಜಿನಿಂದ ಭೌತಶಾಸ್ತ್ರದಲ್ಲಿ ಪದವಿ.
* 1960: ಮದ್ರಾಸ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಎಂಐಟಿ)ಯಿಂದ ಬಾಹ್ಯಾಕಾಶ ವಿಜ್ಞಾನದಲ್ಲಿ ಇಂಜಿನಿಯರಿಂಗ್ ಪದವಿ.
* 1960: ರಕ್ಷಣಾ ಸಂಶೋಧನಾ ಹಾಗೂ ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ)ಗೆ ವಿಜ್ಞಾನಿಯಾಗಿ ಸೇರ್ಪಡೆ.
* 1969: ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ)ಗೆ ವರ್ಗಾವಣೆ.
* 1980: ರೋಹಿಣಿ ಉಪಗ್ರಹವನ್ನು ಭಾರತದ ಪ್ರಪ್ರಥಮ ಸ್ವದೇಶಿ ನಿರ್ಮಿತ ಎಸ್‌ಎಲ್‌ವಿ ಉಡಾವಣಾ ವಾಹನ ಮೂಲಕ ಕಕ್ಷೆಗೆ ಸೇರಿಸಿದ ಕೀರ್ತಿ.
* 1992 ಜುಲೈ: ಪ್ರಧಾನಮಂತ್ರಿ ಅವರಿಗೆ ಮುಖ್ಯ ವೈಜ್ಞಾನಿಕ ಸಲಹೆಗಾರರಾಗಿ ನೇಮಕ.
* 1998: ಹೃದಯತಜ್ಞ ಸೋಮರಾಜು ಅವರೊಂದಿಗೆ ಸೇರಿ 'ಕೊರೊನರಿಸ್ಟೆಂಟ್' ಎಂಬ ಉಪಕರಣದ ಅಭಿವೃದ್ಧಿ.
* 25 ಜುಲೈ 2002: ಭಾರತದ 11ನೇ ರಾಷ್ಟ್ರಪತಿಯಾಗಿ ಅಧಿಕಾರ ಸ್ವೀಕಾರ.
* 2012: ಹೃದಯತಜ್ಞ ಸೋಮರಾಜು ಅವರೊಂದಿಗೆ ಸೇರಿ ಗ್ರಾಮೀಣ ಆರೋಗ್ಯ ಸೇವೆಗಾಗಿ ವಿಶೇಷ ಟ್ಯಾಬ್ಲೆಟ್ ನಿರ್ಮಾಣ.
* 2015 ಜುಲೈ 27: ಶಿಲ್ಲಾಂಗ್‌ನಲ್ಲಿ ನಿಧನ.

**ಭಾರತ ನಿರ್ಮಾಣಕ್ಕೆ 10 ಸ್ತಂಭಗಳು**

ರಾಷ್ಟ್ರಪತಿಯಾಗಿ ಅಧಿಕಾರ ಸ್ವೀಕರಿಸಿದ ನಂತರವಂತೂ ಪ್ರಜಾಪ್ರತಿನಿಧಿಗಳ ಮೂಲಕ 2020ರ ಮುನ್ನೋಟವನ್ನು ದೃಢಗೊಳಿಸುವ ಪ್ರಯತ್ನ ಮಾಡಿದರು. 3 ತಿಂಗಳ ಅವಧಿಯಲ್ಲಿ ಅವರು ಬಹುತೇಕ ರಾಜ್ಯಗಳ ಮುಖ್ಯಮಂತ್ರಿಗಳು, ಸಂಸದರು ಮತ್ತು ಹಿರಿಯ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು. ಮುನ್ನೋಟಕ್ಕೆ ಬಂದ ಪ್ರತಿಕ್ರಿಯೆ ಕಂಡು ಅವರು ಅಚ್ಚರಿಗೊಂಡರು. ಪಕ್ಷಭೇದ ಮರೆತು ಎಲ್ಲರೂ ದೇಶದ ಪ್ರಗತಿಗೆ ಬೇಕಾದ ಅತ್ಯುತ್ತಮ ಸಲಹೆಗಳನ್ನು ನೀಡಿದರು. ಹೀಗೆ ಸಂಕುಚಿತ ಭಾವನೆಗಳನ್ನು ತೊರೆದು ದೇಶದ ಬಗ್ಗೆಯೇ ಪ್ರಾಮಾಣಿಕವಾಗಿ ಚಿಂತನ-ಮಂಥನದಲ್ಲಿ ಪಾಲ್ಗೊಳ್ಳಲು ರಾಷ್ಟ್ರಪತಿ ಭವನಕ್ಕಿಂತ ಬೇರೊಂದು ಸ್ಥಳವಿಲ್ಲ ಎಂಬ ಸತ್ಯ ಅವರಿಗೆ ಗೋಚರವಾಯಿತು. ಈ ಕುರಿತು ತಮ್ಮ ಬರವಣಿಗೆಯಲ್ಲಿ ಅವರೇ ಆಶ್ಚರ್ಯ ಮತ್ತು ಆನಂದ ವ್ಯಕ್ತಪಡಿಸಿದ್ದಾರೆ. ಈ ಮಾತುಕತೆಯಲ್ಲಿ ಹಲವಾರು ಮುಖಗಳಲ್ಲಿ ಭಾರತದ ಅಭಿವೃದ್ಧಿ ಕುರಿತಂತೆ ವ್ಯಕ್ತವಾದ ಅಭಿಪ್ರಾಯಗಳನ್ನು ಕಲಾಂ ಹತ್ತು ಭಾಗಗಳಾಗಿ ವಿಂಗಡಿಸಿ ಅದನ್ನು 'ಭಾರತ ನಿರ್ಮಾಣದ ಹತ್ತು ಸ್ತಂಭಗಳು' ಎಂದು ಕರೆದಿದ್ದಾರೆ.

1. ನಗರ ಮತ್ತು ಗ್ರಾಮೀಣ ಎಂಬ ಭೇದ ಸೂಕ್ಷ್ಮ ಎಳೆಯಷ್ಟಿರಬೇಕು.
2. ವಿದ್ಯುತ್ ಮತ್ತು ಶುದ್ಧ ಜಲದ ಸಮಾನ ಹಂಚಿಕೆಯಾಗಬೇಕು.
3. ಕೃಷಿ, ಕೈಗಾರಿಕೆ ಮತ್ತು ಸೇವಾ ವಿಭಾಗ ಸಮನ್ವಯದಿಂದ ಕೆಲಸ ಮಾಡಬೇಕು.
4. ಸಾಮಾಜಿಕ ಅಥವಾ ಆರ್ಥಿಕ ಕಾರಣಕ್ಕಾಗಿ ಪ್ರತಿಭಾವಂತ ವ್ಯಕ್ತಿ ಶಿಕ್ಷಣ ಮತ್ತು ಮೌಲಿಕ ವ್ಯವಸ್ಥೆಯಿಂದ ವಂಚಿತನಾಗಬಾರದು.
5. ಅತ್ಯಂತ ಪ್ರತಿಭಾನ್ವಿತ ವಿದ್ವಾಂಸರು, ವಿಜ್ಞಾನಿಗಳು ಮತ್ತು ಹೂಡಿಕೆದಾರರಿಗೆ ದೇಶವು ದಾರಿದೀಪವಾಗಬೇಕು.
6. ಪ್ರತಿಯೊಬ್ಬರಿಗೂ ಅತ್ಯುತ್ತಮ ಆರೋಗ್ಯ ಸೌಲಭ್ಯ.
7. ಜವಾಬ್ದಾರಿಯುತ, ಪಾರದರ್ಶಕ ಮತ್ತು ಭ್ರಷ್ಟಾಚಾರಮುಕ್ತ ಸರ್ಕಾರ.
8. ಬಡತನದ ನಿವಾರಣೆ, ಅನಕ್ಷರತೆ ತೊಲಗಿಸುವಿಕೆ, ಮಹಿಳೆಯರು ಮತ್ತು ಮಕ್ಕಳ ಮೇಲಿನ ದೌರ್ಜನ್ಯ ತಡೆ ಮತ್ತು ಸಾಮಾಜಿಕ ಭದ್ರತೆ ಖಾತ್ರಿಪಡಿಸುವುದು.
9. ಸಂತೋಷ, ಸಮೃದ್ಧಿ, ಆರೋಗ್ಯ, ಸುರಕ್ಷೆ, ಶಾಂತಿ ಮತ್ತು ನೆಮ್ಮದಿಯ ಜೊತೆಗೆ ಗಣನೀಯ ಪ್ರಗತಿಯ ಹಾದಿ.
10. ಬದುಕಲು ಅತ್ಯುತ್ತಮವಾದ ಒಂದು ಭೂಭಾಗವಾಗಬೇಕು, ತನ್ನ ನಾಯಕತ್ವದ ಬಗ್ಗೆ ಹೆಮ್ಮೆಪಡುವಂತಿರಬೇಕು.

**ನಿವೃತ್ತಿ ಜೀವನದ ಮೆಟ್ಟಿಲು**

ಎಪಿಜೆ ಅಬ್ದುಲ್ ಕಲಾಂ ರಾಷ್ಟ್ರಪತಿ ಹುದ್ದೆಯಿಂದ ನಿರ್ಗಮಿಸಿದ ಬಳಿಕವೂ ಸದಾ ಒಂದಿಲ್ಲೊಂದು ಕೆಲಸದಲ್ಲಿ ನಿರತರಾಗಿದ್ದವರು. ಅಧ್ಯಯನ, ಸಂಶೋಧನೆ, ಉಪನ್ಯಾಸಕ್ಕೆ ಹೆಚ್ಚಿನ ಸಮಯವನ್ನು ಮೀಸಲಿಟ್ಟಿದ್ದರು. ಪ್ರತಿದಿನ ತಡರಾತ್ರಿವರೆಗೂ ಕೆಲಸ ಮಾಡುತ್ತಿದ್ದ ಅವರು ಬೆಳಗ್ಗೆ 6 ಗಂಟೆಗೆ ಎದ್ದು ವಾಯುವಿಹಾರಕ್ಕೆ ತೆರಳುತ್ತಿದ್ದರು. ಬಳಿಕ ತಮ್ಮ ಇ-ಮೇಲ್‌ಗಳಿಗೆ ಬಂದಿರುವ ಸಂದೇಶ ಓದಿ, ಅವುಗಳಿಗೆ ಪ್ರತಿಕ್ರಿಯೆ

ನೀಡುತ್ತಿದ್ದರು. ಐಐಟಿ, ಐಐಎಂಎಸ್ ಸೇರಿದಂತೆ ದೇಶದ ಪ್ರಮುಖ ವಿಶ್ವವಿದ್ಯಾಲಯಗಳು, ಶಿಕ್ಷಣ ಸಂಸ್ಥೆಗಳೊಂದಿಗೆ ಉತ್ತಮ ನಂಟು ಹೊಂದಿದ್ದ ಅವರು, ಅಲ್ಲಿಗೆ ತೆರಳಿ ವಿಶೇಷ ಉಪನ್ಯಾಸಗಳನ್ನು ನೀಡುತ್ತಿದ್ದರು. ಸಹಾಯಕ್ಕಾಗಿ ಐದು ಜನರನ್ನೊಳಗೊಂಡ ತಂಡವನ್ನು ನೇಮಿಸಿಕೊಂಡಿದ್ದರು.

| **ಪ್ರಮುಖ ಕೃತಿಗಳು** | **ವರ್ಷ** |
|---|---|
| * ಇಂಡಿಯಾ 2020 | 1998 |
| * ವಿಂಗ್ಸ್ ಆಫ್ ಫೈರ್ | 1999 |
| * ಇಗ್‌ನೈಟೆಟ್ ಮೈಂಡ್ | 2002 |
| * ಗೈಡಿಂಗ್ ಸೋಲ್ | 2005 |
| * ಟಾರ್ಗೆಟ್ 3 ಬಿಲಿಯನ್ | 2011 |
| * ಟರ್ನಿಂಗ್ ಪಾಯಿಂಟ್ಸ್ | 2012 |
| * ಮೈ ಜರ್ನಿ | 2013 |

**(ಕೃಪೆ: ವಿಜಯವಾಣಿ, 28 ಜುಲೈ 2015)**

**1 ಲಕ್ಷಕ್ಕೂ ಮೀರಿದ ಜನರಿಂದ ಶಿಸ್ತಿನ ನಮನ**

ಭಾರತದ ಕ್ಷಿಪಣಿ ಮಾನವ ಎಂದೇ ಖ್ಯಾತರಾಗಿದ್ದ ಕಲಾಂ ಅವರಿಂದ ಪ್ರೇರೇಪಣೆ ಪಡೆದಿದ್ದ ಲಕ್ಷಾಂತರ ಜನ ಹಾಜರಿದ್ದು ಅಂತಿಮ ನಮನ ಸಲ್ಲಿಸಿದರು. ಶಿಸ್ತಿಗೆ ಹೆಸರಾಗಿದ್ದ ಅಬ್ದುಲ್ ಕಲಾಂ ಅವರ ಅಭಿಮಾನಿಗಳು ಕೂಡ ಅಂತಿಮ ನಮನ ಸಂದರ್ಭದಲ್ಲಿ ಕೊಂಚವೂ ಶಿಸ್ತು ಮೀರಲಿಲ್ಲ. ಅಂತಿಮ ದರ್ಶನದ ಸಂದರ್ಭದಲ್ಲಿ ಸಾಲಿನಲ್ಲಿ ಸಾಗುತ್ತಿದ್ದ ಜನರು ಸಮಾಧಾನದಿಂದಲೇ ನಡೆದರು. ಅಂತಿಮ ಸಂಸ್ಕಾರದ ವೇಳೆಯೂ ಸಂಪೂರ್ಣ ಮೌನ ವಹಿಸಿದ್ದರು. ಈ ಮೂಲಕ ಜೀವಮಾನವಿಡೀ ಶಿಸ್ತನ್ನು ಬೋಧಿಸುತ್ತಿದ್ದ ಅಬ್ದುಲ್ ಕಲಾಂಗೆ ಜನರು ತಕ್ಕ ಗೌರವ ನೀಡಿದರು.

**(ಕೃಪೆ: ಹೊಸ ದಿಗಂತ, ಬೆಂಗಳೂರು, ಶುಕ್ರವಾರ 31 ಜುಲೈ 2015)**

## ಕಲಾಂಗೆ ಸಲಾಂ

**ಡಾ. ಗೀತಾ ಮಹದೇವಪ್ರಸಾದ್**

ನಮ್ಮ ನೆಚ್ಚಿನ ರಾಷ್ಟ್ರಪತಿ ಕಲಾಂರವರೆ!
ನಿಮ್ಮ ಜ್ಞಾನವು ತಾಳೆಯ ಮರದಂತೆ
ವಿಶಾಲ, ವಿನೂತನ
ಅದು ಆಗಿರಬಹುದು ಅಣು ವಿಜ್ಞಾನ, ಆಡಳಿತ
ಏನಾದರೇನಂತೆ, ನಿಭಾಯಿಸುವಿರಿ ಸುಖಾ ಸುಮ್ಮನೆ!
ನಿರಾಳ ನಿಮ್ಮ ಮನಸ್ಸು, ಉತ್ಸಾಹದ ಚಿಲುಮೆ

ಇಂದು ನಿಮಗೆ ಎಪ್ಪತ್ತನಾಲ್ಕರ ಹರಯ
ಸದಾ ಮುಂಚೂಣಿಯಲ್ಲಿರುವ ನಡೆಯ
ಯುವ ಮನಸ್ಸಿನ ಮುಗ್ಧತೆಯ ಮಾಧುರ್ಯ ನಿಮಗೆ ಒಲವು
ಅವರೆಲ್ಲರ ಮಗ್ಗುಲುಗಳ ಗಮನಿಸುವಿರಿ ಪ್ರತಿಸಲವು!

ಎಲ್ಲಾ ಕ್ಷೇತ್ರದಲ್ಲಿ ನೀವಿರುವಿರಿ
ನಿಮ್ಮ ಕೌಶಲ ಶಕ್ತಿಯನ್ನು ಮೆರೆದಿರುವಿರಿ
ಯಶಸ್ಸಿನ ಮೆಟ್ಟಿಲುಗಳನ್ನು ಏರಿರುವಿರಿ.
ನಿಧಾನವಾಗಿ ನಿಶ್ಯಬ್ದವಾಗಿ ಹಿಡಿತದಲ್ಲಿ
ಕವಿರಾಜರು ನೀವು
ಉತ್ತಮರದಲ್ಲಿ ಉತ್ತಮ ನೀವಾಗಿರುವಿರಿ!

ನಮ್ಮ ಸುತ್ತೂರು ಶ್ರೀಗಳಿಗೆ ನಾವಿಂದು ನಮಿಸುವೆವು
ನಿಮ್ಮಂತಹ ಅಪರೂಪದ 'ಕೀರ್ತಿಶಾಲಿ' ನಮ್ಮೊಂದಿಗಿರಲು
ನಿಮ್ಮ ಸಾಮೀಪ್ಯ ತಂದಿದೆ ನಮಗೆ ಎಲ್ಲಿಲ್ಲದ ಹರುಷ
ಪವಿತ್ರ ದೇಗುಲ ಸುತ್ತೂರು ಸಂಭ್ರಮಿಸಲೇಬೇಕು ವರುಷ ವರುಷ
ಅಚ್ಚುಮೆಚ್ಚಿನ ರಾಷ್ಟ್ರಪತಿಗಳಾದ ಶ್ರೀ ಕಲಾಂ,
ಇದು ನಿಮಗೆ ನಮ್ಮ ಹೃದಯಸ್ಪರ್ಶಿ ಕೋಟಿ ಕೋಟಿ ಸಲಾಂ!

**(ತಾವೇ ರಚಿಸಿ ಡಾ. ಕಲಾಂ ಅವರಿಗೆ ಕೊಟ್ಟಿದ್ದ 'ಸಲಾಂ ಟು ಕಲಾಂ' ಇಂಗ್ಲಿಷ್ ಕವನವನ್ನು ಗೀತಾ ಮಹದೇವಪ್ರಸಾದ್ ಅವರೇ ಕನ್ನಡಕ್ಕೆ ಭಾಷಾಂತರಿಸಿದ್ದಾರೆ)**



## ಕೃತಿ ಸ್ವೀಕೃತಿ

* **ಡಾ. ಫ.ಗು. ಹಳಕಟ್ಟಿಯವರ ಪತ್ರಿಕಾ ಸಾಹಿತ್ಯ** : ಡಾ. ಪಂಡಿತ್ ಕೆ. ರಾಥೋಡ್, ಸುಭಾಶ್‌ಚಂದ್ರ ಪ್ರಕಾಶನ, ಪು. 308, ಬೆಲೆ ರೂ. 450/-
* **ವಿಷಯ ವಚನ ಸಂಪುಟಗಳು (ಸಂಪುಟ 5)** : ಸಂ. ಡಾ. ಸಂಗಮೇಶ ಸವದತ್ತಿಮಠ, ಶ್ರೀ ಚೆನ್ನಬಸವೇಶ್ವರ ಸಂಸ್ಥಾನ ಹಿರೇಮಠ, ಪು. 536, ಬೆಲೆ ರೂ. 300/-
* **ವಿಷಯ ವಚನ ಸಂಪುಟಗಳು (ಸಂಪುಟ 4)** : ಸಂ. ಡಾ. ಸಂಗಮೇಶ ಸವದತ್ತಿಮಠ, ಶ್ರೀ ಚೆನ್ನಬಸವೇಶ್ವರ ಸಂಸ್ಥಾನ ಹಿರೇಮಠ, ಪು. 790, ಬೆಲೆ ರೂ. 300/-
* **ವಚನಸಾರ:** ಸಂ. ಡಾ. ವೀರಣ್ಣ ರಾಜೂರ, ಲಿಂಗಾಯಿತ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ. ಪು. 313, ಬೆಲೆ ರೂ. 350/-
* **ಶಿವಶರಣೆಯರ ಜೀವನದರ್ಶನ:** ಸಂ. ಡಾ. ವೀರಣ್ಣ ರಾಜೂರ, ಶ್ರೀ ಬಾಲಲೀಲಾ ಮಹಾಂತ ಶಿವಯೋಗೀಶ್ವರ ಗ್ರಂಥಮಾಲೆ, ಶ್ರೀ ಮುರುಘಾಮಠ, ಧಾರವಾಡ. ಪು. 232, ಬೆಲೆ ರೂ. 200/-
* **ಏಕೋತ್ತರ ಶತಸ್ಥಲ:** ಸಂ. ಡಾ. ಎಂ.ಎಂ.ಕಲಬುರ್ಗಿ, ಡಾ. ವೀರಣ್ಣ ರಾಜೂರ, ಲಿಂಗಾಯಿತ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ. ಪು. 466, ಬೆಲೆ ರೂ. 200/-
* **ಆತ್ಮನಿವೇದನೆ:** ಶ್ರೀಮತಿ ಸಂಗಮ್ಮ ವೀರಪ್ಪ ಕರವೀರ ಶೆಟ್ಟರ್, ಗ್ರಾಮೀಣ ಸಾಹಿತ್ಯ ರತ್ನಮಾಲೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಡಂಬಳ. ಪು. 76, ಬೆಲೆ ರೂ. 75/-
* **ಕಿತ್ತೂರು ಸಂಸ್ಥಾನ ಸಾಹಿತ್ಯ:** ಸಂ. ಡಾ. ಎಂ.ಎಂ. ಕಲಬುರ್ಗಿ, ಲಿಂಗಾಯಿತ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಡಂಬಳ. ಪು. 68, ಬೆಲೆ ರೂ. 750/-
* **ಬ ಗಂ ತುರಮರಿ:** ಪ್ರಕಾಶ್ ಗಿರಿಮಲ್ಲನ್‌ವರ, ಲಿಂಗಾಯಿತ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ. ಪು. 100, ಬೆಲೆ ರೂ. 50/-
* **ಬಸವರಾಜ ಹೊಸಮನಿ:** ಡಾ. ಬಸವರಾಜ ಜಗಜಂಪಿ, ಲಿಂಗಾಯಿತ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ. ಪು. 96, ಬೆಲೆ ರೂ. 30/-
* **ಗಾನಯೋಗಿ ಡಾ. ಪಂಡಿತ್ ಪುಟ್ಟರಾಜ ಗವಾಯಿಗಳು:** ಪ್ರೊ. ರಮೇಶ್ ಮ ಕಲ್ಲನಗೌಡರ, ಲಿಂಗಾಯಿತ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ. ಪು. 40, ಬೆಲೆ ರೂ. 30/-
* **ಮಾರಿಕಲ್ಲಪ್ಪ ಮಲಶೆಟ್ಟಿ:** ಡಾ. ಬಾಳಣ್ಣ ಶೀಗಿಹಳ್ಳಿ, ಲಿಂಗಾಯಿತ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ. ಪು. 40, ಬೆಲೆ ರೂ. 30/-
* **ಮುದೇನೂರು ಸಂಗಣ್ಣ:** ಪ್ರೊ. ಕೋರಗಲ್ ವಿರುಪಾಕ್ಷಪ್ಪ, ಲಿಂಗಾಯಿತ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ. ಪು. 160, ಬೆಲೆ ರೂ. 30/-

## ಪತ್ರಿಕೆಯ ಅಪೇಕ್ಷಾ ಪತ್ರ

☐ ಬಿಡಿ ಪ್ರತಿ: ₹ 10/-

☐ ವಾರ್ಷಿಕ: ₹ 100/-    ☐ ದಶವಾರ್ಷಿಕ: ₹ 500/-

ಹೆಸರು/ವಿಳಾಸ ______________________________

______________________________

______________________________

**ಜೆಎಸ್‌ಎಸ್ ಪ್ರಸಾದ ಮ್ಯಾಗಜ಼ಿನ್**
ಹೆಸರಿಗೆ ಡಿಡಿ/ಚೆಕ್/ಎಂಓ/ನಗದನ್ನು
ಸಂದಾಯ ಮಾಡಬಹುದಾಗಿದೆ

**ಪ್ರಕಟಣ ವಿಭಾಗ, ಜೆಎಸ್‌ಎಸ್ ಮಹಾವಿದ್ಯಾಪೀಠ**
ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ
ಮೈಸೂರು 570 004